ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೧೦-೧೧ನೇ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

ಶಿವಶರಣೆಯರ ವಚನಗಳಲ್ಲಿ ಸ್ವಾತಂತ್ರ್ಯ ಪ್ರಜ್ಞೆ

ನಿಬಂಧಕಾರರು
ರಮೇಶ ಎಂ.ಎನ್.
ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಕ.ವಿ.ವಿ. ಹಂಪಿ)
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು
ಡಾ. ಎಚ್.ಪಿ. ಗೀತಾ
ಕನ್ನಡ ಸಹ ಪ್ರಾಧ್ಯಾಪಕು
ಸರ್ಕಾರಿ ಪ್ರಥಮದರ್ಜೆ ಕಾಲೇಜು
ಕುವೆಂಪುನಗರ, ಮೈಸೂರು

916

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೧೦-೧೧

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬.

916

AKSHARA GRANTHALAYA

ACC.NO. 048725

916

916

ಕನ್ನಡ ವಿಶ್ವವಿದ್ಯಾಲಯ

ಹಂಪಿ

೨೦೧೦–೧೧ನೇ ಸಾಲಿನ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರಪಡಿಸುತ್ತಿರುವ ಸಂಶೋಧನಾ ನಿಬಂಧ

ಶಿವಶರಣೆಯರ ವಚನಗಳಲ್ಲಿ ಸ್ವಾತಂತ್ರ್ಯ ಪ್ರಜ್ಞೆ

ನಿಬಂಧಕಾರರು

ರಮೇಶ ಎಂ.ಎನ್.

ಕನ್ನಡ ಎಂ.ಫಿಲ್. ವಿದ್ಯಾರ್ಥಿ (ಹಂಪಿ, ಕ.ವಿ.ವಿ)

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

ಕನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ. ಹಂಪಿ

ಮಾರ್ಗದರ್ಶಕರು

ಡಾ. ಎಚ್.ಪಿ. ಗೀತಾ

ಕನ್ನಡ ಸಹ ಪ್ರಾಧ್ಯಾಪಕರು

ಸರ್ಕಾರಿ ಪ್ರಥಮದರ್ಜೆ ಕಾಲೇಜು

ಕುವೆಂಪುನಗರ, ಮೈಸೂರು

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್

ಜಯಲಕ್ಷ್ಮೀಪುರಂ, ಮೈಸೂರು

೨೦೧೦–೧೧

8K0.9
RAM S
048725

ದೃಢೀಕರಣ ಪತ್ರ

೨೦೧೦-೧೧ನೇ ಸಾಲಿನಲ್ಲಿ ಕ್ರಮಸಂಖ್ಯೆ **KVTMKS-00477**ರ ಹಂಪಿ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಯ ವಿದ್ಯಾರ್ಥಿಯಾದ **ರಮೇಶ ಎಂ.ಎನ್.** ಅವರು ನನ್ನ ಮಾರ್ಗದರ್ಶನದಲ್ಲಿ **"ಶಿವಶರಣೆಯರ ವಚನಗಳಲ್ಲಿ ಸ್ವಾತಂತ್ರ್ಯ ಪ್ರಜ್ಞೆ"** ಎಂಬ ವಿಷಯವನ್ನು ಆಯ್ಕೆಮಾಡಿಕೊಂಡು ಸಂಶೋಧನಾ ನಿಬಂಧವನ್ನು ಸಿದ್ಧಪಡಿಸಿರುತ್ತಾರೆ.

ಈ ಸಂಶೋಧನಾ ನಿಬಂಧವನ್ನು ಶ್ರೀಯುತರು ಈ ಮೊದಲು ಭಾಗಶಃವಾಗಲಿ, ಪೂರ್ಣವಾಗಿಯಾಗಲಿ ಬೇರಾವುದೇ ಪದವಿ ಅಥವಾ ಡಿಪ್ಲೊಮೋಗಳಿಗಾಗಲಿ ಒಪ್ಪಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು
೧೩-೦೬-೨೦೧೧

(ಡಾ. ಎಚ್.ಪಿ. ಗೀತಾ)
ಮಾರ್ಗದರ್ಶಕರು
ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮದರ್ಜೆ ಕಾಲೇಜು
ಕುವೆಂಪುನಗರ, ಮೈಸೂರು

ಅಂಗಡಿ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅಭ್ಯರ್ಥಿಯ ಘೋಷಣಾ ಪತ್ರ

"ಶಿವಶರಣೆಯರ ವಚನಗಳಲ್ಲಿ ಸ್ವಾತಂತ್ರ್ಯ ಪ್ರಜ್ಞೆ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಕನ್ನಡ ಎಂ.ಫಿಲ್. ಪದವಿಯ ಕ್ರಮಸಂಖ್ಯೆ **KVTMKS-00477**ರ ವಿದ್ಯಾರ್ಥಿಯಾದ ನಾನು ೨೦೧೦-೧೧ನೇ ಸಾಲಿನ ಪರೀಕ್ಷೆಗಾಗಿ ಡಾ. ಎಚ್.ಪಿ.ಗೀತಾ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು ಅವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸ್ತುತ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ವಿಶ್ವವಿದ್ಯಾನಿಲಯಗಳ ಪದವಿ, ಡಿಪ್ಲೊಮೊ ಅಥವಾ ಯಾವುದೇ ಪರೀಕ್ಷೆಗಾಗಿ ಸಲ್ಲಿಸಿರು-ವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು
ದಿನಾಂಕ: ೧೩-೦೬-೨೦೧೧

(ರಮೇಶ ಎಂ.ಎಸ್.)
೨೦೧೦-೧೧ನೇ ಸಾಲಿನ ಎಂ.ಫಿಲ್ ವಿದ್ಯಾರ್ಥಿ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಶಿವಶರಣೆಯರ ವಚನಗಳಲ್ಲಿ ಸ್ವಾತಂತ್ರ್ಯ ಪ್ರಜ್ಞೆ

ಪರಿವಿಡಿ

*****

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಕರ್ನಾಟಕದ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನ ವಿಶೇಷವಾದದ್ದು. ಅಪೂರ್ವವಾದ ಧಾರ್ಮಿಕ, ಸಾಮಾಜಿಕ ಮತ್ತು ಸಾಹಿತ್ಯಿಕ ಚಳವಳಿ ನಡೆದ ಕಾಲ ಇದಾಗಿದೆ. ಈ ಕಾಲದ ಸಮಾಜೋಧಾರ್ಮಿಕ ಚಳವಳಿಯ ಉಪಉತ್ಪನ್ನವಾಗಿ ಬಂದ ವಚನಸಾಹಿತ್ಯ ಅಮೂಲ್ಯ ರತ್ನ. ಕನ್ನಡಿಗರೆಲ್ಲರ ಸಂಪತ್ತು. ಕರ್ನಾಟಕದ ಧಾರ್ಮಿಕ ಮತ್ತು ಸಾಮಾಜಿಕ ಚರಿತ್ರೆಯಲ್ಲಿ ಮಾನವೀಯತೆ ಮತ್ತು ವೈಚಾರಿಕತೆಯ ಗಾಳಿ ಬೀಸಿದ್ದು ಶರಣಯುಗದಲ್ಲಿ. ಮನುಷ್ಯ ಮನುಷ್ಯರ ನಡುವೆ ಕಟ್ಟಿದ ಜಾತಿಗೋಡೆಗಳನ್ನು ಕೆಡವಿ, ವೈದಿಕಶಾಹಿ, ಪುರೋಹಿತಶಾಹಿ ವಿರುದ್ಧ, ಅಸಮಾನತೆಯ ವಿರುದ್ಧ ವಚನಕಾರರು ಸಂಘರ್ಷಕ್ಕಿಳಿದರು. ಹನ್ನೆರಡನೆಯ ಶತಮಾನ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ಕ್ರಾಂತಿಕಾರಕ ತಿರುವುಗಳನ್ನು ಒದಗಿಸಿದ ಘಟ್ಟವಾಗಿದೆ. ಪ್ರಭುತ್ವ ಕೇಂದ್ರಿತ ಸನ್ನಿವೇಶದಿಂದ ಹೊರಬಂದ ಕನ್ನಡ ಸಾಹಿತ್ಯ ಜನಸಾಮಾನ್ಯರ ಬದುಕು ಬವಣೆಗಳಿಗೆ ಸ್ಪಂದಿಸುತ್ತಾ ಬಂದದ್ದು ವಚನಕಾರರ ಸಂದರ್ಭದಲ್ಲಿ. ಜಾತಿವ್ಯವಸ್ಥೆಯಲ್ಲಿನ ಮೇಲು-ಕೀಳು, ಬಡವ-ಶ್ರೀಮಂತ, ಸ್ತ್ರೀಪುರುಷ ಎಂಬ ತರತಮವನ್ನ ಕಿತ್ತೊಗೆದು ಎಲ್ಲರೂ ಮುಖ್ಯವಾಹಿನಿಗೆ ಬಂದು ಮುಕ್ತವಾಗಿ ಅಭಿವ್ಯಕ್ತಿಸುವ ಸ್ವಾತಂತ್ರ್ಯವನ್ನ ಪಡೆದದ್ದು ಈ ಸಂದರ್ಭದ ಬಹುಮುಖ್ಯ ಅಂಶ.

ಸಮಾಜೋಧಾರ್ಮಿಕ ಚಳವಳಿಯ ಸಂದರ್ಭವಾದ ಹನ್ನೆರಡನೆ ಶತಮಾನದಲ್ಲಿ ಸ್ತ್ರೀಸಂವೇದನೆಯ ನೆಲೆಗಳು ಕಾಣಿಸಿಕೊಂಡವು. ಸಮಾಜದ ಎಲ್ಲಾ ವರ್ಗದ ಮಹಿಳೆಯರೂ ಚಳವಳಿಯಲ್ಲಿ ಪಾಲ್ಗೊಂಡು, ತಮ್ಮ ವಚನಗಳ ಮೂಲಕ ಸ್ವತಂತ್ರ ಚಿಂತನೆಗಳನ್ನು ಅನಾವರಣಗೊಳಿಸಿದರು. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದ ಶರಣರು ಮನುಷ್ಯ ಸಂಬಂಧಗಳನ್ನು ಸಮಾನತೆ ನೆಲೆಯಲ್ಲಿ ಕಂಡವರು. ಸರ್ವಸಮಾನತೆ, ಸರ್ವಸ್ವಾತಂತ್ರ್ಯ ಮತ್ತು ಸರ್ವೋದಯದ ಆಯಶವನ್ನು ಅನುಭವ ಮಂಟಪ ವ್ಯಕ್ತಪಡಿಸುತ್ತದೆ. ಸ್ತ್ರೀಪುರುಷ, ಪ್ರಭುಪ್ರಜೆ, ಮೇಲುಕೀಳು ಮುಂತಾದ ತರತಮಗಳ ನಡುವೆ ಸಮಾನತೆ ತಂದು ಎಲ್ಲರೂ ಸೋದರತೆಯಿಂದ ಸ್ವತಂತ್ರರಾಗಿ ಬದುಕಲು ಅವಕಾಶ ದೊರೆಯಿತು. ಇಂತಹ ಸಂದರ್ಭದಲ್ಲಿ ವಚನಕಾರ್ತಿಯರು ಮುಕ್ತವಾಗಿ ಚಿಂತಿಸಿದರು, ನಿರ್ಭೀತವಾಗಿ ಆಲೋಚಿಸಿದರು. ಆತ್ಮಸ್ಥೈರ್ಯದಿಂದ ಮುನ್ನುಗ್ಗಿದರು. ಸಮಾಜದ ಶುದ್ಧೀಕರಣದಲ್ಲಿ ತಾವೂ ಮುಕ್ತವಾಗಿ ಪಾಲ್ಗೊಂಡರು. 'ಆತ್ಮಕ್ಕೆ ಗಂಡು-ಹೆಣ್ಣು ಭೇದವಿಲ್ಲ' ಎಂಬ ಉದಾರ ಚಿಂತನೆಗಳು ಬಂದ ಕಾಲಘಟ್ಟದಲ್ಲಿ

ಶಿವಶರಣೆಯರು ತಮ್ಮ ವಚನಗಳಲ್ಲಿ ಹೇಗೆ ತಮ್ಮದೇ ಆದ ಮುಕ್ತ ಹಾಗೂ ಸ್ವತಂತ್ರ ಚಿಂತನೆಗಳನ್ನು ಮಾಡಿದ್ದಾರೆ ಎಂಬುದನ್ನು ತಿಳಿಯುವುದೇ ಉದ್ದೇಶವಾಗಿದೆ.

ಹನ್ನೆರಡನೆಯ ಶತಮಾನ ಒಂದರ್ಥದಲ್ಲಿ ಹೇಗೆ ಬಿಡುಗಡೆಯ ಕಾಲ ಎನ್ನಬಹುದು. ಸ್ತ್ರೀಯನ್ನ ಅಸ್ಪೃಶ್ಯಳನ್ನಾಗಿ, ಅಬಲೆಯನ್ನಾಗಿ ಕಾಣುತ್ತಿದ್ದ ಕಾಲದಲ್ಲಿ ಸಂಪೂರ್ಣ ಸ್ವಾತಂತ್ರ್ಯ ದೊರೆತದ್ದು ವಿಶೇಷ. ಪುರುಷನ ಜೊತೆ ಸರಿಸಮಾನಾಗಿ ವ್ಯಕ್ತಿ ಸ್ವಾತಂತ್ರ್ಯ ಪಡೆದು ಧಾರ್ಮಿಕ ಮತ್ತು ವೈಚಾರಿಕ ಚರ್ಚೆಗಳಲ್ಲಿ ಸಮಾನವಾಗಿ ಭಾಗವಹಿಸುವ ಅವಕಾಶ ಮಹಿಳೆಗೂ ದೊರೆಯಿತು. ಶತಶತಮಾನಗಳಿಂದ ನೋವನ್ನುಂಡು, ವ್ಯವಸ್ಥೆಯ ಕ್ರೌರ್ಯಕ್ಕೆ ಅವಮಾನ ಅಪವಾದಗಳಿಗೆ ತುತ್ತಾಗಿ ಅಂಜಿಕೆಯ ಜೀವನ ಸಾಗಿಸುತ್ತಿದ್ದ ಸ್ತ್ರೀ ಶರಣಯುಗದಲ್ಲಿ ಲೌಕಿಕ ಮತ್ತು ಪಾರಮಾರ್ಥಿಕ ಕ್ಷೇತ್ರಗಳೆರಡರಲ್ಲೂ ಅಸಾಮಾನ್ಯ ಸಾಧನೆಗೈದಳು. ಆಕೆಯ ಸ್ವಾಭಿಮಾನ ಪುಟಿದೆದ್ದಿತು. ಹೆಣ್ಣು ಕೇವಲ ತಾಯಿ, ಹೆಂಡತಿ, ಸೇವಕಿಯಲ್ಲ. ಅವಳಿಗೂ ಪುರುಷನಂತೆ ಸ್ವಂತಿಕೆ ಸ್ವಾತಂತ್ರ್ಯ ಸಮಾನತೆ ಬೇಕು. ಆಕೆಯೂ ಸಾಮಾಜಿಕವಾಗಿ, ವೈಚಾರಿಕವಾಗಿ ಆಧ್ಯಾತ್ಮಿಕವಾಗಿ ಚಿಂತಿಸಬಲ್ಲಳು. ಎಲ್ಲ ರಂಗ-ಗಳಲ್ಲಿಯೂ ಸಾಧಿಸಬಲ್ಲಳು ಎಂಬ ಆಕೆಯ ಚಿಂತನೆಗಳು ಶರಣೆಯರ ವಚನಗಳಲ್ಲಿ ಅಭಿವ್ಯಕ್ತಗೊಂಡಿವೆ. ಇಂತಹ ಶರಣೆಯರ ಸ್ವಾತಂತ್ರ್ಯ ಚಿಂತನೆಗಳಲ್ಲಿ ಅವರ ಕೆಲವು ವಚನಗಳನ್ನು ಆಧರಿಸಿ ಇಲ್ಲಿ ಅಧ್ಯಯನ ಮಾಡಲಾಗಿದೆ.

ಸಾಹಿತ್ಯ ರಚನೆ ಕೇವಲ ಪುರುಷರ ಹಕ್ಕಲ್ಲ ಎಂಬುದನ್ನು ಸಾರಿದ ಶರಣೆಯರು ಪುರುಷ ಸಮಾನ ಅಭಿವ್ಯಕ್ತಿ ಸ್ವಾತಂತ್ರ್ಯ ಪಡೆದರು. ಅಧಿಕ ಸಂಖ್ಯೆಯ ಮಹಿಳೆಯರು ವಚನ ರಚನೆಯ ಕೃಷಿಯಲ್ಲಿ ತೊಡಗಿದರು. ಅಕ್ಕಮಹಾದೇವಿ, ಅಕ್ಕಮ್ಮ ಅಮುಗೆರಾಯಮ್ಮ, ಆಯ್ದಕ್ಕಿ ಲಕ್ಕಮ್ಮ, ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ, ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ, ಕಾಳವ್ವೆ, ರೆಮ್ಮವ್ವೆ, ರೇಮಮ್ಮ, ರೇಚವ್ವೆ, ಕಾಮಮ್ಮ, ಲಕ್ಷ್ಮಮ್ಮ, ಸೋಮಮ್ಮ, ಗಂಗಾಂಬಿಕೆ, ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ ಕೇತಲದೇವಿ, ಗೊಗ್ಗವ್ವೆ, ವೀರಮ್ಮ ದುಗ್ಗಳೆ ನಾಗಲಾಂಬಿಕೆ ನೀಲಮ್ಮ ಗುಡ್ಡವ್ವೆ, ಬೊಂತಾದೇವಿ, ಕಾಳವ್ವೆ, ಮುಕ್ತಾಯಕ್ಕ, ಮೋಳಿಗೆ ಮಹಾದೇವಿ ರಾಯಮ್ಮ, ರೇಕಮ್ಮ ಸತ್ಯಕ್ಕ, ಸೂಳೆ ಸುಂಕವ್ವೆ, ಲಿಂಗಮ್ಮ, ಗಂಗಮ್ಮ ಈ ಮೂವತ್ತೂರು ವಚನಕಾರ್ತಿಯರ ಬಗೆಗೆ ಚರ್ಚಿಸಲಾಗಿದೆ. ದೊರೆತಿರುವ ವಚನಗಳ ಸಂಖ್ಯೆ, ಅವುಗಳ ಅಂಕಿತ, ಶರಣೆಯರ ದಾಂಪತ್ಯ ಬದುಕು, ಕಾಯಕ, ಸ್ಥಳ ಮುಂತಾದವುಗಳ ಬಗೆಗೆ ಸ್ಥೂಲವಾಗಿ ಅಧ್ಯಯನ ಮಾಡಲಾಗಿದೆ.

ವಚನಕಾಲ ಘಟ್ಟದಲ್ಲಿ ಬಸವಣ್ಣನವರ ನಾಯಕತ್ವದಲ್ಲಿ ಸ್ತ್ರೀಪುರುಷ ಭೇದರಹಿತವಾಗಿ ಎಲ್ಲರೂ ಒಟ್ಟಿಗೆ ಸೇರಿ ನವಸಮಾಜದ ನಿರ್ಮಾಣಕ್ಕೆ ಶ್ರಮಿಸಿದರು.

ವಚನಕಾರರೂ ಮಹಿಳಾಪರ ಧನಿ ಎತ್ತಿದರು. ಸ್ತ್ರೀಸ್ವಾತಂತ್ರ್ಯಕ್ಕೆ ವೇದಿಕೆ ನಿರ್ಮಿಸಿ, ಹೆಣ್ಣಿಗೆ ಬೆನ್ನುಲುಬಾಗಿ ನಿಂತರು. ಆದರ್ಶ ದಾಂಪತ್ಯ ಜೀವನ ತಡೆಸಿ ಸಾಧಿಸಿದ ಶರಣ ದಂಪತಿಗಳು ಹಲವರು. ಗಂಡಿಗೆ ಹೆಣ್ಣು, ಹೆಣ್ಣಿಗೆ ಗಂಡು ಪರಸ್ಪರ ತಿದ್ದುವ, ಎಚ್ಚರಿಸುವ ಕೆಲಸ ಮಾಡಿದರು. ಹೆಣ್ಣಿನ ಪರ ಚಿಂತಿಸಿದ ಕೆಲವು ವಚನಗಳನ್ನು ಆಧರಿಸಿ ೧೨ನೇ ಶತಮಾನದ ವಚನಕಾರರ ದೃಷ್ಟಿಯಲ್ಲಿ ಮಹಿಳೆ ಹೇಗೆ ಕಂಡಿದ್ದಾಳೆ ಎಂಬುದನ್ನು ಅಧ್ಯಯನ ಮಾಡಲಾಗಿದೆ. ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ, 'ಮನದ ಮುಂದಣ ಆಸೆಯೇ ಮಾಯೆ'. ನಡುವೆ ಸುಳಿವಾತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ, ಶರಣನಿಗೆ ಪರಪತಿಯನೊಲ್ಲೆನೆಂಬ ಛಲಬೇಕು ಮುಂತಾದ ಗಂಡು-ಹೆಣ್ಣು ಭೇದರಹಿತ ಸಮಾಜ ರಚನೆಗೆ ಚಿಂತಿಸಿದ ಪರಿ, ಸ್ತ್ರೀಗೌರವಯುತವಾಗಿ ಬದುಕಲು ಅನುವು ಮಾಡಿಕೊಟ್ಟು, ತಾನು ಮಾಡುವ ಕಾಯಕವನ್ನೇ ನಿರ್ವಹಿಸುತ್ತಾ ಸ್ವಾಭಿಮಾನವಾಗಿ ಬದುಕುವ ವಾತಾವರಣ ನಿರ್ಮಾಣವಾಗಲು ವಚನಕಾರರ ಕೊಡುಗೆ ಅಪಾರ.

ಜಾಗತಿಕ ಸಾಹಿತ್ಯ ಸಂದರ್ಭದಲ್ಲಿ ಹನ್ನೆರಡನೆಯ ಶತಮಾನದ ವಚನ ಸಾಹಿತ್ಯ ತನ್ನದೇ ಆದ ವಿಶೇಷತೆಗಳಿಂದ ಗಮನಸೆಳೆಯುವಂತಹದ್ದು, ಸಾಮೂಹಿಕ ಸಾಹಿತ್ಯ ರಚನೆ ಅದರಲ್ಲೂ ಮಹಿಳೆಯರು ಸಾಮೂಹಿಕವಾಗಿ ವಚನಗಳನ್ನು ಸೃಜಿಸಿದ್ದು ವಿಶೇಷ. ಈ ಸಂದರ್ಭದಲ್ಲಿ ಸಾಹಿತ್ಯವೆಂಬುದು ತನ್ನ ಅರ್ಥ ಮತ್ತು ಸ್ವರೂಪವನ್ನು ಬದಲಿಸಿಕೊಂಡಿತು. ಸಾಹಿತ್ಯ ಜನಸಾಮಾನ್ಯರ ಧನಿಯಾಯಿತು. ವಚನಗಳು ಶರಣಶರಣೆಯರ ಆತ್ಮಶೋಧನೆಗೆ, ಆಧ್ಯಾತ್ಮ ಚಿಂತನೆಗೆ ಭಕ್ತಿಸಾಧನೆಗೆ ಸ್ವಾನುಭವದ ಅಭಿವ್ಯಕ್ತಿಗೆ, ಸಾಮಾಜಿಕ ಚಳವಳಿಗೆ ಮಾಧ್ಯಮವಾದವು. ಇದುವರೆಗೆ ಅಲಕ್ಷಿತ ವರ್ಗವಾಗಿ ಮೂಕವೇದನೆ ಅನುಭವಿಸುತ್ತಿದ್ದ ಸ್ತ್ರೀ ಇಲ್ಲಿ ಹೋರಾಟಕ್ಕಿಳಿದಳು. ತನಗನ್ನಿಸಿದ್ದನ್ನು ಅಭಿವ್ಯಕ್ತಿಸಿದಳು. ವಚನಕಾರ್ತಿಯರು ಜನಪರ ಜೀವಪರ ಧೋರಣೆ-ಗಳಿಗೆ ಧನಿಗೂಡಿಸಿದರು. ಕೆಲವು ವಚನಕಾರ್ತಿಯರ ವಚನಗಳಲ್ಲಿ ಸಿದ್ಧಭಾಷೆ, ಶೈಲಿವಿನ್ಯಾಸಗಳು ಕಂಡುಬರುವುದುಂಟು. ಕೆಲವರಲ್ಲಿ ವಿಶಿಷ್ಟ ಶೈಲಿ ಕಾವ್ಯಾತ್ಮಕ ಅಭಿವ್ಯಕ್ತಿ, ಭಾವತೀವ್ರತೆಯೊಂದಿಗೆ ಸ್ವತಂತ್ರ ಅಭಿವ್ಯಕ್ತಿಗಳಾಗಿ ಕಂಡುಬರುತ್ತವೆ. ಕೆಲವು ವಚನಕಾರ್ತಿಯರ ಕೆಲವು ವಚನಗಳನ್ನು ಗಮನಿಸಿ, ವಚನಕಾರ್ತಿಯರ ವಚನ ವಿಶೇಷತೆಗಳನ್ನು ಅವರ ಚಿಂತನೆಗಳು ಅವರ ಕಾಯಕನಿಷ್ಠೆ, ಭಕ್ತಿ, ಸತಿ-ಪತಿ ಭಾವ, ಸಮಾಜ, ಆರ್ಥಿಕ ಚಿಂತನೆ ವೈಯಕ್ತಿಕ ವೇದನೆ ಮುಂತಾದವುಗಳಲ್ಲಿ ಕೆಲವು ಪ್ರಾತಿನಿಧಿಕ ವಚನಗಳೊಂದಿಗೆ ತನ್ನದೇ ಮಿತಿಯೊಳಗೆ ಚರ್ಚಿಸಲು ಯತ್ನಿಸಲಾಗಿದೆ.

ಯಾವ ನಿರ್ಬಂಧಕ್ಕೂ ಒಳಗಾಗದೆ, ಯಾರ ಅಧೀನಕ್ಕೂ ಒಳಗಾಗದೆ ಧೈರ್ಯದಿಂದ, ಮುಕ್ತವಾಗಿ ತಮ್ಮ ಸ್ವಾವಲಂಬಿಯಾದ ಚಿಂತನೆಗಳನ್ನು ಸ್ವತಂತ್ರವಾಗಿ

ಶರಣೆಯರು ಅಭಿವ್ಯಕ್ತಿಸಿದರು. ಯಾರನ್ನೋ ಮೆಚ್ಚಿಸಬೇಕೆಂದೂ, ಯಾರಿಂದಲೋ ಬಹುಪರಾಕ್ ಪಡೆಯಲೆಂದೂ ಶರಣೆಯರ ವಚನಗಳು ಬರಲಿಲ್ಲ. ತಮ್ಮ ಮನದ ನೋವು–ನಲಿವು, ಸುಖ–ದುಃಖ ಅನುಭವ ಅನುಭಾವಗಳನ್ನು ಸ್ವತಂತ್ರವಾಗಿ ಹೇಳುತ್ತಿದ್ದರು. 'ಅಯ್ಯಾ ನೀನು ಕೇಳಿದಡೆ ಕೇಳು, ಕೇಳದಡೆ ಮಾಣು ಆನು ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯಾ ಎಂದು ಹೇಳಬೇಕೆಂದಿದ್ದನ್ನು ಹೇಳಿದರು.

ಶರಣೆಯರು ಸಮಾನತೆಯನ್ನು ಒಪ್ಪಿಕೊಳ್ಳುತ್ತಲೇ ಪರಸ್ಪರ ಪ್ರಶ್ನಿಸುತ್ತಾ, ಸ್ವವಿಮರ್ಶೆ ಮೂಲಕ ತಮ್ಮನ್ನು ತಾವೇ ತಿದ್ದಿಕೊಳ್ಳಲೆತ್ನಿಸುತ್ತಾ, ತಮ್ಮ ಗಂಡಂದಿರು ಸೇರಿದಂತೆ ಇಡೀ ಸಮಾಜವನ್ನು ಎಚ್ಚರಿಸುವ, ತಿದ್ದುವ ಕೆಲಸಮಾಡಿದರು. ತನ್ನಿಚ್ಚೆಯ ಬದುಕೊಂದನ್ನು ಕುರಿತು ಚಿಂತಿಸಿದರು. ಅಂತೆಯೇ ಬಾಳಿದರು. 'ಹೆದರದಿರು ಮನವೆ ಹೆದರದಿರು ತಮವೆ ನಿಜವನರಿತು ನಿಶ್ಚಿಂತನಾಗಿರು' ಎಂಬಂತೆ ತಮಗೆ ತಾವೇ ಸ್ಫೂರ್ತಿಯಾಗಿ, ಧೈರ್ಯವಾಗಿ ನಿಂತರು. ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದೊಡೆಂತಯ್ಯಾ? ಎಂದು ಹೇಳುತ್ತಲೇ ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು ಎಂಬ ಸಮಾಧಾನದಲ್ಲಿ ಸ್ವಾನುಭವದ ಮೂಲಕ ಶರಣೆಯರು ಸಮಾಜಕ್ಕೆ ಹೇಳಿದರು.

ಶರಣೆಯರು ಪರಾಧೀನತೆ ಇಲ್ಲದೆ ಸ್ವತಂತ್ರವಾಗಿ ಬದುಕಿದವರು ತಾವು ಮಾಡುವ ಕಾಯಕದಲ್ಲೇ ಕೈಲಾಸ ಕಂಡವರು. ತಮ್ಮ ವೃತ್ತಿಯಲ್ಲೇ ಗೌರವಯುತವಾಗಿ ಸ್ವಾಭಿಮಾನಿಗಳಾಗಿ ಬದುಕಿದವರು. ಪರಂಪಾರಗತ ಜಾತಿವ್ಯವಸ್ಥೆಯನ್ನು ಪ್ರಶ್ನಿಸಿದವರು. ದಾಂಪತ್ಯ ಬದುಕಿನಲ್ಲಿದ್ದುಕೊಂಡೇ ಸತಿಪತಿಗಳೊಂದಿಗೆ ಶಿವನಿಗೆ ಹಿತವಾದವರೂ ಉಂಟು. ಗಂಡನ್ನು ಧಿಕ್ಕರಿಸಿ ಸಾಕ್ಷಾತ್ ಶಿವನನ್ನೇ ಪತಿಯೆಂದು ಬದುಕಿದ ಶರಣೆಯರೂ ಉಂಟು. 'ಆರೂ ಇಲ್ಲದವಳೆಂದು ಆಳಿಗೊಳಲುಬೇಡ, ಆಳಿಗೊಂದಡೆ ಆನು ಅಂಜುವವಳಲ್ಲ' ಎಂಬಂತಹ ಧೈರ್ಯವಂತರಾಗಿದ್ದರು ಶರಣೆಯರು. ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ? ಎಂದು ಸ್ವತಃ ಗಂಡನನ್ನೇ ಎಚ್ಚರಿಸುವ ದಿಟ್ಟ ಶರಣೆಯರು, 'ನುಡಿಯಬಾರದು ಕೆಟ್ಟನುಡಿಗಳ ನಡೆಯಲುಬಾರದು. ಕೆಟ್ಟನಡೆಗಳ' ಎಂದು ಇಡೀ ಸಮಾಜಕ್ಕೆ ನೀತಿಪಾಟ ಹೇಳುವ ಶರಣೆಯರು, ನಾನು ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ ಎಂಬಂತೆ ತನ್ನದೇಆದ ಜಾತಿಯ ವ್ಯಾಖ್ಯಾನ ನೀಡುವ ಶರಣೆಯರು ಈ ಮುಂತಾಗಿ ಸಮಾಜದ ಪರ ತಮ್ಮದೇ ಆದ ಸ್ವತಂತ್ರ ಚಿಂತನೆಗಳನ್ನು ಶರಣೆಯರ ವಚನಗಳಲ್ಲಿ ಗಮನಿಸಬಹುದಾಗಿದೆ. ಶರಣೆಯರು ತಮ್ಮ ಸುತ್ತಮುತ್ತಲಿನ ಜನರ ಆಚಾರ–ವಿಚಾರ, ನಂಬಿಕೆ ಶ್ರದ್ಧೆಗಳನ್ನು ಪ್ರಶ್ನಿಸಿ, ವ್ಯವಸ್ಥೆಯನ್ನು ಶುದ್ಧೀಕರಿಸುವ ಮನೋಧರ್ಮಹೊಂದಿದವರು.

ಧರ್ಮದ ಸೋಗಿನಲ್ಲಿ ನಡೆಯುವ ಅನ್ಯಾಯಗಳನ್ನು ಟೀಕಿಸುತ್ತಾರೆ. ಶರಣೆಯರು ಗುರುಲಿಂಗ – ಜಂಗಮ ನಿಷ್ಠೆ, ಶಿವಶರಣನ ಲಕ್ಷಣ ಹೇಳುತ್ತಾಲೇ

ಡಾಂಭಿಕ ಭಕ್ತರನ್ನು ಎಚ್ಚರಿಸುವ ಕೆಲಸ ಮಾಡುತ್ತಾರೆ, ಆಚಾರ ವ್ರತಗಳಿಗೆ ತಪ್ಪಿದವರನ್ನು ಖಂಡಿಸುತ್ತಾರೆ. ಅನುಭಾವಿಕ ಕ್ಷೇತ್ರದಲ್ಲಿ ಅಪಾರ ಸಾಧನೆಗೈದರು. ಆದರ್ಶ ಸಮಾಜದ ನಿರ್ಮಾಣಕ್ಕೆ ಸೈನಿಕರಂತೆ ಮುನ್ನುಗ್ಗಿದರು. 'ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚಲುವನಿಗೆ ಹಂಬಲಿಸುವ ಅಕ್ಕ ಅಲೌಕಿಕ ಗಂಡನನ್ನು ಹುಡುಕುತ್ತಾ, ಶರಣಸತಿ – ಲಿಂಗಪತಿ ತತ್ವದಡಿ ಬದುಕಿ ದೇವರೇ ನನಗೆ ಆತ್ಮಸಂಗಾತಿ' ಎಂದು ಪ್ರತಿಪಾದಿಸಿದಳು. ಸ್ತ್ರೀಪುರುಷಭೇದ ಆತ್ಮೋದ್ಧಾರಕ್ಕೆ ಅನಗತ್ಯವಾಗಿದ್ದು ಲಿಂಗದೀಕ್ಷೆ ಸ್ತ್ರೀಪುರುಷ ಭೇದವಿಲ್ಲದೆ ಸಮಾನವಾದ ಆತ್ಮೋದ್ಧಾರದ ಸಂಕೇತವಾಯಿತು. ಅನುಭವಮಂಟಪದಲ್ಲಿ ಗಂಡಿಗೆ ಸರಿಸಮನಾದ ಆಧ್ಯಾತ್ಮಿಕ ಸ್ವಾತಂತ್ರ್ಯ ಸ್ತ್ರೀಯರಿಗೂ ದೊರೆಯಿತು. ಆತ್ಮಜ್ಞಾನ ಪಡೆಯಲು ಲಿಂಗಭೇದ ಸಲ್ಲದು. ಗಂಡು–ಹೆಣ್ಣು ಲೌಕಿಕ ಜಗತ್ತಿನ ರೀತಿ ಮಾತ್ರ ಎಂಬುದು. ಹೆಣ್ಣು–ಗಂಡುಗಳ ಸಮಾನತೆಯನ್ನು ಕುರಿತು ಶರಣೆಯರು ದಿಟ್ಟವಾಗಿ ಮಾಡನಾಡಿದರು. ಈ ಹಿನ್ನೆಲೆಯಲ್ಲಿ ಶರಣೆಯರ ಸ್ವಂತಿಕೆಯನ್ನು ಸ್ವತಂತ್ರ ವಿಚಾರಶೀಲತೆಯನ್ನು ಈ ನಿಬಂಧದಲ್ಲಿ ಚರ್ಚಿಸಲಾಗಿದೆ.

ವಚನಕಾರ್ತಿಯರು ತಮ್ಮ ವಚನಗಳನ್ನು ವ್ಯಕ್ತಿ ಸ್ವಾತಂತ್ರ್ಯ, ವಿಚಾರಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯದ ಆಶಯಗಳನ್ನು ನಿರ್ಭಿಡೆಯಿಂದ ವ್ಯಕ್ತಪಡಿಸಿದ್ದು ವಿಶೇಷ. ಶರಣೆಯರು ಸಾಮಾಜಿಕವಾಗಿ, ಧಾರ್ಮಿಕವಾಗಿ ಲಿಂಗಾಧಾರಿತವಾಗಿ ತಮ್ಮದೇ ಆದ ಸ್ವತಂತ್ರ ಚಿಂತನೆಗಳನ್ನು ಪ್ರಕಟಪಡಿಸಿದ್ದಾರೆ. ಜೀವಪರ ಮೌಲ್ಯಗಳನ್ನು ಸದಾ ಚಿಂತಿಸಿದ ಶರಣೆಯರು, ಯಾವುದೇ ಮೌಲ್ಯಗಳು ಜೀವವಿರೋಧಿಯಾಗದೇ ವ್ಯಕ್ತಿಸ್ವಾತಂತ್ರ್ಯಕ್ಕೆ ಅಡ್ಡಿಯಾಗಬಾರದು ಎಂದು ಬಯಸಿದರು.

ಪ್ರಸ್ತುತ ಈ ನಿಬಂಧದಲ್ಲಿ ವಿಷಯವನ್ನು ಮುಖ್ಯವಾಗಿ ಐದು ಅಧ್ಯಾಯ–ಗಳನ್ನಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ಅಧ್ಯಾಯದ ವ್ಯಾಪ್ತಿಯಲ್ಲಿಯೂ ಒಂದೊಂದು ಪ್ರಮುಖ ಅಂಶವನ್ನು ಮುನ್ನೆಲೆಗೆ ತೆಗೆದುಕೊಂಡು ಅಧ್ಯಯನ ಮಾಡುವ ಪ್ರಯತ್ನಮಾಡಲಾಗಿದೆ. ವಚನ ಸಾಹಿತ್ಯ ಮತ್ತು ಮಹಿಳೆ ಶಿವಶರಣೆಯರ ಬದುಕು, ಶಿವಶರಣೆಯರು ಮತ್ತು ವಚನ ಸೃಷ್ಟಿ, ಶಿವಶರಣೆಯರ ವಚನಗಳಲ್ಲಿ ಸ್ವಾತಂತ್ರ್ಯ ಪ್ರಜ್ಞೆ, ಸಾಮಾಜಿಕ ಕಾಳಜಿಯ ಸ್ವಾತಂತ್ರ್ಯ ಪ್ರಜ್ಞೆ, ಧಾರ್ಮಿಕ ಸ್ವಾತಂತ್ರ್ಯ ಪ್ರಜ್ಞೆ ಮತ್ತು ಲಿಂಗಾಧಾರಿತ ಸ್ವಾತಂತ್ರ್ಯದ ಪ್ರಜ್ಞೆ ಹೀಗೆ ಹಲವು ಹಂತಗಳಲ್ಲಿ ಪ್ರಸ್ತುತ ವಿಷಯವನ್ನು ನಿಬಂಧದ ವ್ಯಾಪ್ತಿಯಲ್ಲಿ ಚರ್ಚಿಸಲಾಗಿದೆ. ಇಂದಿಗೂ ಸಮಾಜದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಮಹಿಳೆಗೆ ವಚನಕಾರ್ತಿಯರು ಸ್ಫೂರ್ತಿ ಮತ್ತು ಆದರ್ಶವಾಗಿದ್ದಾರೆ. ಹನ್ನೆರಡನೆಯ ಶತಮಾನದಷ್ಟು ಹಿಂದೆಯೇ ಶರಣೆಯರು ತೋರಿದ ಧೈರ್ಯ, ಛಲ ಮತ್ತು ಸ್ವಾಭಿಮಾನ ಮತ್ತು ಅಂತಹ ಶರಣೆಯರ ನುಡಿಗಳು ಅನುಕರಣೀಯವಾಗಿವೆ.

ಅಧ್ಯಾಯ – ೨

ವಚನ ಸಾಹಿತ್ಯ ಮತ್ತು ಮಹಿಳೆ

ಹೆಣ್ಣು ಪುರುಷ ಸಮಾನಳಲ್ಲ ಎಂಬ ಭಾವನೆಯನ್ನು ಕಿತ್ತೊಗೆದು ಸಮಾಜದಲ್ಲಿ ನಿರ್ಭಯ ವಾತಾವರಣ ನಿರ್ಮಿಸಿ ಆ ಮೂಲಕ ಹೆಣ್ಣಿಗೂ ಸಮಾನ ಅವಕಾಶಗಳನ್ನು ಸಾರಿದ್ದು ವಚನಕಾರರ ವಿಶೇಷ. ಇಂದಿಗೂ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣನ್ನು 'ಮಕ್ಕಳೆರುವ ಯಂತ್ರ'ದಂತೆ, ಭೋಗದ ವಸ್ತು ಎಂಬಂತೆ ಅವಳನ್ನು ಅಸ್ಪೃಶ್ಯಳನ್ನಾಗಿ ಕಾಣುವ ನಿದರ್ಶನಗಳಿವೆ. ಹಲವು ಕಟ್ಟುಪಾಡುಗಳು ನಿರ್ಮಿತವಾಗಿ ಅವಳ ಮೇಲೆ ನಿಯಮ ನಿರ್ಬಂಧಗಳನ್ನು ಹಾಕಿವೆ. ಸ್ತ್ರೀಯು ಮೋಕ್ಷ ಯೋಗ್ಯಳಲ್ಲ ಎಂಬ ಧೋರಣೆಗಳು ಹೆಣ್ಣಿನ ಆಧ್ಯಾತ್ಮಿಕ, ಆರ್ಥಿಕ, ನೈತಿಕ, ಸಾಂಸ್ಕೃತಿಕ ಅವಕಾಶಗಳನ್ನು ಕಿತ್ತುಕೊಂಡವು. ಅವಳ ನಿಸರ್ಗದತ್ತ ದೈಹಿಕ ನಿಯಮಗಳನ್ನು ಮುಂದಿಟ್ಟುಕೊಂಡು ಅಸ್ಪೃಶ್ಯಳನ್ನಾಗಿ ಕಾಣಲಾಯಿತು. ಹಾಗೆಯೇ ಗಂಡನನ್ನು ಕಳೆದುಕೊಂಡಾಗ ಅಮಂಗಲೆ ಅಥವಾ ಅಪಶಕುನ ಎಂಬಂತೆ ಕಾಣಲಾಯಿತು. ಮಹಿಳೆಗೆ ನೀಡಿರುವ ಸ್ಥಾನಮಾನಗಳು ಭಾರತೀಯ ಸಂಸ್ಕೃತಿಯ ಸಂದರ್ಭವನ್ನು ನೋಡಿದಾಗ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದಿವೆ. ವೇದಕಾಲದಿಂದ ಹನ್ನೆರಡನೆಯ ಶತಮಾನದ ಶರಣರ ಕಾಲದವರೆಗೆ ಮಹಿಳೆಯ ಬದುಕಿನ ರೀತಿ–ನೀತಿಗಳಲ್ಲಿ ಅನೇಕ ರೀತಿಯ ಬದಲಾವಣೆಗಳಾಗಿರುವುದನ್ನು ಗಮನಿಸಬಹುದು. ಮಾತೃಪ್ರಧಾನ ಸಂಸ್ಕೃತಿ ಜಾರಿಯಲ್ಲಿದ್ದಾಗ ಮಹಿಳೆ ಉನ್ನತವಾದ ಸ್ಥಾನವನ್ನು ಹೊಂದಿದ್ದಳೆಂದು, ಮಾತೃಪ್ರಧಾನ ಸಂಸ್ಕೃತಿ ಹೋಗಿ ಪಿತೃಪ್ರಧಾನ ಸಂಸ್ಕೃತಿ ಜಾರಿಗೆ ಬಂದ ನಂತರ ಮಹಿಳೆಯ ಶೋಷಣೆ ಆರಂಭವಾದದ್ದನ್ನು ಕಾಣಬಹುದು.

ಶತಶತಮಾನಗಳ ಕಾಲದಿಂದ ಅಸ್ಪೃಶ್ಯಳಾಗಿದ್ದ ಹೆಣ್ಣನ್ನುಮಾನವೀಯ ದೃಷ್ಟಿಯಲ್ಲಿ ವಚನಕಾರರು ಕಂಡಿದ್ದಾರೆ. ಹೆಣ್ಣಿಗೂ ಗಂಡಿಗೆ ಸರಿಸಮನಾದ ಸ್ಥಾನ–ಮಾನಗಳನ್ನು ನೀಡಿದ್ದಾರೆ. ೧೨ನೇಯ ಶತಮಾನದ ಶರಣ ಚಳವಳಿ ಮಹಿಳಾ ವಿಮೋಚನ ಚಳವಳಿಯಾಗಿಯೂ ಮಹತ್ತರವಾದದ್ದು ಎಂದರೆ ತಪ್ಪಾಗಲಾರದು. ಈ ವಚನ ಚಳವಳಿಯಲ್ಲಿ ಸ್ತ್ರೀ–ಪುರುಷ, ಬಡವ–ಬಲ್ಲಿದ, ಮೇಲು–ಕೀಳು ಎಂಬ ವ್ಯತ್ಯಾಸವಿಲ್ಲದೆ ಎಲ್ಲರೂ ಸಮಾನವಾಗಿ ಭಾಗವಹಿಸಿದರು. ಬಸವಣ್ಣನವರ ನಾಯಕತ್ವ–ದಲ್ಲಿ ನಡೆದ ಈ ಆಂದೋಲನದಲ್ಲಿ ಮೇಲ್ವರ್ಗದ ವಿದ್ವಾಂಸರಿಂದ ಕೆಳವರ್ಗದ ಚಮ್ಮಾರರವರೆಗೆ ಎಲ್ಲರಿಗೂ ಅವಕಾಶ, ಅದು ಸಮಾನ ಅವಕಾಶ, ಅಲ್ಲಮಪ್ರಭು, ಸಿದ್ಧರಾಮ, ಮಡಿವಾಳ ಮಾಚಯ್ಯ, ಅಂಬಿಗರಚೌಡಯ್ಯ, ಗಜೇಶಮಸಣಯ್ಯ, ಆಯ್ದಕ್ಕಿ ಮಾರಯ್ಯ, ಕುಂಬಾರ ಗುಂಡಯ್ಯ, ಮಾದಾರಚನ್ನಯ್ಯ, ಹಾಗೆಯೇ ಅಕ್ಕಮಹಾದೇವಿ,

ಮುಕ್ತಾಯಕ್ಕ, ಆಯ್ದಕ್ಕಿ ಲಕ್ಕಮ್ಮ, ಸತ್ಯಕ್ಕ, ನೀಲಮ್ಮ, ಗೊಗ್ಗವ್ವೆ, ಅಮುಗೆರಾಯಮ್ಮ, ಸೂಳೆ ಸಂಕವ್ವೆ, ಕದಿರ ರೆಮ್ಮವ್ವೆ, ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ, ಕೊಟ್ಟಣದ ಸೋಮವ್ವೆ– ಹೀಗೆ ಶರಣ–ಶರಣೆಯರೆಲ್ಲ ಬಸವಣ್ಣನವರ ನಾಯಕತ್ವದಲ್ಲಿ ಸ್ತ್ರೀಪುರುಷ ಭೇದರಹಿತವಾಗಿ ಸೇರಿದರು. ನಿರ್ಭಯದಿಂದ ಅಭಿವ್ಯಕ್ತಿಪಡಿಸಿದರು. ಸಮುದಾಯಕ್ಕೆ ಸಮಾನತೆಗೆ ಮಹತ್ವ ನೀಡಿದ ವಚನಕಾರರು ಮಹಿಳೆಯರಿಗೂ ಅತ್ಯುನ್ನತ ಸ್ಥಾನಮಾನ–ಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ವಚನ ಚಳವಳಿಯ ಸಂದರ್ಭದಲ್ಲಿ ವಚನಕಾರರೂ ವಚನಕಾರ್ತಿಯರು ಕೇವಲ ಮಹಿಳೆಯಲ್ಲ ಆಕೆ ಸಾಧಕಿ ಎಂಬುದನ್ನು ಮನಗಂಡು ಚಿತ್ರಿಸಿದ್ದಾರೆ.

"ವಚನ ಚಳವಳಿಗೆ ಮಹಿಳೆ–ಪುರುಷ ಎಂಬುದು ಮುಖ್ಯವಾಗದೆ ಇಡೀ ಬದುಕಿನ ಹುಟುಕಾಟ ಮುಖ್ಯವಾಗುತ್ತದೆ. ಅಂತೆಯೇ ವಚನ ಚಳವಳಿಯಲ್ಲಿ ದಲಿತ ವಚನಕಾರರು ದಲಿತರ ಬಗೆಗೆ ಮಾತನಾಡಲಿಲ್ಲ. ದಲಿತೇತರ ವಚನಕಾರರು ದಲಿತರ ಬಗೆಗೆ ಮಾತನಾಡಿದರು. ಅದೇ ರೀತಿ ಮಹಿಳೆಯ ಬಗೆಗೆ ವಚನಕಾರ್ತಿಯರು ಹೆಚ್ಚು ಹೇಳಲಿಲ್ಲ. ವಚನಕಾರರು ಅವಳ ಸಾಧ್ಯತೆಗಳನ್ನು ಹೆಚ್ಚು ವಿವರಿಸಿದರು. ಇಲ್ಲಿ ತನ್ನ ನೋವು–ಸಂಕಟಗಳನ್ನು ದೊಡ್ಡದನ್ನಾಗಿ ಮಾಡಿಕೊಂಡು ಹೇಳಲಾಗದೆ ಇತರರ ನೋವು–ಸಂಕಟಗಳಿಗೆ ಸ್ಪಂದಿಸುವ ದಯಾಪ್ರಧಾನವಾದ ಸಂಸ್ಕೃತಿ ಎದ್ದು ಕಾಣುತ್ತದೆ. ಒಬ್ಬರ ನೋವನ್ನು ಇನ್ನೊಬ್ಬರು ಅರ್ಥ ಮಾಡಿಕೊಳ್ಳುವ ಒಬ್ಬರ ಮೌನಕ್ಕೆ ಇನ್ನೊಬ್ಬರು ಮಾತಾಡುವ ಸಹೃದಯ ಸಂಸ್ಕೃತಿಯನ್ನು ವಚನ ಚಳವಳಿಯಲ್ಲಿ ಕಾಣಬಹುದಾಗಿದೆ.[೧] ಒಟ್ಟಿನಲ್ಲಿ ಗಂಡು ಹೆಣ್ಣೆನ್ನದೆ ಸಮಾಜದ ಉದ್ಧಾರಕ್ಕೆ ಮಾರ್ಗದರ್ಶನ ತೋರುತ್ತಾ, ಲೋಪದೋಷಗಳನ್ನು ತಿದ್ದುತ್ತಾ ಸಾಗಿತು ಈ ವಚನ ಚಳವಳಿ.

೧೨ನೆಯ ಶತಮಾನದ ವಚನಕಾರರು ಎಲ್ಲಾ ಸ್ತರದ, ಎಲ್ಲ ವರ್ಗದ ಎಲ್ಲಾ ವೃತ್ತಿಯ ಜಾತಿಭೇದ, ಮೇಲು–ಕೀಳುಗಳನ್ನು ಬಿಟ್ಟು, ನವಸಮಾಜದ ಹರಿಕಾರರಾದರು. ಇಲ್ಲಿ ದಲಿತರು ಹಿಂದುಳಿದವರು, ವೃತ್ತಿಪರರು, ಸೇವಕವೃತ್ತಿಯವರು, ಯಾರೇ ಆಗಲೀ ಅವರ ವೃತ್ತಿಗಳನ್ನೇ ಗೌರವಯುತವಾಗಿ ಮುಂದುವರಿಸಿಕೊಂಡು ಬಂದರು. ಸ್ತ್ರೀಪುರುಷ ಭೇದವಿಲ್ಲದೆ ಎಲ್ಲರೂ ಒಂದಾಗಿ ತಮ್ಮ ತಮ್ಮ ಹೃದಯ ಮನಸ್ಸುಗಳ ತೆರೆದಿಟ್ಟು ಸಮಾಜದ ದಾರಿದೀಪಗಳಾದರು. ಹೀಗಾಗಲೇ ಇದ್ದ ಭಾರತೀಯ ನಾರಿಯ ಶೋಚನೀಯ ಸ್ಥಿತಿಯನ್ನು ಕಂಡಿದ್ದರು. ಹೆಣ್ಣಿಗೆ ಆಧ್ಯಾತ್ಮಿಕ, ಸಾಮಾಜಿಕ, ಆರ್ಥಿಕ ನೈತಿಕ, ಸಾಂಸ್ಕೃತಿಕ ಅವಕಾಶಗಳು ದೂರವಾಗಿದ್ದ ವಾಸ್ತವವನ್ನು ಅರಿತಿದ್ದರು. ಹೆಣ್ಣಿಗೆ ಗೌರವವಿಲ್ಲದೆ ವಂಚನೆಗೊಳಗಾಗಿ ಹೇಳಲು ಉಸುರಿಲ್ಲದೆ, ಧನಿಯಿಲ್ಲದೆ ಮೂಕವೇದನೆ

---

೧. ವಚನ ಸಂಸ್ಕೃತಿ, ಡಾ. ಬಸವರಾಜ ಸಬರದ, ೨೦೦೭, ಪುಟ. ೨೪

ಅನುಭವಿಸುತ್ತಾ ಬಂದಿದ್ದಳು. ಇಂಥ ಸಂದರ್ಭದಲ್ಲಿ ಶಿವಶರಣರು ಹೆಣ್ಣಿಗೆ ಸಾಮಾಜಿಕ ನ್ಯಾಯ ದೊರೆಕಿಸಿಕೊಡಲು ಮುಂದೆ ಬಂದುದು ಜಾಗತಿಕ ಮಟ್ಟದಲ್ಲೇ ಅಪೂರ್ವ ಸಾಧನೆ.

“‘ಸ್ತ್ರೀ’ ಎಂಬ ಪದ ‘ಸೂತ್ರಿ’ ಎಂಬ ಧಾತುವಿನಿಂದ ಬಂದದ್ದು. ‘ಸೂತ್ರಿ’ ಎಂದರೆ ಹೆರುವ ಪ್ರಾಣಿ ಎಂಬರ್ಥವಿದೆ. ಹೆಣ್ಣು ಪ್ರಾಣಿಗಳಿಗೂ ಸ್ತ್ರೀ ಎಂಬ ಹೆಸರಿದೆ.”[೧] ಹೀಗೆ ಜನ್ಮಕೊಡುವ ಕ್ರಿಯೆಯಿಂದಲೇ ಗುರುತಿಸಿಕೊಂಡಿದ್ದ ಹೆಣ್ಣನ್ನು ಯಾರು ಗಮನಿಸದ, ಗೌರವಿಸದ, ನೈತಿಕ ಬೆಂಬಲ ನೀಡದ ದಯನೀಯ ಸ್ಥಿತಿಯಿತ್ತು. ಪ್ರಾಪಂಚಿಕ ಪರಿಸರದಲ್ಲಿ ಆಕೆ ಕೇವಲ ಗೃಹಕೃತ್ಯಗಳಿಗೆ ಮಾತ್ರ ಸೀಮಿತವಾಗಿದ್ದಳು. ಇಂತಹ ಸಂದರ್ಭದಲ್ಲಿ ಹೆಣ್ಣಿಗೆ ಸಾಮಾಜಿಕ ಮತ್ತು ಆಧ್ಯಾತ್ಮಿಕ ಎರಡೂ ನೆಲೆಗಳಲ್ಲಿಯೂ ಸಮಾನವಾದ ಅವಕಾಶ ಕೊಟ್ಟು ಅವಳ ಸ್ವತಂತ್ರ ಚಿಂತನೆಗಳ ಅಭಿವ್ಯಕ್ತಿಗೆ ಅವಕಾಶ ಮಾಡಿಕೊಟ್ಟಿದ್ದು ವಚನ ಚಳವಳಿಯ ಸಂದರ್ಭ. ಶರಣರು ‘ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ ಹೆಣ್ಣು ಪ್ರತ್ಯಕ್ಷ ಕಪಿಲ ಸಿದ್ಧ ಮಲ್ಲಿಕಾರ್ಜುನ’ ಎಂಬ ಉನ್ನತ ಸ್ಥಾನ ನೀಡಿ ಹೆಣ್ಣಿನಲ್ಲಿ ದೈವತ್ವವನ್ನು ಕಂಡವರು. ಹೆಣ್ಣು ಜ್ಞಾನವಂತಳಾಗಿ ಮುನ್ನಡೆದು ಆಧ್ಯಾತ್ಮ ಸಾಧನೆಗೈಯಲು ಅನುವು ಮಾಡಿಕೊಟ್ಟರು. ಇದಕ್ಕೆ ಹಡಪದ ಲಿಂಗಮ್ಮನ ಈ ವಚನವೇ ಸಾಕ್ಷಿ.

> ಕನಿಷ್ಠದಲ್ಲಿ ಹುಟ್ಟಿದೆ, ಉತ್ತಮರಲ್ಲಿ ಬೆಳೆದೆ
> ಸತ್ಯಶರಣರ ಪದವಿಡಿದೆ
> ಆ ಶರಣರ ಪಾದವಿಡಿದು ಗುರುವ ಕಂಡೆ, ಲಿಂಗವ ಕಂಡೆ
> ಜಂಗಮವ ಕಂಡೆ, ಪಾದೋದಕವ ಕಂಡೆ, ಪ್ರಸಾದವ ಕಂಡೆ
> ಇಂತಿವರ ಕಂಡೆನ್ನ ಕಂಗಳ ಮುಂದಣ ಕತ್ತಲೆ ಹರಿಯಿತ್ತು
> ಕಂಗಳ ಮುಂದಣ ಕತ್ತಲೆ ಹರಿಯಲೊಡನೆ
> ಮಂಗಳದ ಮಹಾಬೆಳಗಿನೊಳಗೋಲಾಡಿ ಸುಖಿಯಾದೆನಯ್ಯ
> ಅಪ್ಪಯ್ಯಪ್ರಿಯ ಚೆನ್ನಬಸವಣ್ಣಾ[೨]

ಲಿಂಗಮ್ಮನೇ ಹೇಳುವಂತೆ, ಕನಿಷ್ಠ ಕುಲದಲ್ಲಿ ಹುಟ್ಟಿದ ಆಕೆ ಬದುಕಿನಲ್ಲಿ ಬೆಳಕು ಕಂಡಳು ಈ ವಚನದಲ್ಲಿ ಆಕೆ ಬಳಸುವ ‘ಸುಖಿಯಾದೆನಯ್ಯ’ ಎಂಬಲ್ಲಿ ಅವಳು ಏರಿರುವ ಎತ್ತರವನ್ನು ಪ್ರತಿನಿಧಿಸುತ್ತದೆ. ಕೆಳಜಾತಿಯ ಹಣೆಪಟ್ಟಿಯೊಂದಿಗೆ ಜನಿಸಿದರೂ ಬೌದ್ಧಿಕ ಸ್ತರದಲ್ಲಿ ಆಕೆ ಸ್ತ್ರೀಗೆ ಅಸಾಧ್ಯ ಎಂಬಷ್ಟು ಎತ್ತರಕ್ಕೇರಿದ್ದಾಳೆ.

---

೧. ಶಿವಶರಣೆಯರ ವಚನಸಂಪುಟ, (ಸಂ), ಡಾ. ವೀರಣ್ಣರಾಜೂರ, ವಚನ೧೦೫೨, ಪು. ೩೪೨

೨. ವಚನ ಸಂಸ್ಕೃತಿ, ಡಾ. ಬಸವರಾಜ ಸಬರದ, ೨೦೦೭, ಪುಟ. ೨೦

ವಚನಕಾರರು ಅಂದಿನ ಕಾಲದಲ್ಲಿ ಸ್ತ್ರೀ ಬಗೆಗೆ ಪುರುಷರಿಗಿದ್ದ ದೋಷ ಪೂರ್ಣ ದೃಷ್ಟಿಯನ್ನು ಖಂಡಿಸಿದರು. ಗಂಡಿನ ದೌರ್ಜನ್ಯ, ಕಾಮುಕತೆಗೆ ಒಳಗಾಗಿ ಬದುಕಿಡೀ ಯಾತನೆಯಲ್ಲಿ ಕಳೆಯಬೇಕಾಗಿದ್ದ ಸ್ಥಿತಿಯನ್ನು ಗಮನಿಸಿ ಪರಸ್ತ್ರೀ ಪಾರ್ವತಿ ಸಮಾನ ಎಂಬಂತೆ ಉದಾತ್ತವಾಗಿ ಚಿಂತಿಸಿದರು. ಇದಕ್ಕೆ ಬಸವಣ್ಣನವರ ಈ ವಚನ ಉದಾಹರಣೆ

‘ಛಲಬೇಕು ಶರಣಂಗೆ ಪರಧನವನೊಲ್ಲನೆಂಬ
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ’[೧]

ಶರಣರು ಪರಸತಿಯನ್ನು ಗೌರವಯುತವಾಗಿ ಕಂಡವರು. ‘ಪರಸ್ತ್ರೀ ಪರಧನ-ವೆಂಬ ಜೂಜಿಂಗೆ’ ಹೆದರಿದವರು. ಪರಸ್ತ್ರೀಯರಲ್ಲಿ ಸೇರದಿರುವುದೇ ಶೀಲವೆಂದರು. ಶಿವಲಿಂಗ ನೋಡುವ ಕಣ್ಣಲ್ಲಿ ಪರಸ್ತ್ರೀಯನ್ನು ನೋಡಿದರೆ ದೇವರು ಮೆಚ್ಚನು ಎಂದು ಬದುಕಿದವರು.

೧೨ನೆಯ ಶತಮಾನದ ಶಿವಶರಣರು ಸ್ತ್ರೀ-ಪುರುಷ ಭೇದರಹಿತವಾಗಿ ಚಿಂತಿಸಿದರು. ಕೇವಲ ನಾಲ್ಕುಗೋಡೆಯ ನಡುವೆ ಮಾತ್ರ ಇದ್ದ, ಗೃಹಕೃತ್ಯಕ್ಕೆ ಮಾತ್ರ ಸೀಮಿತವಾಗಿದ್ದ ಮಹಿಳೆಗೆ ಪಾರಮಾರ್ಥಿಕವಾಗಿಯೂ ಸಮಾನ ಅವಕಾಶ ಕೊಟ್ಟರು. ಶಿವಶರಣರು ನುಡಿದರು, ಅಷ್ಟೇ ಅಲ್ಲ ನುಡಿದಂತೆ ನಡೆದರು. ದೈಹಿಕ ವ್ಯತ್ಯಾಸವನ್ನೇ ಮುಂದಿಟ್ಟುಕೊಂಡು ಹೆಣ್ಣು ಕೀಳು ಎಂಬ ಕೀಳುಮಟ್ಟದ ವ್ಯವಸ್ಥೆಗೆ ಕೊಡಲಿಪೆಟ್ಟು ಕೊಟ್ಟರು ಶರಣರು. ಅಂತರಂಗ ಆತ್ಮಶುದ್ಧಿ ಮುಖ್ಯ ಎಂದು ಸಾರಿದರು. ಜೇಡರ ದಾಸಿಮಯ್ಯ ತನ್ನ ವಚನದಲ್ಲಿ ಹೀಗೆ ಹೇಳಿದ್ದಾರೆ.

ಮೊಲೆ ಮೂಡಿ ಬಂದಡೆ ಹೆಣ್ಣೆಂಬರು
ಗಡ್ಡ ಮೀಸೆ ಬಂದಡೆ ಗಂಡೆಂಬರು
ನಡುವೆ ಸುಳಿವ ಆತ್ಮನು
ಹೆಣ್ಣು ಅಲ್ಲ ಗಂಡು ಅಲ್ಲ ಕಾಣಾ
ರಾಮನಾಥ[೨]

ವಚನಕಾರರ ದೃಷ್ಟಿಯಲ್ಲಿ ಹೆಣ್ಣು ಹೇಗಿದ್ದಾಳೆಂಬುದು ಈ ವಚನದ ಮೂಲಕ ತಿಳಿಯುತ್ತದೆ. ಕೇವಲ ದೈಹಿಕವಾದ ಮೊಲೆ ಮೂಡಿ, ಗಡ್ಡ-ಮೀಸೆಗಳ ವ್ಯತ್ಯಾಸವೇ

೧. ಸಾವಿರ ವಚನಗಳು - (ಸಂ.) ಓ.ಎಲ್.ನಾಗಭೂಷಣ, ವ - ೫೨೪, ಪುಟ. ೧೫೫
೨. ಅದೇ., ವ- ೮೬೯, ಪುಟ. ೨೫೭.

ಹೊರತು ನಡುವೆ ಸುಳಿವ ಆತ್ಮ ಹೆಣ್ಣು ಅಲ್ಲ, ಗಂಡು ಅಲ್ಲ. ಇಲ್ಲಿ ಗಂಡ-ಹೆಣ್ಣಿಗೆ ಯಾವ ಭೇದಭಾವವಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ತನ್ನ ವಿಕಾಸಕ್ಕೆ ಅಡ್ಡಿಯಾಗುವುದನ್ನು ಮನುಷ್ಯ 'ಮಾಯೆ' ಎಂದು ಭಾವಿಸುವುದುಂಟು. ಹೆಣ್ಣಿಗೂ ಮಾಯೆ ಎಂದು ಕರೆದಿರುವುದುಂಟು. ಅಲ್ಲಮಪ್ರಭು ಇದನ್ನು ನೇರವಾಗಿ ತಿರಸ್ಕರಿಸಿ ಈ ರೀತಿ ಹೇಳುತ್ತಾರೆ.

"ಹೊನ್ನು ಮಾಯೆಯೆಂಬುದು
ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆಯೆಂಬುದು
ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆಯೆಂಬುದು
ಮಣ್ಣು ಮಾಯೆಯಲ್ಲ
ಮನದ ಮುಂದಣ ಆಶೆಯೇ ಮಾಯೆ
ಕಾಣಾ ಗುಹೇಶ್ವರ[೧]

'ಮನದ ಮುಂದಣ ಆಸೆಯೇ ಮಾಯೆ ಕಾಣಾ' ಎಂಬ ಅಲ್ಲಮನ ಮಾತು ಹೆಣ್ಣು, ಹೊನ್ನು, ಮಣ್ಣುಗಳನ್ನು ಮಾಯೆ ಎಂದು ವಾದಿಸುವವರಿಗೆ ಸರಿಯಾದ ಉತ್ತರ ನೀಡಿದಂತಿದೆ. ಕಣ್ಣಿಗೆ ಕಂಡದ್ದೆಲ್ಲಾ ತನಗೇ ಬೇಕು ಎಂಬ ಆಸೆಬುರುಕ ಮನುಷ್ಯನ ಮನವೇ ಅದಕ್ಕೆ ಕಾರಣ ಹೊರತು ಕಾಣುವ ವಸ್ತುವೇ ಮಾಯೆ ಎಂಬುದು ಸಲ್ಲದು. ಬಯಸುವ ಮನವೇ ಮಾಯೆ. ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣು-ಹೊನ್ನು, ಮಣ್ಣುಗಳನ್ನು ಮಾಯೆ ಎಂದು ಪರಿಗಣಿಸಿ ಇವು ಮೋಕ್ಷಕ್ಕೆ ಅಡ್ಡಿ ಎಂದು ಬಿಂಬಿಸಲಾಗಿತ್ತು. ಶರಣರು 'ಮಾಯೆ' ಎಂಬ ಪರಿಕಲ್ಪನೆಯ ಬಗೆಗಿದ್ದ ತಪ್ಪು ನಂಬಿಕೆಯನ್ನು ಹೊಡೆದು ಹಾಕಿದರು.

ಜನಿತಕ್ಕೆ ತಾಯಾಗಿ ಹೆತ್ತಳು
ಮಾಯೆ
ಮೋಹಕ್ಕೆ ಮಗಳಾಗಿ ಹುಟ್ಟಿದಳು
ಮಾಯೆ
ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು
ಮಾಯೆ

---

೧. ಸಾವಿರ ವಚನಗಳು – (ಸಂ) ಓ.ಎಲ್.ನಾಗಭೂಷಣ, ವ-೧೦೫೮, ಪುಟ. ೩೧೫

ಇದಾದಾವ ಪರಿಯಿಲ್ಲ ಕಾಡಿತ್ತು
ಮಾಯೆ
ಈ ಮಾಯೆಯ ಕಳೆವಡೆ ಎನ್ನಳವಲ್ಲ
ನೀವೆ ಬಲ್ಲಿರಿ
ಕೂಡಲಸಂಗಮದೇವ[೧]

ಈ ವಚನದಲ್ಲಿ ಮಾಯೆಯೆಂಬುದು ಶಕ್ತಿಯ ಸಂಕೇತವಾಗಿ ಮೂಡಿ ಬಂದಿದೆ. ತಾಯಿಯಾಗಿ ಮಡದಿಯಾಗಿ, ಮಗಳಾಗಿ ತನ್ನ ಅಸ್ತಿತ್ವಕ್ಕೆ ಕಾರಣಳಾದ ಮಹಿಳೆಯನ್ನು ಬಸವಣ್ಣನು ಮಾಯೆಯ ತಾಯಿಯೆಂದು ಅ ಮೂಲಕ ಶಕ್ತಿಮಾತೆ ಎಂಬ ಅರ್ಥದಲ್ಲಿ ಬಳಸಿದ್ದಾರೆ. ಹೀಗೆ ಮಾಯೆ ಎಂಬುದನ್ನು ಅಲ್ಲಮ ಮತ್ತು ಬಸವಣ್ಣ ಬೇರೆ ಬೇರೆ ಅರ್ಥದಲ್ಲಿ ಬಳಸಿದ್ದಾರೆ. ಅಲ್ಲಮ ವೈಚಾರಿಕ ನೆಲೆಯಲ್ಲಿ ಬಳಿಸಿದರೆ, ಬಸವಣ್ಣ ಭಕ್ತಿಯ ನೆಲೆಯಲ್ಲಿ ಬಳಸಿರುವುದನ್ನು ಕಾಣಬಹುದು. ಇಲ್ಲಿ ಹೆಣ್ಣು ಕೇಲವ ಹೆಣ್ಣಾಗಿ ಮಾತ್ರ ಕಾಣದೆ ಅನಂತ ಸೃಷ್ಟಿಯ ಸಂಕೇತವಾಗಿ ಕಂಡಿದ್ದಾಳೆ. ಇಲ್ಲಿ ಮಾಯೆ ಎಂಬುದು ಚಂಚಲೆ ಎಂಬರ್ಥದಲ್ಲಿ ಬಳಕೆಯಾಗಿಲ್ಲ ಎಂಬುದು ಸ್ಪಷ್ಟ.

ತಾ ಮಾಡಿದ ಹೆಣ್ಣು
ತನ್ನ ತಲೆಯನೇರಿತ್ತು
ತಾ ಮಾಡಿದ ಹೆಣ್ಣು
ತನ್ನ ತೊಡೆಯನೇರಿತ್ತು
ತಾ ಮಾಡಿದ ಹೆಣ್ಣು
ಬ್ರಹ್ಮನ ನಾಲಗೆಯನೇರಿತ್ತು
ತಾ ಮಾಡಿದ ಹೆಣ್ಣು
ನಾರಾಯಣನ ಎದೆಯನೇರಿತ್ತು
ಅದು ಕಾರಣ ಹೆಣ್ಣು ಹೆಣ್ಣಲ್ಲ
ಹೆಣ್ಣು ರಾಕ್ಷಸಿಯಲ್ಲ
ಹೆಣ್ಣು ಪ್ರತ್ಯಕ್ಷ ಕಪಿಲ ಸಿದ್ಧ ಮಲ್ಲಿಕಾರ್ಜುನ
ನೋಡಾ.[೨]

ಸಿದ್ದರಾಮನ ಈ ವಚನದಲ್ಲಿ ಹೆಣ್ಣು ಹೆಣ್ಣಲ್ಲ ಅಂದರೆ ಆಕೆ ಅಬಲೆಯಲ್ಲ. ಹೆಣ್ಣು ಕಠೋರ, ಕ್ರೂರ ಮನೋಭಾವದ ರಾಕ್ಷಸಿಯೂ ಅಲ್ಲ. ಹೆಣ್ಣು ಪ್ರತ್ಯಕ್ಷ

೧. ಸಾವಿರ ವಚನಗಳು –(ಸಂ) ಓ.ಎಲ್.ನಾಗಭೂಷಣ, ವ–೫೩೦, ಪುಟ. ೧೫೭
೨. ಅದೇ, ವ–೫೦೦, ಪುಟ. ೧೬೯

ಕಪಿಲಸಿದ್ಧ ಮಲ್ಲಿಕಾರ್ಜುನ. ಶರಣರು ಹೆಣ್ಣಿಗೆ ವಿಕಾಸವನ್ನು ತಮ್ಮ ಸಮಕಾಲೀನರ ಬದುಕಿನಲ್ಲೇ ಕಂಡವರಾಗಿದ್ದರು. ಹೆಣ್ಣು ಆತ್ಮೋನ್ನತಿ ಸಾಧಿಸಬಲ್ಲವಳು ಎಂಬುದನ್ನು ಕಂಡಿದ್ದವರು. ಹೆಣ್ಣಿನಲ್ಲಿ ದೇವತ್ವವನ್ನು ಕಂಡರು ಮತ್ತು ಆಕೆಗೆ ದೇವತ್ವಕ್ಕೇರಲು ಅವಕಾಶ ಮಾಡಿಕೊಟ್ಟರು. ವೈದಿಕ ಸಂಸ್ಕೃತಿಯಲ್ಲಿ ಹೆಣ್ಣಿಗೆ ಧಾರ್ಮಿಕ ಸ್ವಾತಂತ್ರ್ಯವಿಲ್ಲ. ಅವಳು ಪಾರಮಾರ್ಥವನ್ನು ಕುರಿತು ವಿಚಾರಿಸದೆ, ಒಂದು ವೇಳೆ ವಿಚಾರಿಸಿದರು ಅವು ತನಗೆ ನಿಲುಕದವು ಎಂದು ಭಾವಸಿ ಬದುಕುವ ಸ್ಥಿತಿ ಇತ್ತು. ಶರಣರು ಸ್ತ್ರೀ ಸಮಾಜವನ್ನು ಸಾಮಾಜಿಕ ನ್ಯಾಯದ ಆಧಾರದ ಮೇಲೆ ಕಟ್ಟಲು ಯತ್ನಿಸಿದ ಪರಿ ಮಾದರಿಯಾದುದು.

ಉತ್ತಮವಾದ ನಡವಳಿಕೆಗೆ ಶರಣ ಸಂಸ್ಕೃತಿಯಲ್ಲಿ ಮೊದಲ ಪ್ರಾಶಸ್ತ್ಯ. ಶೀಲ, ಚಾರಿತ್ರ್ಯ ವ್ಯಕ್ತಿಯ ಅತ್ಯಮೂಲ್ಯ ರತ್ನಗಳು ಎಂಬ ನೆಲೆಗಟ್ಟಿನ ಮೆಲೆ ಅಂತರಂಗ ಬಹಿರಂಗ ಶುದ್ಧಿಯ ಸಮಾಜ ಕಟ್ಟಲು ಹವಣಿಸಿದವರು ಶರಣರು. ಹೆಣ್ಣು ಕೇವಲ ಭೋಗದ ವಸ್ತುವೆಂಬಂತೆ ಭಾವಿಸಿದ್ದ ಪುರುಷನ ಮನೋವೃತ್ತಿಯನ್ನು ಬದಲಿಸಲು ಯತ್ನಿಸಿದರು ಶರಣರು.

ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ
ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ
ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ....[೧]

ಪರಸ್ತ್ರೀ ವ್ಯಾಮೋಹ ಎಂದಿಗೂ ಸಲ್ಲದು. ಪರಸ್ತ್ರೀ ಪಾರ್ವತಿಯ ಸಮಾನ ಎಂದು ನಂಬಿದ್ದವರು ಶರಣರು. ಸ್ತ್ರೀಯರ ಬಗೆಗೆ ಇದ್ದ ಪುರುಷನ ದೋಷಪೂರ್ಣ ದೃಷ್ಟಿಯನ್ನು ಬದಲಿಸಲು ಪ್ರಯತ್ನಿಸಿದರು. ಪರಧನ, ಪರಸ್ತ್ರೀ, ಪರದೈವಗಳಿಗೆ ರಗದಿಪ್ಪುದೇ ನೇಮವೆಂದರು, ಪರಸ್ತ್ರೀಯರ ಕೂಡದಿಪ್ಪುದೇ ಶೀಲವೆಂದರು, ಅಂಗನೆಯರ ಸಂಗವ ತೊರೆದಡೆ ಶೀಲವಂತರೆಂದರು, ಶಿವಲಿಂಗ ನೋಡುವ ಕಣ್ಣಲ್ಲಿ ಪರಸ್ತ್ರೀಯ ನೋಡಿದರೆ ಅಲ್ಲಿ ಲಿಂಗವಿಲ್ಲ, ಅಲ್ಲಿ ದೇವನಿರುವುದಿಲ್ಲ. ಹಗಾಗಿ ಪರಧನ, ಪರಸ್ತ್ರೀಯ ವಿಸರ್ಜಿಸಿ ಪೂಜಿಸು ಪರಶಿವನ ಎಂದು ಜಗಕೆ ಸಾರಿದವರು ಶರಣರು.

ಪರಸ್ತ್ರೀಯರಲ್ಲಿ ಮಾತೃಸ್ವರೂಪವನ್ನು ಕಾಣಬೇಕು. 'ಸ್ವಸ್ತ್ರೀಯಿರಲ್ಕೆ ಪರಸ್ತ್ರೀ ಬಯಸುವುದು ಸತ್ತ ನಾಯಿ ಭಕ್ಷಿಸುವ ರೀತಿ' ಎಂದು ಹೇಳುತ್ತಾರೆ. ಪರಸತಿ ತಾಯಿಗೆ ಸಮಾನವೆಂದು ಅವಳಲ್ಲಿ ಮಾತೃತ್ವವನ್ನು ಹಾಗೂ ಪರಸ್ತ್ರೀ ಪಾರ್ವತಿಗೆ ಸಮಾನಳೆಂದು ಅವಳಲ್ಲಿ ದೈವತ್ವವನ್ನು ಕಾಣಬೇಕು ಎಂಬ ಪವಿತ್ರ ಭಾವನೆಯನ್ನು ವ್ಯಕ್ತಪಡಿಸುತ್ತದೆ.

---

೧. ಸಾವಿರ ವಚನಗಳು- (ಸಂ) ಓ.ಎಲ್.ನಾಗಭೂಷಣ, ವ-೫೦೦, ಪುಟ. ೧೬೯

ಶರಣರು ಹೇಳುವ ನೀತಿ ಕೇವಲ ಪುರುಷರಿಗಷ್ಟೇ ಸಲ್ಲುವಂತದ್ದಲ್ಲ. ಅವರೂ ಸ್ತ್ರೀಯೂ ನಿಷ್ಠಳಾಗಿರಬೇಕೆನ್ನುತ್ತಾರೆ. ಸಮಾಜದಲ್ಲಿ ಸ್ತ್ರೀಪುರುಷರಿಬ್ಬರೂ ಸಮಾನರೆಂದ ಮೇಲೆ ಆ ನೈತಿಕ ಜವಾಬ್ದಾರಿಯೂ ಇಬ್ಬರ ಮೇಲೂ ಇರುತ್ತದೆ. ಒಳ್ಳೆಯ ಆಚರಣೆಗಳೂ ಗುಣ ನಡವಳಿಗೆಳು ಇಬ್ಬರಲ್ಲೂ ಇರಬೇಕಾಗುತ್ತದೆ. ಆಗ ಮಾತ್ರ ಸ್ವಸ್ತ ಸಮಾಜದ ನಿರ್ಮಾಣ ಸಾಧ್ಯ ಎಂಬುದು ಶರಣರ ವಾದ.

"ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ
ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ
ಇದ್ದಡೇನು ಸತ್ತಡೆನು
ಶಿವ ಶಿವಾ
ಕೂಡಲಸಂಗಮದೇವ
ಕೇಳಾ
ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ"[೧]

ನಾರಿಗೆ ಗುಣವೇ ಮುಖ್ಯ, ಅದೇ ಶೃಂಗಾರ ಎಂದವರು ಶರಣರು. ಗಂಡ-ಹೆಂಡತಿಯರ ನಡುವೆ ಪರಸ್ಪರ ಸ್ನೇಹವಿಲ್ಲದ ಸಂಬಂಧ, ಇಷ್ಟವಿಲ್ಲದ ಹಸುವಿಗೆ ಉಣಲಿಷ್ಟವಿಲ್ಲದ ಕರುವನ್ನು ಬಿಟ್ಟಂತಾಗುತ್ತದೆ ಎಂದರು. ಅರಸನನ್ನು ಕಂಡು ತನ್ನ ಪುರುಷನ ಮರೆದಡೆ ಮರನೇರಿ ಕೈಬಿಟ್ಟಂತಾಗುತ್ತದೆ ಎಂಬ ಧೋರಣೆ ವಚನಕಾರರದು. ಹೆಣ್ಣಿಗೆ ಅಂತರಂಗ ಸೌಂದರ್ಯ ಬಹಿರಂಗ ಸೌಂದರ್ಯಕ್ಕಿಂತ ತುಂಬಾ ಮುಖ್ಯವಾದದ್ದು. ಗಂಡ-ಹೆಂಡತಿ ನಡುವೆ ಪರಸ್ಪರ ಸ್ನೇಹ, ನಿಷ್ಠೆ, ಪಾತಿವ್ರತ್ಯ ಮುಖ್ಯ. ಇಲ್ಲದಿದ್ದರೆ ಬದುಕು ಹಾನಿಯಾಗುವುದರಲ್ಲಿ ಸಂಶಯವಿಲ್ಲ ಎಂದು ಹೇಳುತ್ತಾರೆ. ಶರಣಧರ್ಮದಲ್ಲಿ ಸತಿ-ಪತಿ ಭಾವಕ್ಕೆ ಮಹತ್ವದ ಸ್ಥಾನವಿದೆ. 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂಬುದು ಶರಣರ ತತ್ತ್ವ

'ಗಂಡ ಶಿವಲಿಂಗ ದೇವರ ಭಕ್ತ
ಹೆಂಡತಿ ಮಾರಿ ಮಸಣಿಯ ಭಕ್ತೆ
ಗಂಡ ಕೊಂಬುದು ಪಾದೋದಕ ಪ್ರಸಾದ
ಹೆಂಡತಿ ಕೊಂಬುದು ಸುರೆ ಮಾಂಸ
ಭಾಂಡ ಭಾಜನ ಶುದ್ಧವಿಲ್ಲದವರ ಭಕ್ತಿ
ಹೆಂಡದ ಮಡಕೆಯ ಹೊರಗೆ ತೊಳೆದಂತೆ
ಕೂಡಲಸಂಗಮದೇವ...... [೨]

---

೧. ಸಾವಿರ ವಚನಗಳು - (ಸಂ) ಓ.ಎಲ್.ನಾಗಭೂಷಣ, ವ-೪೮೩, ಪುಟ. ೧೪೩
೨. ಅದೇ., ವ-೪೮೨, ಪುಟ. ೧೪೩

ದಾಂಪತ್ಯ ಧರ್ಮವನ್ನು ಶ್ರೇಷ್ಠವೆಂದ ಶರಣರು, ತಾವೇ ಆದರ್ಶ ಸಂಸಾರಿಗಳಾಗಿ ದಾಂಪತ್ಯ ಜೀವನ ನಡೆಸಿ ಸಾಧಿಸಿ ತೋರಿದರು; ಸಿದ್ಧಿಯ ಶಿಖರವೇರಿದರು. ದಾಂಪತ್ಯ ಜೀವನ ಸತ್ವ ಶುದ್ಧವಾಗಿರಬೇಕು. ದಂಪತಿಗಳು ಏಕೋಭಾವದಿಂದಿರಬೇಕು ಎಂದರು. ಇವರ ದಾಂಪತ್ಯ ಕೇವಲ ಲೌಕಿಕ ಮಟ್ಟಕ್ಕೆ ಸೀಮಿತವಾಗಿರದೇ ಆಧ್ಯಾತ್ಮಿಕ ಹಂತಕ್ಕೂ ವಿಸ್ತರಿಸಿದ್ದಾಗಿದೆ. ತಾವುಗಳು ಸತಿ–ಪತಿಗಳೆಂಬ ಭಾವ ಮೀರಿ ಶರಣಸತಿ–ಲಿಂಗಪತಿಯ ಶಿಖರವೇರಿದರು. ದಾಂಪತ್ಯ ಧರ್ಮವನ್ನು ಒಪ್ಪಿದ ಶರಣರು ಅದಕ್ಕೆ ಮಾರಕವಾಗುವ ವೇಶ್ಯಾವೃತ್ತಿಯನ್ನು ವಿರೋಧಿಸುತ್ತಾರೆ.

ಲಿಂಗಸಮಾನತೆಯನ್ನು ಸಾರಿದ ಶರಣರು ಯಾವುದೇ ವಿಷಯದಲ್ಲೂ ಹೆಣ್ಣು ಗಂಡಿಗಿಂತ ಕೀಳು ಎಂದು ಭಾವಿಸಲಿಲ್ಲ. ಆಕೆ ಕೂಡ ಮನುಷ್ಯಳೇ ಎಂದು ಜಗಕೆ ಸಾರಿದರು. ಆಧ್ಯಾತ್ಮಿಕ ಕ್ಷೇತ್ರಕ್ಕೆ ಅಪರಿಚಿತಳಾಗಿ ಉಳಿದಿದ್ದ ಹೆಣ್ಣು ಉನ್ನತ ಮಟ್ಟದ ಸಾಧನೆ ಮಾಡಲು ಅವಕಾಶ ಸಿಕ್ಕಿ, ಅನುಭವ ಮಂಟಪದ ಪ್ರಮುಖ ಅಂಗವಾದಳು. ಸಾಮಾಜಿಕವಾಗಿ ಶತಶತಮಾನಗಳಿಂದ ಮೌನವಾಗಿದ್ದ ಆಕೆ ಇಲ್ಲಿ ಮಾತನಾಡಿದಳು... ಮನತೆರೆದು ಅಭಿವ್ಯಕ್ತಗೊಂಡಳು. ಅಸಮಾನತೆಯನ್ನು ಪ್ರತಿಭಟಿಸಿದಳು. ಮಾಯೆ–ಯಾಗದೆ ಮಾತೆಯಾದಳು, ಭಕ್ತೆಯಾದಳು, ಮಾರ್ಗದರ್ಶಿಯಾದಳು. ಯಾವ ಧರ್ಮದಲ್ಲೂ ಸಿಗದಿದ್ದ ಗೌರವಾದಾರಗಳು ಶರಣರಲ್ಲಿ ಸಿಕ್ಕತು. ಹಿಂದೆ ಸ್ತ್ರೀ ಎಂದರೆ ಸೌಂದರ್ಯಕ್ಕೆ ಮಾತ್ರ ಸೀಮಿತವಾದವಳು ಎಂಬ ತುಂಬಾ ಪರಿಮಿತಿಗಳ ಜೀವಿಯಾಗಿದ್ದವಳು ಶರಣರ ಸಂದರ್ಭದಲ್ಲಿ ವ್ಯಾವಹಾರಿಕ ಲೋಕದ ನಡುವೆ ಬಂದಳು. ಅವಳ ವ್ಯಕ್ತಿತ್ವವನ್ನು ಗೌರವಿಸಿ ಆಕೆಗೆ ಒಂದು ಅಭಿವ್ಯಕ್ತಿ ಸ್ವಾತಂತ್ರ್ಯದ ವೇದಿಕೆ ನಿರ್ಮಿಸಿಕೊಟ್ಟು ಆ ಮೂಲಕ ಸಮಾನತೆಯನ್ನು ಸಾರಿದರು.

ಜೇಡರ ದಾಸಿಮಯ್ಯ ತನ್ನ ವಚನವೊಂದರಲ್ಲಿ ಹೀಗೆ ಹೇಳುದ್ದಾನೆ.

'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ
ಸತಿಪತಿಗಳೊಂದಾಗದವರ ಭಕ್ತಿ
ಅಮೃತದೊಳು ವಿಷ ಬೆರೆದಂತೆ ಕಾಣಾ
ರಾಮನಾಥ'[೧]

ಗಂಡಹೆಂಡತಿಯರು ಒಟ್ಟಾಗಿ ಚಿಂತಿಸಬೇಕಿದೆ. ಗಂಡ ಒಂದು ದೇವರ ಪೂಜಿಸಿ, ಹೆಂಡತಿ ಮತ್ತೊಂದು ದೇವರನ್ನು ಪೂಜಿಸಿದರೆ ಆ ಭಕ್ತಿ ವ್ಯರ್ಥ. ಇಬ್ಬರೂ ಒಂದೇ ದೇವರಾರಾಧಕರಾಗಿರಬೇಕು. ಸತಿ ಪತಿಗಳು ಒಂದಾದಾಗ ಶಿವನಿಗೂ

೧. ಸಾವಿರ ವಚನಗಳು – (ಸಂ) ಓ.ಎಲ್.ನಾಗಭೂಷಣ, ವ–೫೦೦, ಪುಟ. ೧೪೩

ಹಿತವಾಗುತ್ತದೆ. ಸತಿಪತಿಗಳು ಒಂದಾಗದಿದ್ದರೆ ಅಮೃತದಲ್ಲಿ ವಿಷ ಬೆರೆತಂತಾಗುತ್ತದೆ ಎಂದು ಜೇಡರದಾಸಿಮಯ್ಯ ಹೇಳಿದ್ದಾನೆ. ಇಲ್ಲಿ ಹೆಣ್ಣು – ಗಂಡಿಗೆ ಸಮಾನ ಅವಕಾಶ ದೊರೆತ ಅಂಶವಿದೆ. ಒಂದು ಕಾಲಕ್ಕೆ ಹೆಣ್ಣು ಮುಕ್ತಿ ಯೋಗ್ಯಳಲ್ಲ ಎಂಬ ನಂಬಿಕೆಯಿದ್ದದುಂಟು. ಶರಣರಿಗೂ ಸ್ತ್ರೀಯರಿಗೂ ಆದ್ಯಾತ್ಮ ಶಿಖರವೇರಲು ಮೆಟ್ಟಿಲಾಗಿ ಸಹಾಯಕರಾದರು.

೧೨ನೇ ಶತಮಾನದ ಶರಣರಲ್ಲಿ ಹಲವು ದಂಪತಿಗಳು ಒಟ್ಟಾಗಿ ವಚನ ರಚಿಸಿ ಸಮಾಜಮುಖಿ ಚಿಂತನೆಯಲ್ಲಿ ಪರಸ್ಪರರು ತೊಡಗಿದ್ದನ್ನು ಗಮನಿಸಬಹುದು. ಅಮುಗೆರಾಯಮ್ಮ–ಅಮುಗೆ ದೇವಯ್ಯ, ಆಯ್ದಕ್ಕಿ ಮಾರಯ್ಯ–ಲಕ್ಷ್ಮಮ್ಮ, ಕಾಳವ್ವೆ–ಸಿದ್ಧಬುದ್ಧಯ್ಯ, ಕಾಳವ್ವೆ–ಬಾಚಿಕಾಯಕದ ಬಸವಯ್ಯ, ಕಾಳವ್ವೆ–ಉರಿಲಿಂಗಪೆದ್ದಿ, ಕೇತಲದೇವಿ–ಕುಂಬಾರಗುಂಡಯ್ಯ, ಗಂಗಮ್ಮ–ಹಾದರ ಕಾಯಕದ ಮಾರಯ್ಯ, ಗಂಗಾಂಬಿಕೆ, ನೀಲಮ್ಮ–ಬಸವಣ್ಣ, ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ – ಗಜೇಶ ಮಾಸಣ್ಣಯ್ಯ, ಗುಡ್ಡವ್ವೆ– ಬತ್ತಲೇಶ್ವರ, ದುಗ್ಗಳೆ–ಜೇಡರದಾಸಿಮಯ್ಯ, ಮಸಣಮ್ಮ–ಎಡೆಮಠದ ನಾಗಿದೇವಯ್ಯ, ಮೋಳಿಗೆ ಮಹಾದೇವಿ–ಮೋಳಿಗೆ ಮಾರಯ್ಯ, ರಾಯಮ್ಮ–ರಾಯಸದ ಮಂಚಣ್ಣ, ರೇತಮ್ಮ–ರೇವಣ ಸಿದ್ದಯ್ಯ, ರೇಚವ್ವೆ–ಕಾಟಕೂಟಯ್ಯ, ಲಿಂಗಮ್ಮ–ಹಡಪದ ಅಪ್ಪಣ್ಣ, ಸಾತವ್ವ– ಮೇದರಕೇತಯ್ಯ– ಈ ಮುಂತಾದ ಶರಣ ದಂಪತಿಗಳು ೧೨ನೆಯ ಶತಮಾನದಲ್ಲಿ ಕಾಣಸಿಗುತ್ತಾರೆ. ಸತಿಪತಿಗಳು ಕುಟುಂಬ ವ್ಯವಸ್ಥೆಯಲ್ಲಿ ಬಾಳಿ, ಸಮಾಜವನ್ನು ಉದ್ಧರಿಸಲು ಹೊರಟ ಈ ದಂಪತಿಗಳನ್ನು ಗಮನಿಸಿದರೆ, ಆ ಕಾಲದ ಗಂಡು–ಹೆಣ್ಣಿನ ಸಮಾನತೆಯ ಬಗೆಗೆ ಹಲವು ಅಂಶಗಳು ತಿಳಿಯುತ್ತದೆ.

ಶರಣರು ಸ್ತ್ರೀಪರ ಚಿಂತನೆಗಳನ್ನು ನಡೆಸಿ ಅವರನ್ನು ಮುಖ್ಯವಾಹಿನಿಗೆ ತಂದು, ಸಮಾನ ಅವಕಾಶಗಳನ್ನು ನೀಡಿದರು. "ಶರಣರು ಸ್ತ್ರೀಯನ್ನು ಕೆಲವೊಮ್ಮೆ 'ಮಾಯೆ' ಎಂತಲೂ, ಇನ್ನೂ ಕೆಲವೊಮ್ಮೆ 'ಶಕ್ತಿ' ಎಂತಲೂ ಪರಿಗ್ರಹಿಸಿರುವುದನ್ನು ದ್ವಂದ್ವ ಎಂಬುದಾಗಿ ಭಾವಿಸಿರುವುದು ಬಹುಶಃ ಪೂರ್ಣದೃಷ್ಟಿಯಿಂದ ವ್ಯಕ್ತವಾದ ಅಭಿಪ್ರಾಯವಾಗಿರುವಂತಿಲ್ಲ. ಏಕೆಂದರೆ 'ಶಕ್ತಿ' ಎಂಬುದನ್ನು ಸಕಾರಾತ್ಮಕವಾಗಿಯೂ 'ಮಾಯೆ' ಎಂಬುದನ್ನು ನಕಾರಾತ್ಮಕವಾಗಿಯೂ ತೆಗೆದುಕೊಳ್ಳುವುದು ಬಹುಶಃ ಸಮಂಜಸವೆನಿಸುವುದಿಲ್ಲ. ಅಲ್ಲದೆ ಈ ಎರಡು ನುಡಿ ವಿಶೇಷಗಳು ಶರಣರ ಸಂದರ್ಭದಲ್ಲೂ, ಸ್ತ್ರೀಯ ಸಂದರ್ಭದಲ್ಲೂ ಪರಸ್ಪರ ಪೂರಕವಾದ ಅರ್ಥ ವ್ಯುತ್ಪತ್ತಿಯ ನುಡಿಗಳೇ ಹೊರತು, ವಿರುದ್ಧಾರ್ಥವುಳ್ಳ ಪದಗಳಲ್ಲವೆಂಬುದನ್ನು ಮರೆಯುವಂತಿಲ್ಲ."[೧]

---

೧. ಶಿವಶರಣೆಯರ ವಚನಸಂಪುಟ, (ಸಂ) ಡಾ. ವೀರಣ್ಣರಾಜೂರ, ಪ್ರಸ್ತಾವನೆ, ಪುಟ. ೨೧

ಹೆಣ್ಣಿನ ಭಾವಪ್ರಪರಾಸವು ಅವರದೇ ವಚನಗಳಿಂದ ಕಂಗೊಳಿಸಿತು. ಹೆಣ್ಣು ಸ್ವತಂತ್ರಜೀವಿ, ಅವಳ ಸ್ವಂತ ಆಲೋಚನೆ, ನೋವು, ಪ್ರತಿಭಟನೆ, ಭಾವನೆಗಳು ಹೊರಜಗತ್ತಿಗೆ ಗೊತ್ತಾಗಿಸುವ ಮಾಧ್ಯಮವಾಗಿ ವಚನಗಳು ಕಾರ್ಯನಿರ್ವಹಿಸಿದವು. ತಮ್ಮ ವಾಸ್ತವ ಪ್ರಜ್ಞೆಯನ್ನು ಎಚ್ಚರವಾಗಿಟ್ಟುಕೊಂಡು ಇಡಿಯ ಸಮಾಜ ಚೈತನ್ಯಶೀಲವಾಗಿ ಬಾಳಲು ಬದುಕಿನ ಪ್ರಾಮಾಣಿಕತೆ ನಿಜವಾದ ಮಾನವೀಯ ಅನುಕಂಪ, ಮುಕ್ತ ಅವಕಾಶ, ವಿಕಾಸಶೀಲ ವ್ಯಕ್ತಿತ್ವ– ಇವುಗಳ ಅಗತ್ಯ ಮನಗಂಡವರು ವಚನಕಾರರು.

ವೈರಾಗ್ಯದ ತವನಿಧಿ ಅಕ್ಕ, ಆಧ್ಯಾತ್ಮ ಔನತ್ಯದ ಶಿಖರಗಾಮಿಯೂ ಆಕೆ. 'ಲೋಕದ ಗಂಡರನೋಯ್ದು ಒಲೆಯುಳಿಕ್ಕೂ' ಎಂಬ ಅಖಂಡ ನಿಲುವಿನ ಚೆನ್ನಮಲ್ಲಿಕಾರ್ಜುನನಿಗೆ ಮಧುವಳಿಗಳಾಗಿ, ಪರಶಿವನನ್ನೇ ಪತಿಯಾಗಿಸಿಕೊಂಡ ಮಹಾಸತಿ ಅಕ್ಕ. ಆಕೆಯ ದೈತ್ಯ ನಿಲುವಿಗೆ ಜ್ಞಾನವೈರಾಗ್ಯ ಚಕ್ರವರ್ತಿಗಳೆನಿಸಿದ ಅಲ್ಲಮಪ್ರಭು ನಮಿಸುವ ರೀತಿ ಇದು–

> ತನುಗುಣ ನಾಸ್ತಿಯಾಗಿ ಲಿಂಗ ಸಂಗಿಯಾದಳು
> ಮನಗುಣ ನಾಸ್ತಿಯಾಗಿ ಅರಿವು ಸಂಗಿಯಾದಳು
> ಭಾವಗುಣ ನಾಸ್ತಿಯಾಗಿ ಮಹಾಪ್ರಭೆ ತಾನಾದಳು
> ತಾನು, ಇದಿರು ಎಂಬ ಎರಡಳಿದು, ನಮ್ಮ ಗುಹೇಶ್ವರಲಿಂಗದಲ್ಲಿ
> ಸ್ವಯಂ ಲಿಂಗವಾದ ಮಹಾದೇವಿಯಕ್ಕಗಳ ನಿಲುವಿಂಗೆ
> ಶರಣೆನುತಿಹೆನು.[೧]

ವಚನ ಸಾಹಿತ್ಯದಲ್ಲಿ ಮಹಿಳಾಪರ ಚಿಂತನೆಗಳು ಹೆಚ್ಚು ಹೆಚ್ಚಾಗಿ ನಡೆದಿವೆ. ಆ ಕಾಲಘಟ್ಟದ ಮಹಿಳೆಯ ವೈರಾಗ್ಯ ಜೀವನದ ಪರಿ ಆಶ್ಚರ್ಯಪಡುವಂತದು. ಆತ್ಮಕ್ಕೆ ಹೆಣ್ಣು –ಗಂಡು ಭೇದವಿಲ್ಲ, ಆತ್ಮದ ಉದ್ಧಾರಕ್ಕೆ ಸ್ತ್ರೀ–ಪುರುಷರಿಬ್ಬರೂ ಸಮಾನರು, ಜ್ಞಾನಸಾಧಿಸಲು ಹೆಣ್ಣು ಗಂಡುಗಳಲ್ಲಿ ಯಾರೂ ಮೇಲೂ ಅಲ್ಲ ಕೀಳೂ ಅಲ್ಲ, ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿ ಇಬ್ಬರೂ ಸಮಾನ ಸಹಜ ಹಕ್ಕುದಾರರು, ಸಮಾಜದಲ್ಲಿನ ನೈತಿಕ ಜೀವನಕ್ಕೆ ಇಬ್ಬರೂ ಬದ್ಧವಾಗಿರಬೇಕು. ದಾಂಪತ್ಯ ಜೀವನ ಆತ್ಮೋದ್ಧಾರಕ್ಕೆ ಅಡ್ಡಿಯಿಲ್ಲ. ಹೆಣ್ಣು–ಗಂಡು ಇಬ್ಬರಿಗೂ ಪಾತಿವ್ರತ್ಯದ ನಿಷ್ಠೆ ಮುಖ್ಯ. ಕಾಯಕ ನಿಷ್ಠೆ ಪ್ರಧಾನ ಮೌಲ್ಯವಾಗಿತ್ತು. ಮಾಯೆಯ ಮುಸುಕಿನಿಂದ ಹೊರಬಂದ ಹೆಣ್ಣು ಶಿಕ್ಷಿತಳಾದಳು. ತರಬೇತಿ ಸಿಕ್ಕ ಆಕೆ ತನ್ನ ಮನದಾಳದ ದನಿಗೆ ಮಾತಾದಳು. ಸಮಾನ ಆಧ್ಯಾತ್ಮಿಕ ಚಿಂತನೆಗೆ ಅವಕಾಶ ಸಿಕ್ಕ ಕಾರಣ ಅನುಭಾವಿಕ ನೆಲೆಯಲ್ಲಿಯೂ ಪ್ರಗತಿ ಸಾಧಿಸಿದಳು.

---

೧. ಸಾವಿರ ವಚನಗಳು – (ಸಂ) ಓ.ಎಲ್.ನಾಗಭೂಷಣ, ವ–೫೦೦, ಪುಟ. ೧೯೯

ಪರಿಣಾಮವಾಗಿ ಸಾಹಿತ್ಯ ಕ್ಷಿತಿಜದಲ್ಲು ಒಮ್ಮಲೆ ೩೫ಕ್ಕೂ ಮಿಕ್ಕು ವಚನಕಾರ್ತಿಯರು ಬೆಳಗಿದರು. ಅವರ ೧೩೫೧[1] ವಚನಗಳನ್ನು ಸಂಗ್ರಹಿಸಲಾಗಿದೆ.

ಭೂಗರ್ಭದಲ್ಲಿ ಭೂಮಿಯ ಸಣ್ಣಸಡಿಲಿಕೆಗಾಗಿ ಕಾಯುವ ಜ್ವಾಲಾಮುಖಿ ತಾವು ಸಿಸಕ್ಕೊಡನೆಯೇ ಹೊರಗೆ ಚಿಮ್ಮುವಂತೆ, ಶತಮಾನಗಳಿಂದಲೂ ಅಸ್ಪೃಶ್ಯರಾಗಿ, ಬಾಯಿಲ್ಲದವಳಾಗಿ ಬದುಕಿದ್ದ ಹೆಣ್ಣು ಶರಣಕಾಲಘಟ್ಟದ ಧಾರ್ಮಿಕ ನೆಲೆಗಟ್ಟಿನ ಸಾಮಾಜಿಕ ಚಳವಳಿಯಲ್ಲಿ ತಾವು ಪಡೆದು ತಮ್ಮ ಆಲೋಚನೆಗಳನ್ನು ನಿರ್ಭಯವಾಗಿ ಹರಿಯಬಿಡುತ್ತಾರೆ. ಕಾಲಘಟ್ಟದ ಸಂಸ್ಕಾರದ ಫಲವಾಗಿ ವೈದಿಕ ಸಂಸ್ಕೃತಿಯ ನಡವಳಿಕೆಯನ್ನು ಪ್ರಶ್ನಿಸುವ ಮಟ್ಟಿಗೆ ಬೆಳೆಯುತ್ತಾರೆ. ಸತ್ಯಕ್ಕಳ ಒಂದು ವಚನವನ್ನು ಉದಾಹರಿಸುವುದರ ಮೂಲಕ ಇಡೀ ವಚನ ಸಾಹಿತ್ಯ ಚಳವಳಿಯು ಮಹಿಳೆಗೆ ಹೇಗೆ ಸ್ಪಂದಿಸಿತು. ಆ ಸ್ಪಂದನದ ಪರಿಣಾಮ ಆದ ಜಾಗೃತಿಯನ್ನು ಮನಗಾಣಬಹುದು.

'ಮೊಲೆ ಮೂಡಿ ಇದ್ದುದೆ ಹೆಣ್ಣೆಂದು ಪ್ರಮಾಣಿಸಲಿಲ್ಲ
ಕಾಸೆಮೀಸೆ ಕಠಾರವಿದ್ದುದೆ ಗಂಡೆಂದು ಪ್ರಮಾಣಿಸಲಿಲ್ಲ
ಅಜ ಜಗದ ಹಾಗೆ; ಬಲ್ಲವರ ನೀತಿಯಲ್ಲ
ಏತರ ಹಣ್ಣಾದರೂ ಮಧುರವೆ ಕಾರಣ,
ಅಂದವಿಲ್ಲದ ಕುಸಮಕ್ಕೆ ವಾಸನೆಯೇ ಕಾರಣ
ಇದರಂದವ ನೀನೇ ಬಲ್ಲೆ ಶಂಭುಜಕ್ಕೇಶ್ವರಾ[2]

೧. ಶಿವಶರಣೆಯರ ವಚನಸಂಪುಟ, (ಸಂ) ಡಾ. ವೀರಣ್ಣರಾಜೂರ, ವಚನ ೨೩, ಪು. ೩೭೦
೨. ಸಾವಿರ ವಚನಗಳು–(ಸಂ)ಓ.ಎಲ್.ನಾಗಭೂಷಣ, ವ. ೨೩, ಪುಟ. ೩೭೦–೩೭೧

ಅಧ್ಯಾಯ – ೩
ಶಿವ ಶರಣೆಯರ ಬದುಕು

ಜೀವನಾನುಭವವೇ ಹಾಡಾಗಿ ಹೊರಹೊಮ್ಮಿದ ಜನಪದ ಸಂಸ್ಕೃತಿ ನಮ್ಮಲ್ಲಿ ಪ್ರಾಚೀನ ಕಾಲದಿಂದಲೂ ಇದ್ದರೂ ಅಲ್ಲಿ ಮಹಿಳೆಯ ಭಾವಾಭಿವ್ಯಕ್ತಿ ನಡೆದಿದ್ದರೂ ಶಿಷ್ಟ ಪರಂಪರೆಯ ಬರಹದ ಸಂಸ್ಕೃತಿಯಿಂದ ದೂರ ಉಳಿದಿದ್ದು ವಿಪರ್ಯಾಸವೇ ಸರಿ. ಲಿಂಗ ತಾರತಮ್ಯದ ಪ್ರಭಾವ ಹೆಣ್ಣನ್ನು ಮುಖ್ಯವಾಹಿನಿಯಿಂದ ದೂರ ಉಳಿಯುವಂತೆ ಮಾಡಿತೆನ್ನಬಹುದು. ಮಹಿಳೆಯರು ಹನ್ನೆರಡನೆಯ ಶತಮಾನದಲ್ಲಿ ಪ್ರಮುಖವಾಗಿ ಪಡೆದ ಸಮಾನತೆ ಅಭಿವ್ಯಕ್ತಿ ಸ್ವಾತಂತ್ರ್ಯ. ಶತ-ಶತಮಾನಗಳಿಂದ ಸಾಹಿತ್ಯ ರಚನೆಗೆ ಪುರುಷ ಮಾತ್ರ ಯೋಗ್ಯ ಎಂಬ ಭಾವನೆಯನ್ನು ಸುಳ್ಳಾಗಿಸಿ ಮುಖ್ಯವಾಹಿನಿಗೆ ಈ ವಚನಚಳವಳಿಯ ಕಾಲಘಟ್ಟದಲ್ಲಿ ಅಡಿಯಿಟ್ಟರು. ಸಾಹಿತ್ಯ ರಚನೆಯ ಕ್ಷೇತ್ರದಿಂದ ಸಂಪೂರ್ಣ ವಂಚಿತಳಾಗಿದ್ದ ಮಹಿಳೆ ವಚನ ರಚನೆಯ ಮೂಲಕ ಜಗತ್ತಿನ ಸಾಹಿತ್ಯದ ಇತಿಹಾಸದಲ್ಲಿ ಅಪೂರ್ವ ಎನ್ನಬಹುದಾದ ಕೀರ್ತಿಗೆ ಪಾತ್ರರಾದರು.

ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಾಹಿತ್ಯದ ಮೊದಲ ಅಧ್ಯಾಯ ವಚನಕಾರ್ತಿಯರ ಮೂಲಕವೇ ಆರಂಭವಾಯಿತು. ಸಾಮಾಜಿಕ ಅಂಶಗಳು, ಧಾರ್ಮಿಕ ಅಂಶಗಳು, ಆಧ್ಯಾತ್ಮಿಕ ಅಂಶಗಳು ಹಾಗೆಯೇ ಹಲವು ವೈಯಕ್ತಿಕ ವಿಚಾರಗಳು ನಿರ್ಭಯವಾಗಿ ಮುಕ್ತವಾಗಿ ಅಭಿವ್ಯಕ್ತಗೊಂಡವು. ವಚನ ಚಳವಳಿಯ ವೈಚಾರಿಕ ಮತ್ತು ಆಧ್ಯಾತ್ಮಿಕ ಸತ್ವವನ್ನು ಆತ್ಮಶೋಧನೆ ಮತ್ತು ಸಾಮಾಜಿಕ ಶುದ್ಧೀಕರಣದ ಸೂತ್ರವನ್ನಾಗಿಸಿಕೊಂಡ ಲಿಂಗಮ್ಮ, ಲಕ್ಕಮ್ಮ, ಅಕ್ಕಮ್ಮ, ಮಹಾದೇವಮ್ಮ, ಕಾಳವ್ವೆ, ಸತ್ಯಕ್ಕ, ರಾಯಮ್ಮನವರು ವ್ಯಕ್ತಪಡಿಸಿದ ಉತ್ಕಟ ಧರ್ಮಶ್ರದ್ಧೆ, ತತ್ವನಿಷ್ಠೆ, ಜೀವನದ ಕಾಳಜಿ, ಮುಕ್ತಾಯಕ್ಕ, ಮಹಾದೇವಿಯಕ್ಕ, ಬೊಂತಾದೇವಿ, ನೀಲಾಂಬಿಕೆ ಮುಂತಾದವರ ಅನುಭಾವಿಕ ಚಿಂತನೆಗಳು ಸ್ತ್ರೀ ಸತ್ವಕ್ಕೆ ಹೊಸ ಭಾಗ್ಯವನ್ನು ದೊರಕಿಸಿಕೊಟ್ಟವು.

'ವಚನಯುಗದಲ್ಲಿ ಸಾಹಿತ್ಯ ರಚನೆ ಮಾಡಿದ ೩೩ ಮಹಿಳೆಯರ ಹೆಸರು ಮತ್ತು ವಚನಗಳು ಲಭ್ಯವಿದ್ದರೆ, ಅಂಕಿತ ಸಾಮ್ಯದಿಂದ ಮಹಿಳೆಯರ ವಚನಗಳೆಂದು ಊಹಿಸಲಾಗಿರುವ ಎರಡು ವಚನಗಳು ಲಭ್ಯವಿದ್ದು ವಚನ ಕರ್ತೃವಿನ ವಿವರಗಳು ತಿಳಿದು ಬಂದಿಲ್ಲ.'[೧] ಸಮಾಜದ ಉದ್ಧಾರ ಕಾರ್ಯದಲ್ಲಿ ತೊಡಗಿದ ಶರಣ ಚಳವಳಿಯಲ್ಲಿ ವಚನಕಾರ್ತಿಯರು ಮುಂಚೂಣಿಯಲ್ಲಿ ನಿಂತು ಉತ್ತಮ ಸಮಾಜದ ನಿರ್ಮಾಣಕ್ಕೆ ಶ್ರಮಿಸಿದರು. ಅಂತಹ ಮೂವತ್ಮೂರು ಜನ ವಚನಕಾರ್ತಿಯರ ಒಟ್ಟು

---

೧. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ. ಡಾ. ಎಚ್.ಎಸ್.ಶ್ರೀಮತಿ, ೨೦೦೬, ಪುಟ. ೪೩.

೧೧೦೪ ವಚನಗಳನ್ನು ಈವರೆವಿಗೆ ಸಂಗ್ರಹಿಸಲಾಗಿದೆ. ಆ ವಚನಕಾರ್ತಿಯರ ಹೆಸರುಗಳು ಈ ಕೆಳಕಂಡಂತಿವೆ.

೧. ಅಕ್ಕಮಹಾದೇವಿ
೨. ಅಕ್ಕಮ್ಮ
೩. ಅಮುಗೆರಾಯಮ್ಮ
೪. ಆಯ್ದಕ್ಕಿ ಲಕ್ಕಮ್ಮ
೫. ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ
೬. ಎಡೆಮಠದ ನಾಗದೇವಯ್ಯಗಳಪುಣ್ಯಸ್ತ್ರೀ ಮಸಣಮ್ಮ
೭. ಕದಿರ ಕಾಯಕದ ಕಾಳವ್ವೆ
೮. ಕದಿರ ರೆಮ್ಮವ್ವೆ
೯. ಕನ್ನಡಿ ಕಾಯಕದ ರೇವಮ್ಮ
೧೦. ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ
೧೧. ಕಾಲಕಣ್ಣಿಯ ಕಾಮಮ್ಮ
೧೨. ಕೊಂಡೆಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ
೧೩. ಕೊಟ್ಟಣದ ಸೋಮಮ್ಮ
೧೪. ಗಂಗಾಂಭಿಕೆ
೧೫. ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ
೧೬. ಗುಂಡಯ್ಯಗಳ ಪುಣ್ಯಸ್ತ್ರಿ ಕೇತಲದೇವಿ
೧೭. ಗೊಗ್ಗವ್ವೆ
೧೮. ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ
೧೯. ದುಗ್ಗಳೆ
೨೦. ನಾಗಲಾಂಬಿಕೆ
೨೧. ನೀಲಮ್ಮ
೨೨. ಒತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ
೨೩. ಬಾಚಿ ಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ
೨೪. ಬೊಂತಾದೇವಿ
೨೫. ಮುಕ್ತಾಯಕ್ಕ
೨೬. ಮೋಳಿಗೆ ಮಹಾದೇವಿ
೨೭. ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮ

೨೮. ರೇವಣ ಸಿದ್ಧಯ್ಯಗಳ ಪುಣ್ಯಸ್ತ್ರೀ ರೇಕಮ್ಮ
೨೯. ಸತ್ಯಕ್ಕ
೩೦. ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ
೩೧. ಸೂಳೆಸಂಕವ್ವೆ
೩೨. ಹಡಪದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ
೩೩. ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ

ಅಕ್ಕಮಹಾದೇವಿ: ಅಕ್ಕಮಹಾದೇವಿ ಭಾರತದ ಮಹಿಳಾ ಪ್ರಪಂಚದ ಗೌರವವನ್ನು ಹೆಚ್ಚಿಸಿದಾಕೆ. ಅಕ್ಕಮಹಾದೇವಿ ಶ್ರೇಷ್ಠ ಅನುಭಾವಿ, ಕವಯಿತ್ರಿ ಕೂಡ. ಭಾರತೀಯ ಅನುಭಾವ ಪರಂಪರೆಯಲ್ಲಿಯೇ ವಿಶೇಷವಾಗಿ ಕಂಡುಬರುತ್ತಾಳೆ. ವಚನ ಸಾಹಿತ್ಯ-ಎಂದಾಕ್ಷಣ ಬಸವಣ್ಣನ ಹೆಸರು ಪುರುಷರಲ್ಲಿ ನೆನಪಾಗುವಂತೆ ಅಕ್ಕಮಹಾದೇವಿಯ ಹೆಸರು ಸ್ತ್ರೀಯರಲ್ಲಿ ಮೊದಲಿಗೆ ನೆನಪಾಗುತ್ತದೆ. ಕಾವ್ಯಗಳಲ್ಲಿ ಉಕ್ತವಾಗಿರುವಂತೆ ಅಕ್ಕಮಹಾದೇವಿಯ ಜನ್ಮಸ್ಥಳ ಉಡುತಡಿ. ಇದನ್ನು ಉಡುಗಣಿ ಯೊಂದಿಗೆ ಸಮೀಕರಿಸಿ ವಿದ್ವಾಂಸರು ನೋಡಿದ್ದಾರೆ, ಅಕ್ಕಮಹಾದೇವಿಯ ತಂದೆ ನಿರ್ಮಲಶೆಟ್ಟಿ, ತಾಯಿ ಸುಮತಿ ಎಂದು ಹೇಳಿರುವುದು ಕಂಡುಬರುತ್ತದೆ. ಇವುಗಳು ಸಾಂಕೇತಿಕ ಅಥವಾ ಕಲ್ಪಿತ ಹೆಸರುಗಳಿರಬಹುದು ಎಂಬುದು ವಿದ್ವಾಂಸರ ಅಭಿಪ್ರಾಯ.

ಅರಸು ಕೌಶಿಕನೊಂದಿಗೆ ಮದುವೆಯಾದ ಘಟನೆ ಅಕ್ಕನ ಜೀವನದ ಬಹುಮುಖ್ಯ ಘಟ್ಟ. 'ಈ ಕೌಶಿಕ ಯಾರು? ಎಂಬುದು ಇನ್ನು ಸ್ಪಷ್ಟವಾಗಿಲ್ಲ. ಈ ಬಗೆಯ ಹೆಸರು ಅಂದು ಪ್ರಚಾರದಲ್ಲಿರಲಿಲ್ಲವಾಗಿ ಇದನ್ನೂ ನಾವು ಕಲ್ಪಿತ ನಾಮವೆಂದು ಇಟ್ಟುಕೊಳ್ಳಬಹುದಾದರೂ ಇಂಥ ಒಂದು ಘಟನೆ ಅವಳ ಜೀವನದಲ್ಲಿ ಸಂಭವಿಸಿದುದು ಸತ್ಯವೆಂದು ತೋರುತ್ತದೆ. ಇದನ್ನು ಘೋಷಿಸುವ ಧ್ವನಿಗಳು ಅವಳ ವಚನಗಳಲ್ಲಿ ಕೇಳಿಸುತ್ತವೆ. ಮಹಾದೇವಿಯ ಉಜ್ವಲ ಲಾವಣ್ಯಕ್ಕೆ ಮೋಹಿತನಾದ ಕೌಶಿಕ ಒತ್ತಾಯದಿಂದ ಅವಳನ್ನು ಮದುವೆಯಾದನೆಂದೂ ತನ್ನ ಭಕ್ತಿಜೀವನಕ್ಕೆ ಅಡ್ಡಿ ಬರದಂತೆ ವರ್ತಿಸಬೇಕೆಂದು ಮಹಾದೇವಿ ಶರತ್ತು ಹಾಕಿದಳೆಂದೂ ತಿಳಿದುಬರುತ್ತದೆ. ಆ ಶರತ್ತಿಗೆ ವ್ಯತಿರಿಕ್ತವಾಗಿ ನಡೆದುಕೊಂಡ ಕಾರಣ ಅವಳು ಅರಮನೆಯನ್ನು ತೊರೆದು ಮಲ್ಲಿಕಾರ್ಜುನ ಮೋಹಿತೆಯಾಗಿ ಹೊರಟಳೆಂದು ತಿಳಿದುಬರುತ್ತದೆ. ಆಕೆ ವಿಚಾರ ಸ್ವಾತಂತ್ರ್ಯದ ಮಹಿಳೆ. ಗಂಡ ಮತ್ತು ವಿಚಾರ ಸ್ವಾತಂತ್ರ್ಯ. ಈ ಎರಡು ಆಯ್ಕೆಗಳು ಆಹ್ವಾನವಾದಾಗ ಗಂಡನನ್ನು ಧಿಕ್ಕರಿಸಿ ವಿಚಾರ ಸ್ವಾತಂತ್ರ್ಯವನ್ನು ಆಯ್ದುಕೊಂಡುದು ಲೋಕದ ಇತಿಹಾಸದಲ್ಲಿಯೇ ಅಪರೂಪದ ಘಟನೆಯಾಗಿದೆ'.[೧] ಮಹಾದೇವಿಯಕ್ಕನ

೧. ಶಿವಶರಣೆಯರ ವಚನ ಸಂಪುಟ, (ಸಂ) ಡಾ. ವೀರಣ್ಣರಾಜೂರ, ಪ್ರಸ್ತಾವನೆ, ಪುಟ. ೧೩

೩೫೪ ವಚನಗಳು ಈಗ ಲಭ್ಯವಿದೆ. ಚೆನ್ನಮಲ್ಲಿಕಾರ್ಜುನ ಈಕೆಯ ವಚನಗಳ ಅಂಕಿತ. ಅವಳ ಭಾವಲಹರಿಯು ಅಭಿವ್ಯಕ್ತಗೊಂಡದ್ದು ಈ ವಚನಗಳ ಮೂಲಕವೇ ಭಾವಗೀತಾತ್ಮಕವಾದ ಅವಳ ವಚನಗಳಲ್ಲಿ ಜೀವನದ ನೋವು-ನಲಿವು, ವಿರಕ್ತಿ ವ್ಯಕ್ತಿತ್ವ, ಆಧ್ಯಾತ್ಮ ಎಲ್ಲವೂ ವ್ಯಕ್ತಗೊಂಡಿವೆ. ಹೆಣ್ಣೊಬ್ಬಳ ಸ್ವಂತಿಕೆಯನ್ನು ದಮನಮಾಡಿ ಆಕೆ ಮಕ್ಕಳೆರುವ ಸಾಧನ ಎಂಬಂತಿದ್ದ ಅಂದಿನ ಸಮಾಜಕ್ಕೆ ತಕ್ಕ ಉತ್ತರ ನೀಡಿದವಳು ಅಕ್ಕ. ಜೀವವಿರೋಧಿ, ಸ್ತ್ರೀ ವಿರೋಧಿ ಸಮಾಜಕ್ಕೆ, ಸಾಮಾಜಿಕ ಬಂಧನಕ್ಕೆ ಬೆನ್ನು ತಿರುಗಿಸಿ ಸ್ವಾತಂತ್ರ್ಯದ ಹಾದಿ ಹಿಡಿದಳು.

ಆಕರ್ಷಕ ಶಬ್ದ ಚಿತ್ರಗಳು ಸುಂದರ ಉಪಮೆ ರೂಪಕಗಳು ಮೃದು ಮಧುರ ಭಾಷೆಗಳ ಮೂಲಕ ಸೃಷ್ಟಿಯಾದ ಅಕ್ಕನ ವಚನಗಳು ಚಿಕ್ಕ ಚಿಕ್ಕ ಸಾಲುಗಳಲ್ಲೇ ಅಮೂರ್ತ ವಾದದನ್ನ ಮೂರ್ತ ರೂಪದಲ್ಲಿ ಕಟ್ಟಿಕೊಡುತ್ತವೆ. ಅಕ್ಕ ತನ್ನ ಚೆನ್ನಮಲ್ಲಿಕಾರ್ಜುನನನ್ನು ಹುಡುಕುವ ಪರಿ ಇಂತಿದೆ.

‘ಚಿಲಿಪಿಲಿ ಎಂದು ಓದುವ ಗಿಳಿಗಳಿರಾ
ನೀವು ಕಾಣಿರೆ, ನೀವು ಕಾಣಿರೆ
ಸರವೆತ್ತಿ ಪಾಡುವ ಕೋಗಿಲೆಗಳಿರಾ
ನೀವು ಕಾಣೀರೆ, ನೀವು ಕಾಣಿರೆ
ಎರಗಿ ಬಂದಾಡುವ ತುಂಬಿಗಳಿರಾ
ನೀವು ಕಾಣಿರೆ, ನೀವು ಕಾಣಿರೆ
ಕೊಳನತಡಿಯೊಳಾಡುವ ಹಂಸೆಗಳಿರಾ
ನೀವು ಕಾಣಿರೆ, ನೀವು ಕಾಣಿರೆ
ಗಿರಿ ಗಹ್ವರದೊಳಗಾಡುವ ನವಿಲುಗಳಿರಾ
ನೀವು ಕಾಣಿರೆ, ನೀವು ಕಾಣಿರೆ
ಚೆನ್ನಮಲ್ಲಿಕಾರ್ಜುನನೆಲ್ಲಿದ್ದಹನೆಂದು ಹೇಳಿರೆ’[೧]

ಯೋಗಾಂಗ ತ್ರಿವಿಧಿ, ಸೃಷ್ಟಿಯ ವಚನ, ಮಂತ್ರಗೋಪ್ಯಗಳೆಂಬ ಲಘು ಕೃತಿಗಳನ್ನು ಅಕ್ಕ ಬರೆದಿದ್ದರೂ ಅವಳ ವಚನಗಳಲ್ಲಿ ಮಾತ್ರ ಅಂತರಂಗದರ್ಶನ ಸಾಧ್ಯ. ಅಕ್ಕನ ವಚನಗಳು ವಚನಸಾಹಿತ್ಯದಲ್ಲಿ ಎಲ್ಲಾ ದೃಷ್ಟಿಯಿಂದಲೂ ಪ್ರತ್ಯೇಕವಾದ ಸ್ಥಾನ ಪಡೆದಿವೆ. ಅಕ್ಕನ ವಚನಗಳು ಅವಳ ವ್ಯಕ್ತಿತ್ವಕ್ಕೆ ಬರೆದ ವ್ಯಾಖ್ಯಾನಗಳಂತಿವೆ.

೧. ಶಿವಶರಣೆಯರ ವಚನ ಸಂಪುಟ -೫, (ಸಂ) ಡಾ. ವೀರಣ್ಣರಾಜೂರ, ವ- ೧೭೪, ಪು. ೫೫

ಅಕ್ಕಮ್ಮ: ಅಕ್ಕಮ್ಮನ ಜೀವನ ವೃತ್ತಿ ಇತ್ಯಾದಿ ವಿಷಯಗಳ ಬಗೆಗೆ ಹೆಚ್ಚಿನ ವಿವರಗಳೇನೂ ತಿಳಿದುಬರುವುದಿಲ್ಲ. ಶರಣೆಯರ ಸಮೂಹದಲ್ಲಿ 'ರೆಮ್ಮವ್ವೆ' ಎಂಬ ಹೆಸರಿನ ಐದು ಜನರಿದ್ದು, ಒಬ್ಬ ಶರಣೆ 'ಅಕ್ಕಮ್ಮ' ಹೆಸರಿನಿಂದ ಪ್ರಸಿದ್ಧಳಾಗಿದ್ದಾಳೆ. ಅಂದರೆ ರೆಮ್ಮವ್ವೆಗೆ ಅಕ್ಕಮ್ಮ ಎಂಬ ಇನ್ನೊಂದು ಹೆಸರಿರುವುದು ವ್ಯಕ್ತವಾಗಿದೆ. 'ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗ' ಎಂಬ ಅಂಕಿತದ ಈಕೆಯ ೧೫೩ ವಚನಗಳು ಸದ್ಯ ದೊರೆತಿವೆ. ಸಂಖ್ಯೆ ದೃಷ್ಟಿಯಿಂದ ಅಕ್ಕಮಹಾದೇವಿಯ ನಂತರದ ಸ್ಥಾನ ಈಕೆಯದು. ವ್ರತ ನಿಯಮಗಳನ್ನು ಬದುಕಿನಲ್ಲಿ ಹಾಸು ಹೊಕ್ಕಾಗಿಸಿಕೊಂಡಿದ್ದ ಶರಣೆ ಈಕೆ. ವ್ರತಭ್ರಷ್ಟರನ್ನು ಆಚಾರಹೀನರನ್ನು ತೀರ ಅಸಹ್ಯವಾಗಿ ಕಂಡಿದ್ದಾಳೆ. ಅಕೆಯ ಒಂದು ವಚನ ಹೀಗಿದೆ.

'ಏರಿಯ ಕೆಳಗೆ ಬಿದ್ದ ನೀರು ಪೂರ್ವದ ತಟಾಕಕ್ಕೆ ಏರಬಲ್ಲುದೆ?
ವ್ರತಾಚಾರವ ಮೀರಿ ಕೆಟ್ಟ ಅನಾಚಾರಿ ಸದ್ಭಕ್ತರ ಕೂಡಬಲ್ಲನೆ?
ದೇವಾಲಯದಲ್ಲಿ ಸತ್ತಡೆ ಸಂಪ್ರೋಕ್ಷಣವಲ್ಲದೆ
ದೇವರು ಸತ್ತಲ್ಲಿ ಉಂಟೆ ಸಂಪ್ರೋಕ್ಷಣ?
ಅಂಗದಲ್ಲಿ ಮರವೆಗೆ ಹಿಂಗುವ ಠಾವಲ್ಲದೆ
ಮನವರಿದು ತಾಕು ಸೋಂಕಿಗೆ ಹೆದರದೆ ಕೂಡಿದ
ದುರ್ಗುಣಕ್ಕುಂಟೆ ಪ್ರಾಯಶ್ಚಿತ್ತ?
ಇಂತಿವ ಕಂಡಲ್ಲಿ ಗುರುವಾದಡೂ ಬಿಡಬೇಕು
ಲಿಂಗವಾದಡೂ ಬಿಡಬೇಕು; ಜಂಗಮವಾದಡೂ ಬಿಡಬೇಕು
ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವಾದರೂ ಬಿಡಬೇಕು.[೧]

ಅಕ್ಕಮ್ಮ ಆಚಾರವಂತಳೂ, ನೀತಿವಂತಳೂ, ಕಾಯಕನಿಷ್ಠಳೂ ಆಗಿದ್ದ ಶರಣೆ ಎಂಥ ಸಂದರ್ಭದಲ್ಲೂ ಹಿಡಿದ ನಿಯಮಗಳನ್ನು ಬಿಡದ ಛಲ, ತನ್ನ ಗುರಿ ಈಡೇರಿಸಿಕೊಳ್ಳುವ ಧೈರ್ಯ ಬೇಕು ಎನ್ನುವ ಮನೋಭಾವ ಈಕೆಯದು. ವ್ರತನಿಯಮಗಳ ಆಚರಣೆಯಲ್ಲಿ ತೀವ್ರ ಆಸಕ್ತಿ ಹೊಂದಿದ್ದಳು. ವ್ರತ ಭ್ರಷ್ಟರೂ ಆಚಾರವಿಹೀನರು ಮತ್ತು ವೇಷಧಾರಿಗಳನ್ನು ಅಕ್ಕಮ್ಮ ಕಟುವಾಗಿ ಟೀಕಿಸಿದ್ದಾಳೆ. 'ವೇಷವೆಲ್ಲಿರದು? ಸೂಳೆಯಲ್ಲಿ, ಡೊಂಬರಲ್ಲಿ ಭೈರೂಪಿಗಳಲ್ಲಿ ಇರದೆ? ವೇಷವ ತೋರಿ ಒಡಲ ಹೊರೆವ ದಾಸಿವೇಶಿಯ ಮಕ್ಕಳಿಗೆ ನಿಜಭಕ್ತಿ ಎಲ್ಲಿಯದು? ತೋರಿಕೆಯ ಚಿಲುಮೆಯಗ್ಘವಣಿಯ ವ್ರತಧಾರಿಗಳನ್ನು ಭರತಾರ್ಪಣದ ಭವಭಾರಿಗಳನ್ನು, ಕಟ್ಟಳೆಗೊಳಗಾದ ಯಾಂತ್ರಿಕ ಶೀಲವ್ರತ ನೇಮಧಾರಿಗಳನ್ನು ವಾಮಮಾರ್ಗದಿಂದ ಗಳಿಸಿ

---

೧. ಶಿವಶರಣೆಯರ ವಚನ ಸಂಪುಟ-೫, ವಚನ-೩೮೦, ಪುಟ. ೧೨೦

ತಾರು ಗುರುಲಿಂಗಜಂಗಮಕ್ಕೆ ಮಾಡುವೆನೆಂಬ ಅನಾಚಾರಿಗಳನ್ನು ವಿಡಂಬಿಸುತ್ತಾಳೆ'.[೧] ಕಾವ್ಯ ಗುಣ ಅಷ್ಟಾಗಿ ಈಕೆಯ ವಚನಗಳಲ್ಲಿ ಕಂಡುಬರುವುದಿಲ್ಲ. ವ್ರತ ನೇಮ, ಶೀಲ, ಆಚಾರ ಹಾಗೂ ಏಕದೈವ ನಿಷ್ಠೆಗಳನ್ನು ತನ್ನ ವಚನಗಳ ಮೂಲಕ ಅಭಿವ್ಯಕ್ತಿಸಿದ್ದಾಳೆ.

ಅಮುಗೆ ರಾಯಮ್ಮ: ಅಮುಗೆರಾಯಮ್ಮ ಬಸವಯುಗದ ಪ್ರಮುಖ ವಚನಕಾರ್ತಿ. ಈಕೆಯ ವೈಯಕ್ತಿಕ ಬದುಕಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಅಲಭ್ಯ. ವಚನಕಾರ ಅಮುಗೆ ದೇವಯ್ಯ ರಾಯಮ್ಮನ ಪತಿ. ಅಮುಗೆದೇವಯ್ಯ ಮತ್ತು ರಾಯಮ್ಮ ದಂಪತಿಗಳು ನೆಯ್ಗೆಯ ಕಾಯಕದ ಲಿಂಗಭಕ್ತರು. ಪತಿ ಅಮುಗೆ ದೇವಯ್ಯಗಳ ಹೆಸರನ್ನೇ ತನ್ನ ಇಷ್ಟದೈವಕ್ಕೆ ಆರೋಪಿಸಿ 'ಅಮುಗೇಶ್ವರ ಲಿಂಗ' ಅಂಕಿತದಲ್ಲಿ ರಾಯಮ್ಮ ವಚನಗಳನ್ನು ರಚಿಸಿದ್ದಾಳೆ. ಈಕೆಯ ೧೧೧ಳ ವಚನಗಳು ದೊರೆತಿವೆ. ಅಕ್ಕಮ್ಮನಂತೆ ಆಚಾರಶೀಲಳಾದ ಈಕೆಯ ವಚನಗಳಲ್ಲೂ ಆಚಾರವೇ ಪ್ರಧಾನ ವಸ್ತು. ಅಕ್ಕಮ್ಮನಿಗಿಂತಲೂ ಹೆಚ್ಚು ತೀಕ್ಷ್ಣ ಮತ್ತು ಕಟುವಾಗಿ ಸಮಾಜ ವಿಮರ್ಶೆ ಮಾಡಿದ್ದಾಳೆ. ಆಕೆಯ ವಚನವೊಂದು ಹೀಗಿದೆ.

'ಎನ್ನ ಕಣ್ಣೊಳಗಣ ಕಟ್ಟಿಗೆಯ ಮುರಿವವರನಾರನೂ ಕಾಣೆ
ಎನ್ನ ಕಾಲೋಳಗಣ ಮುಳ್ಳ ತೆರೆವವರನಾರನೂ ಕಾಣೆ
ಎನ್ನ ಅಂಗದಲ್ಲಿದ್ದ ಅಹಂಕಾರವ ಸುಡುವವರಾನಾರನೂ ಕಾಣೆ
ಎನ್ನ ಮನದಲ್ಲಿಪ್ಪ ಮಾಯಾ ಪ್ರಪಂಚವ
ಕಡಿಸುವವರನಾರನೂ ಕಾಣೆನಯ್ಯಾ
ಆದ್ಯರ ವೇದ್ಯರ ವಚನಗಳಿಂದ
ಅರಿದೆವೆಂಬವರು ಅರಿಯಲಾರರು ನೋಡಾ
ಎನ್ನ ಕಣ್ಣೊಳಗಣ ಕಟ್ಟಿಗೆಯ ನಾನೆ ಮುರಿಯಬೇಕು
ಎನ್ನ ಕಾಲೊಳಗಣ ಮುಳ್ಳ ನಾನೆ ತೆಗೆಯಬೇಕು
ಎನ್ನ ಅಂಶದಲ್ಲಿಪ್ಪ ಅಹಂಕಾರವ ನಾನೆ ಸುಡಬೇಕು
ಎನ್ನ ಮನದಲ್ಲಿಪ್ಪ ಮಾಯಾಪ್ರಪಂಚವ ನಾನೆ ಕಳೆಯಬೇಕು
ಅಮುಗೇಶ್ವರಲಿಂಗವ ನಾನೆ ಅರಿಯಬೇಕು.[೨]

ಅಂದಿನ ಸಾಮಾಜಿಕ ಮತ್ತು ಧಾರ್ಮಿಕ ವಿಚಾರವಾಗಿ ರಾಯಮ್ಮ ತುಂಬಾ ವ್ಯಾಪಕವಾಗಿ ಆಲೋಚಿಸಿದ್ದಾಳೆ. ಸಾಮಾಜಿಕ ಕಾಳಜಿಯೇ ಪ್ರಧಾನವಾಗಿ ಈಕೆಯ ವಚನಗಳಲ್ಲಿ ಕಂಡುಬರುತ್ತದೆ. ವಿಚಾರವಂತಿಕೆ , ಧೈರ್ಯ, ಛಲ, ನ್ಯಾಯ, ನಿಷ್ಠುರತೆ

---

೧. ಶಿವಶರಣೆಯರ ವಚನ ಸಂಪುಟ –೫, ಸಂ. ಡಾ. ವೀರಣ್ಣರಾಜೂರ, ಪ್ರಸ್ತಾವನೆ, ಪು. ೧೬
೨. ಅದೇ, ವಚನ–೫೩೨, ಪುಟ. ೧೭೩

ರಾಯಮ್ಮನ ಗುಣಸ್ವಭಾವ. ವ್ಯಂಗ್ಯ, ವಿಡಂಬನೆಯಿಂದ ಕೂಡಿದ ಕಟುಭಾಷೆ, ಮೊನಚುಮಾತು ಈಕೆಯ ಅಭಿವ್ಯಕ್ತಿಯ ಶಕ್ತಿ. ರಾಯಮ್ಮ ತಾರತಮ್ಯ ನೀತಿ, ಡಾಂಭಿಕತೆ, ಅನಾಚಾರ, ಅಸಮಾನತೆಯನ್ನು ವಿರೋಧಿಸುತ್ತಾಳೆ. ಸಾಮಾಜಿಕವಾಗಿ ಚಿಂತನೆ, ಚರ್ಚೆ, ವಿಶ್ಲೇಷಣೆ ಮತ್ತು ವ್ಯಾಖ್ಯಾನಗಳೇ ಅಧಿಕವಾಗಿ ಕಂಡುಬರುವ ರಾಯಮ್ಮನ ವಚನಗಳಲ್ಲಿ ಕಾವ್ಯಗುಣ ಗೌಣವಾಗಿದ್ದರೂ ಜೀವನಾನುಭವವು ಅರ್ಥಪೂರ್ಣ ಮಾತುಗಳಲ್ಲಿ ಪರಿಣಾಮಕಾರಿಯಾಗಿ ಅಭಿವ್ಯಕ್ತಗೊಂಡಿವೆ.

ರಾಯಮ್ಮ ಬಳಸುವ ಕೆಲವು ಸುಂದರ ಸೂತ್ರಬದ್ಧ ವಾಕ್ಯಗಳು ಗಾದೆ, ನುಡಿಗಟ್ಟುಗಳು, ವಚನಗಳಿಗೆ ವಿಶೇಷ ಧ್ವನಿ, ಸತ್ವವನ್ನು ತಂದುಕೊಟ್ಟಿವೆ. "ಆಕಾಶ ಹಾರುವಂಗೆ ಗೋವಿಯ ಕೋಲ ಹಂಗೇತಕಯ್ಯಾ? ಗಗನವ ಮುಟ್ಟುವಂಗೆ ಅಗಣಿತನ ಸುದ್ದಿಯೇಕೆ?" ಮರುಜವಣಿ ಕಡ್ಡಿಕೆಯಲ್ಲಿದ್ದವಂಗೆ ಸರ್ಪ ಕಚ್ಚಬಲ್ಲುದೆ? ಕಾಗೆಮರಿ ಕೋಗಿಲೆಯಾಗಬಲ್ಲುದೆ? ಆಡಿನ ಮರಿ ಆನೆಯಾಗಲ್ಲುದೆ? ಸೀಳುನಾಯಿ ಸಿಂಹದ ಮರಿಯಾಗಬಲ್ಲುದೆ? ಈ ಮೂಲಕ ಹೋಲಿಕೆಗಳನ್ನು ನೀಡಿ ವಚನ ಕಟ್ಟುವ ರೀತಿ ಆಕರ್ಷಣೀಯ.

ಆಯ್ದಕ್ಕಿ ಲಕ್ಕಮ್ಮ: ಆಯ್ದಕ್ಕಿ ಲಕ್ಕಮ್ಮ ಆಯ್ದಕ್ಕಿ ಮಾರಯ್ಯನ ಪತ್ನಿ ಅಪವಿತ್ರ ಗಳಿಕೆಯನ್ನು ವಿರೋಧಿಸಿ ಶರಣರು ನಿರೂಪಿಸಿದ ಕಾಯಕತತ್ವ, ದಾಸೋಹ ತತ್ವಗಳನ್ನು ಪೂರ್ಣವಾಗಿ ಒಪ್ಪಿ ಅದರಂತೆ ಬದುಕಿದ ಶರಣದಂಪತಿಗಳು ಇವರು. ರಾಯಚೂರು ಜಿಲ್ಲೆಯ ಲಿಂಗಸೂರು ತಾಲ್ಲೂಕಿನ ಅಮರೇಶ್ವರ ಇವರ ಸ್ಥಳ. ಬಸವಣ್ಣನವರ ಬಗೆಗೆ ತಿಳಿದು ಅಲ್ಲಿಂದ ಕಲ್ಯಾಣಕ್ಕೆ ಬಂದು ಅಲ್ಲಿ ಮಹಾಮನೆಯಲ್ಲಿ ಇದ್ದು, ಅಲ್ಲಿ ಅಕ್ಕಿ ಆಯ್ದು ತಂದು ದಾಸೋಹ ಮಾಡು ಕಾಯಕವನ್ನು ಕೈಗೊಳ್ಳುತ್ತಾರೆ. ಲಕ್ಕಮ್ಮನ ೨೫ ವಚನಗಳು ಲಭ್ಯವಾಗಿವೆ. ಪತಿ ಮಾರಯ್ಯ ಹಾಗೂ ಇಷ್ಟ ದೈವ ಅಮಲೇಶ್ವರ ಲಿಂಗ ಸೇರಿದ ರೂಪವಾಗಿ 'ಮಾದಯ್ಯಪ್ರಿಯ ಅಮಲೇಶ್ವರ ಲಿಂಗ' ಲಕ್ಕಮ್ಮನ ವಚನಗಳ ಅಂಕಿತವಾಗಿದೆ.

ಬಸವಣ್ಣ ಒಮ್ಮೆ ಮಹಾಮನೆಯ ಅಂಗಳದಲ್ಲಿ ನಿತ್ಯಕ್ಕಿಂತ ಹೆಚ್ಚು ಅಕ್ಕಿ ಸುರಿಸುತ್ತಾರೆ. ಮಾರಯ್ಯ ಅಂದು ಹೆಚ್ಚು ಅಕ್ಕಿ ಆಯ್ದು ತಂದು ಹೆಂಡತಿ ಲಕ್ಕಮ್ಮನಿಗೆ ನೀಡಿದಾಗ ಆಕೆ 'ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ, ಇದು ನಿಮ್ಮ ಮನವೋ ಬಸವಣ್ಣನ ಅನುಮಾನ ಚಿತ್ತವೋ?' ಎಂದು ಹೇಳುತ್ತಾ ಹೀಗೆ ಹೇಳುತ್ತಾಳೆ.

ಆಸೆಯೆಂಬುದು ಅರಸಿಂಗಲ್ಲದೆ
ಶಿವಭಕ್ತರಿಗುಂಟೆ ಅಯ್ಯಾ?
ರೋಷವೆಂಬುದು ಯಮದೂತರಿಗಲ್ಲದೆ

ಅಜಾತರಿಗುಂಟೆ ಅಯ್ಯಾ?
ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ
ಮಾರಯ್ಯಪ್ರಿಯ ಅಮಲೇಶ್ವರ ಲಿಂಗಕ್ಕೆ ದೂರ ಮಾರಯ್ಯ[೧]

ಈ ರೀತಿ ಹೇಳಿ ಹೆಚ್ಚಿನದನ್ನು ಮರಳಿ ಅಲ್ಲೇ ಸುರಿದು ಬರುವಂತೆ ಹೇಳುತ್ತಾಳೆ. ಗುರುವಾಗಲೀ, ಲಿಂಗವಾಗಲೀ, ಜಂಗಮವಾಗಲೀ ಕಾಯಕದಿಂದಲೇ ಮುಕ್ತಿ, ಸತ್ಯಶುದ್ಧ ಕಾಯಕದಿಂದ ಬಂದದ್ದು ಮಾತ್ರ ದೇವರಿಗೆ ಅರ್ಪಿತಯೋಗ್ಯ. ಕಾಯಕದಲ್ಲಿ ಮೇಲು-ಕೀಳುಗಳಿಲ್ಲ ಎಂದು ಸಾರಿದ ಲಕ್ಕಮ್ಮ ಶರಣ ಚಳವಳಿಯ ಕಾಯಕ ತತ್ವ ಮೌಲ್ಯಗಳಿಗೆ ಜೀವಂತ ಉದಾಹರಣೆಯಾಗಿ ನಿಂತಳು. 'ಕಳುವ ಚೋರಂಗೆ ಬಡವರೆಂದು ದಯೆವುಂಟೆ?' 'ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ; ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ, ದೃಢವಿಲ್ಲದ ಭಕ್ತಿ ಅಡಿಯೊಡೆದ ಕುಂಭದಲ್ಲಿ ಸುಜಲವ ತುಂಬಿದಂತೆ' 'ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ, ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ ಸದ್ಭಕ್ತಂಗೆ ಎತ್ತ ನೋಡಿದಡತ್ತ, ಲಕ್ಷ್ಮಿ ತಾನಾಗಿಪ್ಪಳು'. ಈ ಮುಂತಾದ ಸರಳ, ನೇರ, ಸೂತ್ರಪ್ರಾಯವಾದ ಉಕ್ತಿಗಳು ಲಕ್ಕಮ್ಮನ ವಚನಗಳ ಭಾವಶ್ರೀಮಂತಿಕೆಯನ್ನು ಹೆಚ್ಚಿಸಿವೆ.

ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ: ಈಕೆಯ ೧೨ ವಚನಗಳು ದೊರೆತಿವೆ. 'ಉರಿಲಿಂಗ ಪೆದ್ದಿಗಳರಸ' ಈಕೆಯ ವಚನಗಳ ಅಂಕಿತ. ಬಸವಣ್ಣನವರ ಸಮಕಾಲೀನ ವಚನಕಾರ ಉರಿಲಿಂಗಪೆದ್ದಿಯ ಸತಿ ಈಕೆ. ಭಕ್ತನ ಲಕ್ಷಣ, ಕಾಯಕನಿಷ್ಠೆ, ಪ್ರಸಾದದ ಮಹಿಮೆ, ವ್ರತಾಚರಣೆಯ ಮಹತ್ವ ಇವು ಈಕೆಯ ವಚನಗಳಲ್ಲಿ ಕಾಣುವ ಮುಖ್ಯ ಅಂಶಗಳಾಗಿವೆ. ದಲಿತ ವಚನಕಾರ್ತಿ ಕಾಳವ್ವೆಯ ವಚನಗಳಲ್ಲಿ ಜಾತಿ ವ್ಯವಸ್ಥೆಯಿಂದ, ಅಸ್ಪೃಶ್ಯ ಆಚರಣೆಗಳಿಂದ ಅಪಮಾನಿತಗೊಂಡ ನೊಂದ ಮನಸ್ಸಿನ ಆಕ್ರೋಶ ತುಂಬಿದೆ. ಕೀಳುಕುಲವೆಂಬ ಅಪಮಾನಕ್ಕೆ ಗುರಿಯಾದವರ ಪರವಾಗಿ ಮಾತನಾಡುವ ಕಾಳವ್ವೆ ಬ್ರಾಹ್ಮಣ ಕುಲದ ಶ್ರೇಷ್ಠತೆಯನ್ನು ಕಟುವಾಗಿ ವಿಡಂಬಿಸುತ್ತಾಳೆ. ಕಾಯಕದ ಬಗೆಗೆ ಭಕ್ತರ ಬಗೆಗೆ ತನ್ನ ವಚನವೊಂದರಲ್ಲಿ ಹೀಗೆ ಹೇಳುತ್ತಾಳೆ.

ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ
ಸತ್ಯಶುದ್ಧವಿಲ್ಲದುದು ಕಾಯಕವಲ್ಲ
ಆಸೆಯೆಂಬುದು ಭವದ ಬೀಜ
ನಿರಾಸೆಯೆಂಬುದು ನಿತ್ಯಮುಕ್ತಿ
ಉರಿಲಿಂಗ ಪೆದ್ದಿಗಳರಸನಲ್ಲಿ ಸದರವಿಲ್ಲ ಕಾಣವ್ವಾ[೨]

---

೧. ಶಿವಶರಣೆಯರ ವಚನ ಸಂಪುಟ-೫, ವಚನ-೬೨೮, ಪುಟ. ೨೦೦
೨. ಅದೇ, ವಚನ-೬೫೪, ಪುಟ. ೨೦೬.

ಯಜ್ಞಯಾಗಾದಿಗಳ ಹೆಸರಿನಲ್ಲಿ ಜೀವಹಿಂಸೆಗೈಯುವುದನ್ನು ಅತ್ಯಂತ ಕಟುವಾಗಿ ಖಂಡಿಸುತ್ತಾಳೆ. ಶಿವಭಕ್ತರು ಹೊತ್ತಾರೆಯೆದ್ದು ಗುರುಲಿಂಗ ಜಂಗಮಕ್ಕೆ ಶರಣೆನ್ನದೆ ಮುನ್ನ ಬ್ರಾಹ್ಮಣನ ಕಂಡು ಶರಣಾರ್ಥಿ ಎಂದೆಡೆ ಎಂಬತ್ನಾಲ್ಕು ಲಕ್ಷಯೋನಿಯಲ್ಲಿ ಹಂದಿಯ ಬಸುರಲ್ಲಿ ಒಪ್ಪುದು ಬಪ್ಪುದು ಎಂದು ಹೇಳುವ ಕಾಳವ್ವೆಯ ಮಾತಿನಲ್ಲಿ ನೊಂದವರ ನೋವಿನ ಧ್ವನಿ ಇದೆ. ಒಬ್ಬ ಸಾಮಾನ್ಯ ಹೆಣ್ಣು ವ್ಯವಸ್ಥೆಯ ಎದುರು ಇಷ್ಟು ದಿಟ್ಟತನದಿಂದ ಧ್ವನಿಯೆತ್ತಿ ಮಾತಾಡಿದದೇ ಶರಣ ಚಳವಳಿ ನೀಡಿದ ಸ್ವಾತಂತ್ರ್ಯಕ್ಕೆ ಉದಾಹರಣೆ ಎನ್ನಬಹುದು. ಶತಮಾನಗಳಿಂದ ಪ್ರಶ್ನಾತೀತವಾಗಿದ್ದ ಜಾತಿ ವ್ಯವಸ್ಥೆಯನ್ನು, ದೌರ್ಜನ್ಯವನ್ನು ಪ್ರತಿಭಟಿಸುವ ಕಾಳವ್ವೆಯ ವಚನಗಳು ಅವಳ ಎದೆಗಾರಿಕೆಗೆ ಕೆಚ್ಚಿಗೆ ಸ್ಪಷ್ಟ ನಿದರ್ಶನಗಳಾಗಿವೆ.

ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ: ಈಕೆಯ ಒಂದು ವಚನ ಮಾತ್ರ ದೊರೆತಿದೆ. ಈಕೆಯ ವಚನದ ಅಂಕಿತ 'ನಿಜಗುಣೇಶ್ವರಲಿಂಗ' ಎಂಬುದು. ಮಸಣಮ್ಮ ಎಡೆಮಠದ ನಾಗಿದೇವಯ್ಯನ ಹೆಂಡತಿ. ಎಡೆಮಠದ ನಾಗಿದೇಯ್ಯನು ಕಾಂಚೀನಗರದವನಾಗಿದ್ದು ಅಲ್ಲಿಂದ ಕರ್ನಾಟಕಕ್ಕೆ ಬಂದು ನೆಲೆಸುತ್ತಾರೆ. ಕೃಷ್ಣ ನದಿ ತೀರದ ಚಿಮ್ಮಲಗಿಯ ಸಮೀಪದಲ್ಲಿ ವಾಸಿಸುತ್ತಾರೆ. ಅಲ್ಲಿಯೇ ಇದ್ದು ಶರಣ ನಿಜಗುಣೇಶ್ವರನನ್ನ ಮಸಣಮ್ಮ ತನ್ನ ಗುರುವಾಗಿ ಸ್ವೀಕರಿಸುತ್ತಾಳೆ. ಗುರುವಿನ ಹೆಸರನ್ನೇ ಅಂಕತವಾಗಿ ಬಳಸಿಕೊಂಡಿರುವುದು ತಿಳಿದುಬರುತ್ತದೆ.

> ಕಾಗೆಯ ನಾಯ ತಿಂದವರಿಲ್ಲ
> ವ್ರತ ಭ್ರಷ್ಟನ ಕೂಡಿದವರಿಲ್ಲ
> ನಾಯಿಗೆ ನಾರಂಗವಕ್ಕುವುದೇ?
> ಲೋಕದ ನರಂಗೆ ವ್ರತವಕ್ಕುವುದೆ ಶಿವಬೀಜಕಲ್ಲದೆ?
> ನೀವೆ ಸಾಕ್ಷಿ ನಿಜಗುಣೇಶ್ವರಲಿಂಗದಲ್ಲಿ[೧]

ವ್ರತವು ಶಿವಭಕ್ತನಿಗೆ ಮಾತ್ರ ಸಲ್ಲುತ್ತದೆ. ಸಾಮಾನ್ಯನಿಗಲ್ಲ ಎನ್ನುತ್ತಾ ಆಕೆ ಕಾಗೆ ನಾಯಿ ತಿಂದವರಿಲ್ಲ, ವ್ರತಭ್ರಷ್ಟನ ಕೂಡಿದವರಿಲ್ಲ ಎಂದು ವ್ರತಬಾಹಿರನನ್ನು ನಿಂದಿಸುತ್ತಾಳೆ.

ಕದಿರ ಕಾಯಕದ ಕಾಳವ್ವೆ: ಈಕೆಯ ಕಾಲ ೧೧೬೦. ಈಕೆಯ ವಚನಗಳ ಅಂಕಿತ 'ಗುಮ್ಮೇಶ್ವರ'. ಈಕೆಯ ಒಂದು ವಚನ ಮಾತ್ರ ದೊರೆತಿದೆ. ಈಕೆಯ ಹೆಸರಿನ ಹಿಂದಿರುವ ವಿಶೇಷಣದಿಂದ ಈಕೆ ರಾಟೆಯಿಂದ ನೂಲು ತೆಗೆಯುವ ಕಾಯಕ–

---

೧. ಶಿವಶರಣೆಯರ ವಚನ ಸಂಪುಟ(೫) ವಚನ-೬೬೦, ಪುಟ. ೨೦೬

ದವಳೆಂದು ತಿಳಿದುಬರುತ್ತದೆ. ಕದಿರು ಮುರಿಯಲು ಕಾರ್ಯ ನಿಲ್ಲುವಂತೆ ವ್ರತಹೀನನನ್ನು ಕೂಡಿದರೆ ಜೀವನ ವ್ಯರ್ಥ ಎನ್ನುವ ಆಶಯ ಈಕೆಯ ವಚನದಲ್ಲಿದೆ. ವ್ರತನಿಷ್ಠೆಯ ಮೌಲ್ಯವನ್ನು ಈಕೆಯ ವಚನ ಹೀಗೆ ಸಾರುತ್ತದೆ.

ಕದಿರು ಮುರಿಯೆ ಏನೂ ಇಲ್ಲ
ವ್ರತಹೀನನ ನೆರೆಯಲಿಲ್ಲ ಗುಮ್ಮೇಶ್ವರಾ[೧]

ಕದಿರ ರೆಮ್ಮವ್ವೆ: ಈಕೆ ರೆಮ್ಮವ್ವೆ ರೆಮ್ಮವ್ವೆ ನಾಮಾಂತರಗಳಿಂದ ಗುರುತಿಸಲಾಗಿರುವ ವಚನಕಾರ್ತಿ. ಈಕೆಯ ಕಾಲ ೧೧೬೦. ಹರಿಹರ ತನ್ನ ಲಿಂಗಾರ್ಚನೆಯ ರಗಳೆಯಲ್ಲಿ ಇತರ ಶಿವಶರಣೆಯರ ಜೊತೆಗೆ ರೆಮ್ಮೆವ್ವೆಯನ್ನು ಸ್ಮರಿಸಿದ್ದಾನೆ. ರೆಮ್ಮೆವ್ವೆಯ ನಾಲ್ಕು ವಚನಗಳು ಮಾತ್ರ ದೊರೆತಿವೆ. 'ಕದಿರೆಮ್ಮಿಯೊಡೆಯ ಗುಮ್ಮೇಶ್ವರ' ಈಕೆಯ ವಚನಗಳ ಅಂಕಿತ. ಎರಡು ವಚನಗಳಲ್ಲಿ ಸತಿಪತಿ ಭಾವ, ಉಳಿದ ಒಂದರಲ್ಲಿ ಶರಣಸ್ತುತಿ ಇನ್ನೊಂದರಲ್ಲಿ ಕಾಯಕದ ಮಹತ್ವ ತಿಳಿಸಲಾಗಿದೆ. ನಾಲ್ಕರಲ್ಲಿ ಮೂರು ಬೆಡಗಿನ ವಚನಗಳಾಗಿದ್ದು ಒಂದು ಸರಳ ವಚನವಾಗಿದೆ.

ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ!
ಅಡಿಯ ಹಲಗೆ ಬ್ರಹ್ಮ ತೋರಣ ಎಷ್ಟು
ನಿಂದ ಬೊಂಬೆ ಮಹಾರುದ್ರ
ರುದ್ರನ ಬೆಂಬಳಿಯವೆರಡು ಸೂತ್ರಕರ್ಣ
ಅರಿವೆಂಬ ಕದಿರು, ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿ
ಸುತ್ತಿತ್ತು ನೂಲು; ಕದಿರು ತುಂಬಿತ್ತು
ರಾಟೆಯ ತಿರುಹಲಾರೆ ಎನ್ನ ಗಂಡ ಕುಟ್ಟಿಹ
ಇನ್ನೇವೆ ಕದಿರರೆಮ್ಮಿಯೊಡೆಯ ಗುಮ್ಮೇಶ್ವರಾ?[೨]

ಶುದ್ಧಕಾಯಕ ಜೀವಿಯಾದ ರೆಮ್ಮವ್ವೆ ತನ್ನ ಕೆಲಸದ ಮೂಲ ಸಾಧನವಾದ ರಾಟೆಯ ಪ್ರತಿಯೊಂದು ಕ್ರಿಯೆಯಲ್ಲಿ ಪರಮಾತ್ಮ ಸಂಬಂಧವಾದ ಅನುಭವಕ್ಕೆ ಹೋಲಿಸಿದ್ದಾಳೆ. ಕಾಯಕದಲ್ಲಿಯೇ ಕೈಲಾಸ ಕಾಣಬಯಸಿದ ಶರಣೆ ಈಕೆ.

ಕನ್ನಡಿ ಕಾಯಕದ ರೇವಮ್ಮ: ಈಕೆಯನ್ನು ಕುರಿತಾದ ಚಾರಿತ್ರಿಕ ವಿಷಯಗಳು ಅಷ್ಟಾಗಿ ತಿಳಿದುಬಂದಿಲ್ಲ. ಈಕೆಯ ಕಾಲ ಸುಮಾರು ೧೧೬೦. ರೇವಮ್ಮನ ಒಂದೇ ಒಂದು ವಚನ ದೊರೆತಿದೆ. ಸದ್ಗುರು ಸಂಗ ನಿರಂಗಲಿಂಗ ಎಂಬುದು ಈಕೆಯ ವಚನಗಳ

೧. ಶಿವಶರಣೆಯರ ವಚನ ಸಂಪುಟ(೫) ವಚನ-೬೬೧, ಪುಟ. ೨೧೦
೨. ಅದೇ., ವಚನ-೬೬೫, ಪುಟ. ೨೧೨

ಅಂಕಿತ. ರೇವಮ್ಮನ ಹೆಸರಿನೊಂದಿಗೆ ಕನ್ನಡಿ ಕಾಯಕದ ಸೂಚನೆಯಂತೆ ಈಕೆ ಕ್ಷೌರಿಕ ಜಾತಿಗೆ ಸೇರಿದ ವಚನಕಾರ್ತಿ. ಈಕೆಯ ವಚನ ಇಂತಿದೆ.

ಕೈಯಲ್ಲಿ ಕನ್ನಡಿಯಿರಲು ತನ್ನ ತಾ ನೋಡಬಾರದೆ?
ಲಿಂಗಜಂಗಮದ ಪ್ರಸಾದಕ್ಕೆ ತಪ್ಪಿದಲ್ಲಿ ಕೊಲ್ಲಬಾರದೆ?
ಕೊಂದಡೆ ಮುಕ್ತಿಯಿಲ್ಲವೆಂಬವರ ಬಾಯಲ್ಲಿ
ಪಡಿಹಾರನ ಪಾದರಕ್ಷೆಯನಿಕ್ಕುವೆ
ಮುಂಡಿಗೆಯನೆತ್ತಿರೊ ಭ್ರಷ್ಟ ಭವಿಗಳಿರಾ।
ಎತ್ತಲಾರದಡೆ ಸತ್ತ ಕುನ್ನಿ ನಾಯ ಬಾಲವ
ನಾಲಿಗೆ ಮುರುಟಿರೋ ಸದ್ಗುರುಸಂಗ ನಿರಂಗಲಿಂಗದಲ್ಲಿ[೧]

ತನ್ನ ವೃತ್ತಿ ಉಪಕರಣವಾದ ಕನ್ನಡಿಯನ್ನು ತನ್ನ ವಾದಸರಣಿಗೆ ಬಳಸಿ-ಕೊಂಡಿದ್ದಾಳೆ. ಲಿಂಗ, ಜಂಗಮ ಮತ್ತು ಪ್ರಸಾದ ನಿಷ್ಠೆಯನ್ನು ಪ್ರತಿಪಾದಿಸುತ್ತಾಳೆ.

ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ: ಈಕೆಯ ಕಾಲ ಸುಮಾರು ೧೧೬೦. 'ನಿಜಶಾಂತೇಶ್ವರ' ಈಕೆಯ ವಚನದ ಅಂಕಿತ. ಈಕೆಯ ಒಂದು ವಚನ ಮಾತ್ರ ದೊರೆತಿದ್ದು ಅದು ಇಂತಿದೆ.

ಬಂಜೆಯಾವಿಂಗೆ ಕ್ಷೀರವುಂಟೆ?
ವ್ರತಹೀನನ ಬೆರೆಯುಲುಂಟೆ?
ನೀ ಬೆರೆದಡೂ ಬೆರೆ, ನಾನೊಲ್ಲೆ ನಿಜಶಾಂತೇಶ್ವರಾ.[೨]

ವ್ರತಚಾರನಿಷ್ಠೆ ಇರಬೇಕೆಂಬುದು ಈ ವಚನದ ಆಶಯವಾಗಿದೆ. ಈಕೆ ಪ್ರಶ್ನಿಸುವುದರ ಮೂಲಕ ವ್ರತಹೀನರನ್ನು ಖಂಡಿಸುತ್ತಾಳೆ. ಅವರೊಂದಿಗೆ ಬೆರೆತರೆ ಬಂಜೆ ಆಕಳಿನ ಸಹವಾಸದಂತೆ ವ್ಯರ್ಥ ಎಂದಿದ್ದಾಳೆ.

ಕಾಲಕಣ್ಣಿಯ ಕಾಮಮ್ಮ: ಈಕೆಯ ಕಾಲ ಸುಮಾರು ೧೫೦೦. 'ನಿರ್ಭೀತ ನಿಜಲಿಂಗ'. ಈಕೆಯ ವಚನದ ಅಂಕಿತ. ಈಕೆಯ ಒಂದು ವಚನ ಮಾತ್ರ ದೊರೆತಿದೆ. ಈಕೆಯ ಹೆಸರಿನ ಹಿಂದೆ ಸೇರಿರುವ 'ಕಾಲಕಣ್ಣಿ' ಎಂಬುದು ವೃತ್ತಿ ಸೂಚಕ ವಿಶೇಷಣವಾಗಿದೆ. ಕಣ್ಣಿ ಎಂದರೆ ದನಕರುಗಳನ್ನು ಕಟ್ಟುವ ಒಂದು ಹಗ್ಗ ವಿಶೇಷ. ಇಂಥ ಹಗ್ಗವನ್ನು ಹೊಸೆದು ಮಾರುವ ಕಾಯಕ ಇವಳದಾಗಿರಬೇಕು. ಈಕೆ ನಿರ್ಭೀತಿಯಿಂದ

---

೧. ಶಿವಶರಣೆಯರ ವಚನ ಸಂಪುಟ(೫), ವಚನ ೬೬೬, ಪುಟ. ೨೧೩
೨. ಅದೇ, ವಚನ ೬೬೭, ಪುಟ. ೨೧೪

ವ್ರತಭ್ರಷ್ಟರನ್ನು ನಿಂದಿಸುತ್ತಾಳೆ. ದೊರೆತಿರುವ ಒಂದೇ ವಚನ ಆಕೆಯ ವ್ಯಕ್ತಿತ್ವವನ್ನು ಕಟ್ಟಿಕೊಡುತ್ತದೆ.

ಎನ್ನ ಕರಣಂಗಳ ಲಿಂಗದಲ್ಲಿ ಕಟ್ಟುವೆ
ಗುರುಲಿಂಗಜಂಗಮದ ಕಾಲ ಕಟ್ಟುವೆ
ವ್ರತಭ್ರಷ್ಟರ ನಿಟ್ಟೊರಸುವೆ ಸುಟ್ಟು ತುರುತುರನೆ ತೂರುವೆ
ನಿರ್ಭೀತಿ ನಿಜಲಿಂಗದಲ್ಲಿ.[೧]

ವ್ರತಭ್ರಷ್ಟರ ನಿಟ್ಟೊರಸುವೆ ಸುಟ್ಟು ತುರುತುರನೆ ತೂರವೆ ಎಂಬ ಅವಳ ಮಾತಿನಲ್ಲಿ ವ್ರತ ನಿಷ್ಠೆಯಿದೆ. ಗುರು ಲಿಂಗಜಂಗಮದ ಕಾಲ ಕಟ್ಟುವೆ ಎಂಬಲ್ಲಿ ಗುರುಲಿಂಗ ಜಂಗಮಳೆಂಬ ವೀರಶೈವ ಆರಾಧ್ಯ ತತ್ವಗಳು ಸದಾ ತನ್ನ ಬಳಿಯಿರಲೆಂಬ ಅಭೀಪ್ಸೆ ವ್ಯಕ್ತಪಡಿಸಿದ್ದಾಳೆ. ಹೀಗೆ ಪೂಜಿಸದವರು ವ್ರತಭ್ರಷ್ಟರು ಎಂದಿದ್ದಾಳೆ.

ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ: ಈಕೆಯ ವಚನಗಳ ಅಂಕಿತ 'ಅಗಜೇಶ್ವರ ಲಿಂಗ' ಲಕ್ಷ್ಮಮ್ಮನ ಒಂದೇ ಒಂದು ವಚನ ಮಾತ್ರ ದೊರೆತಿದೆ. ಲಕ್ಷ್ಮಮ್ಮ ಕೊಂಡೆ ಮಂಚಣ್ಣನ ಪತ್ನಿ ಈತ ಗುಪ್ತ ಭಕ್ತನಾಗಿದ್ದರಿಂದ ಗುಪ್ತ ಮಂಚಣ್ಣ ಎಂದೂ ಕರೆಯುತ್ತಿದ್ದರು. ಲಕ್ಷ್ಮಮ್ಮ ಬಸವಣ್ಣನವರ ಸಮಕಾಲೀನ ವಚನಕಾರ್ತಿಯಾಗಿದ್ದಳು.

ಆಯುಷ್ಯ ತೀರಲು ಮರಣ
ವ್ರತ ತಪ್ಪಲು ಶರೀರ ಕಡೆ
ಮೇಲುವ್ರತವೆಂಬ ತೂತರ ಮೆಚ್ಚ
ನಮ್ಮ ಅಗಜೇಶ್ವರಲಿಂಗವು.[೨]

ಇವಳ ಮಾತಿನಲ್ಲಿ ವ್ರತನಿಷ್ಠೆಯಿದೆ. ವ್ರತ ಪ್ರಾಣ ಸ್ವರೂಪ, ಅದಕ್ಕೆ ಭಂಗಬಂದರೆ ಪ್ರಾಣವೇ ಹೋದಂತೆ ಎಂದಿದ್ದಾಳೆ. ವ್ರತಭಂಗವನ್ನು ಸಾವಿಗೆ ಸಮಾನ ಎಂದು ಭಾವಿಸಿರುವ ಲಕ್ಷ್ಮಮ್ಮಳ ತೀವ್ರ ವ್ರತನಿಷ್ಠೆಗೆ ಈ ವಚನ ಉದಾಹರಣೆಯಾಗಿದೆ.

ಕೊಟ್ಟಣದ ಸೋಮಮ್ಮ: ಈಕೆಯ ಕಾಲ ಸುಮಾರು ೧೧೬೦. ಇವಳ ವೃತ್ತಿ ಕೊಟ್ಟಣ ಕುಟ್ಟುವುದು. ಇದು ಈಕೆಯ ಹೆಸರಿಗೆ ಸೇರಿದ ವಿಶೇಷಣವಾಗಿದೆ. ಈಕೆಯ ಒಂದು ವಚನ ಮಾತ್ರ ದೊರೆತಿದೆ. 'ನಿರ್ಲಜ್ಜೇಶ್ವರಾ' ಎಂಬುದು ಈಕೆಯ ವಚನಗಳ ಅಂಕಿತ. ಭಕ್ತರ ಮನೆಯಲ್ಲಿ ಅಕ್ಕಿಯನ್ನು ಕುಟ್ಟಿ ಅದರಿಂದ ಬಂದ ಧನದಿಂದ ಗುರುಲಿಂಗ

---

೧. ಶಿವಶರಣೆಯರ ವಚನ ಸಂಪುಟ(೫) ವಚನ-೬೬೮, ಪುಟ. ೨೧೫
೨. ಅದೇ, ವಚನ – ೬೬೯, ಪುಟ. ೨೧೬

ಜಂಗಮ ಸೇವೆ ಮಾಡುವುದು ಇವಳ ಕೆಲಸವಾಗಿತ್ತು. ವ್ರತಾಚಾರ ನಿಷ್ಠೆಯನ್ನೇ ಈಕೆಯೂ ಹೇಳಿದ್ದಾಳೆ.

ಹದತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಿಲ್ಲ
ವ್ರತಹೀನನ ನೆರೆಯೆ ನರಕವಲ್ಲದೆ ಮುಕ್ತಿಯಿಲ್ಲ
ಅರಿಯದುದು ಹೋಗಲಿ, ಅರಿದು ಬೆರೆದನಾದಡೆ
ಕಾದ ಕತ್ತಿಯಲ್ಲಿ ಕಿವಿಯ ಕೊಯ್ವರಯ್ಯಾ
ಒಲ್ಲೆ ಒಲ್ಲೆನಾಗಿ, ನಿಮ್ಮಾಣೆ ನಿರ್ಲಜ್ಜೇಶ್ವರಾ[೧]

ಈಕೆಯ ನೇರವಾದ ಮಾತುಗಳನ್ನು ಕಾಣಬಹುದು ನಾನು ವ್ರತಹೀನನನ್ನು ಬೆರೆಯಲೊಲ್ಲೆ ಎಂದು ತನ್ನ ಇಷ್ಟ ದೈವದ ಸಾಕ್ಷಿಯಾಗಿ ನುಡಿಯುತ್ತಾಳೆ.

ಗಂಗಾಂಬಿಕೆ: ಬಸವಣ್ಣನವರ ಪತ್ನಿ ಗಂಗಾಂಬಿಕೆ. ಕಲ್ಯಾಣವನ್ನಾಳಿದ ಕಳಚೂರಿ ಬಿಜ್ಜಳನ ಮಂತ್ರಿ ಬಲದೇವನ ಮಗಳು. ಬಲದೇವನು ಬಸವಣ್ಣನ ತಾಯಿ ಮಾದಲಾಂಬಿಕೆಯ ಸಹೋದರ. ಆದ್ದರಿಂದ ಬಸವಣ್ಣನವರಿಗೆ ಈಕೆ ಸೋದರ ಮಾವನ ಮಗಳು. ಈಕೆಯ ೯ ವಚನಗಳು ದೊರೆತಿವೆ. ಈಕೆಯ ವಚನಗಳ ಅಂಕಿತ 'ಗಂಗಾಪ್ರಿಯ ಕೂಡಲ ಸಂಗ' ಎಂಬುದು ಈಕೆಯು ಪತಿಭಕ್ತಿ 'ಪತಿಯಾಜ್ಞೆಯಲ್ಲಿ ಚರಿಪ ಸತಿಗೇಕೆ ಪ್ರತಿಜ್ಞೆಯು' ಎಂದ ಪತಿನಿಷ್ಠೆಯುಳ್ಳವಳು.

ಸಾಂದ್ರವಾಗಿ ಹರಗಣಭಕ್ತಿಯ ಮಾಳ್ಪನೆಂತೊ
ಮಾದಲಾಂಬಿಕಾನಂದನನು?
ಸಾಂದ್ರವಾಗಿ ಬಿಜ್ಜಳನರಮನೆಯ ನ್ಯಾಯ ನೋಳ್ಪನೆಂತೋ
ಮಾದರಸನ ಮೋಹದ ಮಗನು?
ಸಾಂದ್ರವಾಗಿ ಲಿಂಗಾರ್ಚನೆ ಲಿಂಗತೃಪ್ತಿ ಅನುಗೆಯ್ದನೆಂತೊ
ಗಂಗಾಪ್ರಿಯ ಕೂಡಲಸಂಗನ ಶರಣ ಚೆನ್ನ?[೨]

ಈ ವಚನ ಬಸವಣ್ಣನವರ ಜೀವನಚರಿತ್ರೆ ಮತ್ತು ಕಾರ್ಯಕ್ಷಮತೆ ಯನ್ನು ಏಕಕಾಲಕ್ಕೆ ಹೇಳುವ ಚಾರಿತ್ರಿಕ ಮಹತ್ವ ಪಡೆದ ವಚನವಾಗಿದೆ.

ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ: ಈಕೆಯ ನಿಜನಾಮ ತಿಳಿದು ಬರುವುದಿಲ್ಲ. ಈಕೆ ಗಜೇಶಮಸಣಯ್ಯಗಳ ಪತ್ನಿ. 'ಮಸಣಯ್ಯ ಪ್ರಿಯ ಗಜೇಶ್ವರ' ಈಕೆಯ ವಚನಾಂಕಿತ-ವಾಗಿದೆ. ಈಕೆಯ ಕಾಲ ೧೧೬೦. ಈಕೆಯ ೯ ವಚನಗಳು ದೊರೆತಿವೆ. ಗುರು

---

೧. ಶಿವಶರಣೆಯರ ವಚನ ಸಂಪುಟ(೫) ವಚನ-೬೭೦, ಪುಟ. ೨೧೭
೨. ಅದೇ, ವಚನ-೬೭೯, ಪುಟ. ೨೨೦

ಲಿಂಗ ಜಂಗಮ ಭಕ್ತರ ಸಂಬಂಧ ಶರಣರ ಸ್ತುತಿ ಸೃಷ್ಟಿಯ ಉತ್ಪತ್ತಿ ಲಿಂಗದ ಸ್ವರೂಪ, ಅರಿವಿನ ಮಹತ್ವ ಇವಳ ವಚನಗಳಲ್ಲಿ ಅಭಿವ್ಯಕ್ತಗೊಂಡಿರುವ ವಿಷಯಗಳು. ಅವಳ ವಚನವೊಂದು ಹೀಗಿದೆ.

ಅಂಗದ ಮೇಲಣ ಲಿಂಗವು ಲಿಂಗವಲ್ಲ
ಮನದ ಮೇಲಣ ಲಿಂಗವು ಲಿಂಗವಲ್ಲ
ಭಾವದ ಮೇಲಣ ಲಿಂಗವು ಲಿಂಗವಲ್ಲ
ಅಂಗದ ಮೇಲಣ ಲಿಂಗ ವ್ಯವಹಾರ
ಮನದ ಮೇಲಣ ಲಿಂಗ ಸಂಕಲ್ಪ
ಭಾವದ ಮೇಲಣ ಲಿಂಗ ಭ್ರಾಂತುತತ್ವ
ಆಳಿನ ಆಳು ಅರಸಪ್ಪನೆ. ಆಳನಾಳುವನರಸಲ್ಲದೆ?
ಅಂಗ ಪ್ರಾಣ ಭಾವಂಗಳನೊಳಕೊಂಡಿರ್ಪುದೆ ಲಿಂಗ
ಕಾಣಾ ಮಸಣಯ್ಯ ಪ್ರಿಯ ಗಜೇಶ್ವರಾ[೧]

ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲೆ: ಈಕೆ ಕುಂಬಾರ ಗುಂಡಯ್ಯನ ಸತಿ. ಬೀದರ್ ಜಿಲ್ಲೆಯ ಭಲ್ಲುರೆ (ಬಾಲ್ಕಿ) ಈಕೆಯ ಸ್ಥಳ. 'ಕುಂಬೇಶ್ವರ' ಅಥವಾ ಕುಂಬೇಶ್ವರಲಿಂಗ' ಎಂಬುದು ಈಕೆಯ ವಚನಗಳ ಅಂಕಿತ. ಈಕೆಯ ಎರಡು ವಚನಗಳು ದೊರೆತಿವೆ. ಈ ಎರಡೂ ವಚನಗಳು ವ್ರತಾಚಾರವನ್ನು, ಧರ್ಮಶ್ರದ್ಧೆಯನ್ನು, ಲಿಂಗನಿಷ್ಠೆಯನ್ನು, ಭಾವಶುದ್ಧಿಯನ್ನು ಪ್ರತಿಪಾದಿಸುತ್ತವೆ. ಈಕೆಯ ಕಾಲ ೧೧೬೦. ವ್ರತಹೀನನ್ನು ಕುರಿತ ಆಕೆಯ ವಚನವೊಂದು ಹೀಗಿದೆ.

ಹದ ಮಣ್ಣಲ್ಲದೆ ಮಡಕೆಯಾಗಲಾರದು
ವ್ರತಹೀನನ ಬೆರೆಯಲಾಗದು
ಬರೆದಡೆ ನರಕ ತಪ್ಪದು
ನಾನೊಲ್ಲೆ ಒಲ್ಲೆನಾಗಿ ಕುಂಭೇಶ್ವರಾ[೨]

ಗೊಗ್ಗವ್ವೆ: ಧೂಪದ ಕಾಯಕದ ಮೂಲಕ ಕೈಲಾಸ ಪದವಿ ಪಡೆದವಳೆಂದು ಪ್ರಸಿದ್ಧಿ ಹೊಂದಿರುವ ಗೊಗ್ಗವ್ವೆ ಕಾಯಕ ಶಿವಭಕ್ತರಿಗೆ ಧೂಪ ಅರ್ಪಿಸುವ ಕಾಯಕವನ್ನು ಮಾಡುತ್ತಿದ್ದಳು. ಶಿಭಕ್ತ ದೆಂಪತಿಗಳ ಉದರದಲ್ಲಿ ಜನಿಸಿದ ಈಕೆ ಬಾಲ್ಯದಿಂದಲೇ ವೈರಾಗ್ಯ ತಾಳಿ ಶಿವಭಕ್ತಿ ಮೈಗೂಡಿಸಿಕೊಂಡಿದ್ದಳು. ಇವಳ ಸ್ಥಳ ಕೇರಳದ ಅವಲೂರು.

---

೧. ಶಿವಶರಣೆಯರ ವಚನ ಸಂಪುಟ(೫) ವಚನ-೬೮೦, ಪುಟ. ೨೨೧
೨. ಅದೇ, ವಚನ-೬೮೯, ಪುಟ. ೨೨೫

ಈಕೆಯ ವಚನಗಳ ಅಂಕಿತ 'ನಾಸ್ತಿನಾಥಾ'. ದೊರೆತಿರುವ ವಚನಗಳು ೬. ಗಂಡು ಹೆಣ್ಣಿನ ಲಿಂಗವಿಶಿಷ್ಟತೆ ಕುರಿತ ಅಕೆಯ ವಚನವೊಂದು ಹೀಗಿದೆ.

ಮೊಲೆ ಮೂಡಿ ಬಂದಡೆ ಹೆಣ್ಣೆಂಬರು
ಮೀಸೆಕಾಸೆ ಬಂದೆಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೋ ಗಂಡೋ ನಾಸ್ತಿನಾಥಾ? [೧]

ಲಿಂಗವಿಶಿಷ್ಟತೆ ಕೇವಲ ದೇಹರಚನೆಗೆ ಮಾತ್ರ ಸಂಬಂಧಿಸಿದ್ದು ಎಂಬುದನ್ನು ತಿಳಿಸುತ್ತಾಳೆ. ಅರಿವಿಗೆ ಲಿಂಗಭೇದವಿಲ್ಲವೆನ್ನುವ ಗೊಗ್ಗವ್ವೆಯ ಅಭಿಪ್ರಾಯ ಲಿಂಗಸಮಾನತೆಯ ಮುಖ್ಯ ಆಶಯವನ್ನು ಎತ್ತಿ ಹಿಡಿದಿದೆ. 'ಗಂಡು ಮೋಹಿಸಿ ಹೆಣ್ಣ ಹಿಡಿದಡೆ ಅದು ಒಬ್ಬರ ಒಡವೆ ಎಂದು ಅರಿಯಬೇಕು. ಹೆಣ್ಣು ಮೋಹಿಸಿ ಗಂಡು ಹಿಡಿದೆಡೆ ಉತ್ತರವಾವುದೆಂದರಿಯಬೇಕು. ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ ನಾಸ್ತಿನಾಥನು ಪರಿಪೂರ್ಣನೆಂಬೆ' ಎಂದು ಹೇಳುತ್ತಾ ಬಹಳ ಕಾಲದಿಂದ ಹೆಣ್ಣು ಒಂದು ಒಡವೆ ಎಂದು ಕಾಣುತ್ತಾ ಬಂದಿದ್ದ ಸ್ಥಾಪಿತ ಮೌಲ್ಯವನ್ನು ಧಿಕ್ಕರಿಸುತ್ತಾ ಮೋಹಿಸುವ ಕ್ರಿಯೆ ಗಂಡು-ಹೆಣ್ಣು ಇಬ್ಬರಿಗೂ ಸಮಾನ ಎಂಬುದನ್ನು ತಿಳಿಸಿ ಸಮಾನತೆಯ ಧ್ವನಿ ಎತ್ತಿದ್ದಾಳೆ.

ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ: ಈಕೆ ಶರಣ ದಸರಯ್ಯನ ಪತ್ನಿ. ಈಕೆಯ ಕಾಲ ಸುಮಾರು ೧೧೬೦. ವೀರಮ್ಮನ ಐದು ವಚನಗಳು ದೊರೆತಿವೆ. 'ಗುರುಶಾಂತೇಶ್ವರಾ' ಈಕೆಯ ವಚನಗಳ ಅಂಕಿತ. ಈಕೆಯ ಜೀನವದ ಬಗೆಗೆ ಹೆಚ್ಚಿಗೆ ತಿಳಿಯುವುದಿಲ್ಲ. ಮನದ ಚಂಚಲತೆ, ವ್ರತನಿಷ್ಠೆ, ಶರಣನ ನಿಲುವು, ಪಾದೋದಕ ಪ್ರಸಾದಗಳ ಮಹತ್ವವನ್ನು ಇವಳ ವಚನಗಳಲ್ಲಿ ಕಾಣಬಹುದು. ದುರಳ ಕಾಮಿನಿಯರಿಗೆ ಎರಗುವ ಮನಸ್ಸನ್ನು ಹೊಲೆ ಮನಸ್ಸೆಂದು ಗುರುವಿಂಗೆ ಎರಗಿ ಎರಕಡರ್ದಾತನ ಗುರುಕರಜಾತನೆಂದು ಹೇಳುತ್ತಾಳೆ. ವೀರಮ್ಮನ ವಚನವೊಂದು ಹೀಗಿದೆ.

ಪರಿಪೂರ್ಣನಲ್ಲ ಪ್ರದೇಶಿಕನಲ್ಲ
ನಿರತಿಶಯದೊಳತಿಶಯ ತಾ ಮುನ್ನಲ್ಲಿ
ಶರಣನಲ್ಲ, ಐಕ್ಯನಲ್ಲ, ಪರಮನಲ್ಲ, ಜೀವನಲ್ಲ
ವಿರವಯನಲ್ಲ, ಸಾವಯನಲ್ಲ
ಪರವಿಹವೆಂಬು ಭಯದೊಳಿಲ್ಲದವನು

---

೧. ಶಿವಶರಣೆಯರ ವಚನ ಸಂಪುಟ(೫) ವಚನ-೬೮೯, ಪುಟ. ೨೨೬

ನಿಕಾಲಯ ನಿಜಗುರು ಶಾಂತೇಶ್ವರನ ಶರಣನ ನಿಲುವು
ಉಪಮೊರೆ ತಾನನುಪಮ[೧]

ದುಗ್ಗಳೆ: ಆದ್ಯ ವಚನಕಾರನೆಂಬ ಕೀರ್ತಿಗೆ ಪಾತ್ರನಾದ ಜೇಡರದಾಸಿಮಯ್ಯನ ಪತ್ನಿಯೇ ದುಗ್ಗಳೆ. 'ಸತಿ-ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂಬ ದಾಸಿಮಯ್ಯನ ಮಾತಿಗೆ ತಕ್ಕಂತೆ ಬಾಳಿದ ಶಿವಶರಣೆ ಈಕೆ. ದಾಸಯ್ಯ ಪ್ರಿಯ ರಾಮನಾಥ ಈಕೆಯ ವಚನಗಳ ಅಂಕಿತ. ಈಕೆಯ ಎರಡು ವಚನಗಳು ದೊರೆತಿವೆ. ಈಕೆಯ ವಚನಗಳಲ್ಲಿ ಅಲ್ಲಮ, ಬಸವಣ್ಣ, ಚೆನ್ನಬಸವಣ್ಣ, ಮರುಳಶಂಕರದೇವ, ಸಿದ್ಧರಾಮ, ಅಜಗಣ್ಣರನ್ನು ನೆನೆದಿದ್ದಾಳೆ. ಆಕೆಯ ವಚನ ಹೀಗಿದೆ.

ಭಕ್ತನಾದಡೆ ಬಸವಣ್ಣನಂತಾಗಬೇಕು
ಜಂಗಮವಾದಡೆ ಪ್ರಭುದೇವರಂತಾಗಬೇಕು
ಯೋಗಿಯಾದಡೆ ಸಿದ್ಧರಾಮಯ್ಯನಂತಾಗಬೇಕು
ಭೋಗಿಯಾದಡೆ ಚೆನ್ನಬಸವಣ್ಣನಂತಾಗಬೇಕು
ಐಕ್ಯವಾದಡೆ ಅಜಗಣ್ಣನಂತಾಗಬೇಕು
ಇಂತಿವರ ಕಾರಣ್ಯ ಪ್ರಸಾದವ ಕೊಂಡು
ಸತ್ತಹಾಗಿರಬೇಕಲ್ಲದೆ ತತ್ವದ ಮಾತು ಎನಗೇಕಯ್ಯಾ
ದಾಸಯ್ಯಪ್ರಿಯ ರಾಮನಾಥಾ? [೨]

ನಾಗಲಾಂಬಿಕೆ: ಈಕೆ ಬಸವಣ್ಣನವರ ಸಹೋದರಿ. ಶಿವಶರಣೆಯರ ಸಮೂಹದಲ್ಲಿ ಗಮನಾರ್ಹ ಹೆಸರುಗಳಲ್ಲಿ ಈಕೆಯದು ಒಂದು. ನಾಗಲಾಂಬಿಕೆಗೆ ನಾಗಮ್ಮ, ನಾಗವ್ವ, ಅಕ್ಕನಾಗಮ್ಮ ಎಂಬ ಹೆಸರುಗಳಿದ್ದವು. ಈಕೆ ಚನ್ನಬಸವಣ್ಣನ ತಾಯಿ. ಅಕ್ಕನಾಗಮ್ಮ ಬಸವಣ್ಣ ಪ್ರಿಯ ಚನ್ನಸಂಗಯ್ಯ' ಎಂಬ ಅಂಕಿತದಲ್ಲಿ ವಚನ ರಚಿಸಿದಳು. ಈಕೆಯ ಹದಿನಾಲ್ಕು ವಚನಗಳು ದೊರೆತಿವೆ. ಬಾಲ್ಯದಲ್ಲಿಯೇ ಸಹೋದರ ಬಸವಣ್ಣನ ಸಾಮಾಜಿಕ, ಧಾಮಿಕ ಆಶೋತ್ತರಗಳಿಗೆ ಬೆಮಬಲವಾಗಿ ನಿಂತಿದ್ದಾಳೆ. ಈಕೆಯ ಸಮಕಾಲೀನ ಶರಣರಾದ ಕೋಲುಶಾಂತಯ್ಯ, ಮರುಳಶಂಕರದೇವ, ಆಯ್ದಕ್ಕಿ ಲಕ್ಕಮ್ಮ, ನೀಲಮ್ಮ ಮುಂತಾದವರು ಈಕೆಯನ್ನು ಕೊಂಡಾಡಿದ್ದಾರೆ. ಶರಣರ ಕ್ರಾಂತಿಕಾರಕ ವಿಚಾರಗಳಿಗೆ ಸಕ್ರಿಯವಾಗಿ ಸ್ಪಂದಿಸಿದಳು. ಸಮಾಜದ ವಿರೋಧಗಳನ್ನು ಧೈರ್ಯವಾಗಿ ಎದುರಿಸಿದಳು. ಬಸವಣ್ಣನ ಬಗೆಗೆ ಈಕೆಯ ವಚನವೊಂದು ಹೀಗಿದೆ.

---

೧. ಶಿವಶರಣೆಯರ ವಚನ ಸಂಪುಟ(೫) ವಚನ-೬೯, ಪುಟ. ೨೨೮
೨. ಅದೇ, ವಚನ-೭೦೧, ಪುಟ. ೨೨೯

ಬಸವನ ನಾನೆತ್ತಿ ಮುದ್ದಾಡಿಸುವೆನು
ಬಸವಾ, ಸಂಗನ ಬಸವಿದೇವಾ ಜಯತು
ಬಸವಾ, ಸಂಗನ ಬಸವಲಿಂಗಾ ಜಯತು
ಬಸವಗೂ ಎನಗೂ ಭಾವಭೇದವಿಲ್ಲ
ಬಸವಗೂ ಎನಗೂ ರಾಶಿಕೂಟವುಂಟು
ಬಸವಣ್ಣ ಪ್ರಿಯ ಚೆನ್ನಸಂಗಯ್ಯನಲ್ಲ
ಬಸವನ ಬೆಸಲಾದ ಬಾಣತಿ ನಾನಯ್ಯ
ಬಸವಾ, ಬಸವಾ, ಬಸವಾ![೧]

ನೀಲಮ್ಮ: ನೀಲಮ್ಮ, ನೀಲಾಂಬಿಕೆ, ನೀಲಲೋಚನ ಎನ್ನುವ ನಾಮಾಂತರಗಳಿಂದ ಪ್ರಸಿದ್ಧಳಾದ ಈಕೆ ಬಸವಣ್ಣನವರ ಹೆಂಡತಿ. ಮಯಾದೇವಿ ಎಂಬುದು ಈಕೆಯ ಮತ್ತೊಂದು ಹೆಸರು ಎಂದು ಊಹಿಸಲಾಗಿದೆ. ನೀಲಾಂಬಿಕೆಯ ವಚನಗಳ ಅಂಕಿತ 'ಸಂಗಯ್ಯ' ಎಂಬುದು. ಈಕೆಯ ೧೨೬ ವಚನಗಳು ಲಭ್ಯವಿದೆ. ನೀಲಮ್ಮನ ಬಹುಪಾಲು ವಚನಗಳೆಲ್ಲವೂ ಬಸವ ಭಕ್ತಿ, ಬಸವನಿಷ್ಠೆ, ಬಸವಾನುಭಾವದ ಪರಾಮರ್ಶೆ ಮತ್ತು ಬಸವಣ್ಣನವರ ಅಗಲಿಕೆಯು ತೀವ್ರ ದುಃಖದ ಅಭಿವ್ಯಕ್ತಿಯಾಗಿವೆ. ಬಸವಣ್ಣನವರ ಬದುಕಿನಲ್ಲಿ ಬಹುದೊಡ್ಡ ಪಾತ್ರ ಈಕೆಯದು. ಏಕೆನ್ನ ಪುಟ್ಟಿಸಿದೆಯಯ್ಯಾ ಹೆಣ್ಣು ಜನ್ಮದಲಿ ಪುಣ್ಯವಿಲ್ಲದ ಪಾಪಿಯ ಎಂಬಂಥ ಮಾತುಗಳು ಅವಳ ನೋವನ್ನು ವ್ಯಕ್ತಪಡಿಸಿವೆ.

ನನಾರ ಹೆಸರ ಕುರುಹಿಡಲಯ್ಯಾ ಬಸವಾ?
ನಾನಾರ ರೂಪ ನಿಜವಿಡಲಯ್ಯಾ ಬಸವಾ?
ನಾನಾರ ಮಾತ ನೆಲೆಗೊಳಿಸಲಯ್ಯಾ ಬಸವಾ?
ನಾನಾರ ಮನವನಂಗೈಸಲಯ್ಯಾ ಬಸವಾ?
ಎನ್ನ ಸುಖಾಕಾರ ಮೂರ್ತಿ ಬಸವನಡಗಿದ ಬಳಿಕ ಎನಗೆ ಹೆಸರಿಲ್ಲ
ರೂಪು ನಿರೂಪಾಹಿತ್ತಯ್ಯಾ ಸಂಗಯ್ಯಾ ಬಸವನಡಗಿದ ಬಳಿಕ[೨]

ಈ ಮಾತುಗಳು ಬಸವಣ್ಣನ ನಿರ್ಗಮನದ ಶೋಕ ತುಂಬಿರುವುದನ್ನು ಕಾಣಬಹುದು. "ಬಸವನ ಅನುಭವದಿಂದ ವಿವರವ ಕಂಡು ವಿಚಾರಪತ್ನಿಯಾದೆನಯ್ಯಾ" ಎಂಬುದು ಆಕೆಯ ಬಹಳ ದೊಡ್ಡ ಮಾತು. ಹೆಂಡತಿ ಗಂಡನಿಗೆ ವಿಚಾರ ಪತ್ನಿಯಾಗಬೇಕು ಎಂಬುದು ಜಾಗತಿಕ ಸಾಹಿತ್ಯದಲ್ಲಿಯೇ ಅಪರೂಪದ ಅಭಿಪ್ರಾಯ ಎಂದು ವಿದ್ವಾಂಸರು

---

೧. ಶಿವಶರಣೆಯರ ವಚನ ಸಂಪುಟ(೫) ವಚನ-೨೧೨, ಪುಟ. ೨೩೩
೨. ಅದೇ, ವಚನ-೭೬೬, ಪುಟ. ೨೫೫

ಗುರುತಿಸುತ್ತಾರೆ. ದಂಪತಿಗಳ ವೈಚಾರಿಕ ಸಾಮಗತ್ಯವು ಅವರ ಲೌಕಿಕ ಮತ್ತು ಪಾರಮಾರ್ಥಿಕ ಸಾಧನೆಗೆ ಪೂರಕವಾಗಬೇಕು. ದೈಹಿಕ ಸಾಹಚರ್ಯಕ್ಕೆ ಸೀಮಿತವಾಗದೆ ಬೌದ್ಧಿಕ ಮಾನಸಿಕ ಸಹಯೋಗವಾಗಿ ಆತ್ಮದ ಸಾಂಗತ್ಯವಾಗಿ ಬೆಳೆಯಬೇಕೆನ್ನುವ ಆಶಯ ನೀಲಾಲೋಚನೆಯದು.

ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ : ಈಕೆಯ ವಚನಾಂಕಿತ 'ನಿಂಬೇಶ್ವರ'. ಗುಡ್ಡವ್ವೆಯ ಒಂದು ವಚನ ಮಾತ್ರ ದೊರೆತಿದೆ. ಕಾಲ ಸುಮಾರು ೧೪೩೦. ಮೂರು ಜನ 'ಗುಡ್ಡವ್ವೆ' ಹೆಸರಿನ ಶರಣೆಯರ ಉಲ್ಲೇಖ ವೀರಶೈವ ಕಾವ್ಯಗಳಲ್ಲಿ ಬರುತ್ತದೆ. ಈ ಗುಡ್ಡವ್ವೆಯ ವಚನವು ವ್ರತಾಚಾರ ನಿಷ್ಠೆಯ ವಿಚಾರವನ್ನೇ ಒಳಗೊಂಡಿದೆ.

ತನು ಬತ್ತಲೆಯಾದಡೇನು, ಮನಬತ್ತಲೆಯಾಗದನ್ನಕ್ಕ?
ವ್ರತವಿದ್ದಡೇನು, ವೃತಹೀನರಾದ ಬಳಿಕ?
ನೆರೆದಡೆ ನರಕವಯ್ಯ ನಿಂಬೇಶ್ವರಾ.[೧]

ಅಂತರಂಗ ಬಹಿರಂಗ ಎರಡೂ ಶುದ್ಧವಾಗಿ ಮಾಡುವ ವ್ರತವೇ ನಿಜವಾದ ವ್ರತ. ಶ್ರೇಷ್ಠವಾದುದು. ಅಂತರಂಗ ಶುದ್ಧಿಯಿಲ್ಲದೆ ಕೇವಲ ಬಹಿರಂಗದಲ್ಲಿ ವ್ರತಾಚರಣೆ ಮಾಡುವನ ವ್ರತಿಯಲ್ಲ; ಅವನು ವ್ರತಹೀನ, ಅಂಥವನ ಸಹವಾಸ ನರಕವಾಸ ಎಂಬುದೇ ಈಕೆಯ ನಿಲುವು.

ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ: ಈಕೆ ಬಾಚಿಕಾಯಕದ ಬಸವಯ್ಯಗಳ ಹೆಂಡತಿ. ಈಕೆ ಬಡಿಗ ಜಾತಿಗೆ ಸೇರಿದವಳು. ಈಕೆಯ ಕಾಲ ೧೧೬೦. 'ಕರ್ಮಹರ ಕಾಳೇಶ್ವರಾ' ಇವಳ ವಚನಗಳ ಅಂಕಿತ. ಈಕೆಯ ಎರಡು ವಚನಗಳು ದೊರೆತಿವೆ. 'ಕಾಯಕ ತಪ್ಪಿದಡೆ ಸೈರಿಸಬಾರದು' ವ್ರತ ತಪ್ಪಿದಡೆಯೂ ಸೈರಿಸಬಾರದು ಎಂದು ಹೇಳುತ್ತಾಳೆ. ಇಲ್ಲಿ ವ್ರತಕ್ಕೆ ಹೆಚ್ಚು ಒತ್ತು ಕೊಟ್ಟಿರುವುದು ತಿಳಿದುಬರುತ್ತದೆ. ಕಾಯಕ ನುಡಿ–ವ್ರತ ಇವುಗಳನ್ನು ಎಚ್ಚರಿಕೆಯಿಂದ ಪಾಲಿಸಬೇಕು. ಸ್ವಲ್ಪ ವ್ಯತ್ಯಾಸವಾದರೂ ತೊಂದರೆಗೆ ಸಿಲುಕಬೇಕಾಗುತ್ತದೆ ಎಂದು ಹೇಳುತ್ತಾಳೆ ಆಕೆಯ ವಚನವೊಂದು ಹೀಗಿದೆ.

ಕೈ ತಪ್ಪಿ ಕೆತ್ತಲು ಕಾಲಿಗೆ ಮೂಲ
ಮಾತು ತಪ್ಪಿ ನುಡಿಯಲು ಬಾಯಿಗೆ ಮೂಲ
ವ್ರತ ಹೀನನ ನೆರೆಯಲು ನರಕಕ್ಕೆ ಮೂಲ
ಕರ್ಮಹರಕಾಳೇಶ್ವರಾ[೨]

---

೧. ಶಿವಶರಣೆಯರ ವಚನ ಸಂಪುಟ(೫), ವಚನ–೮೪೩, ಪುಟ. ೨೬೭
೨. ಅದೇ, ವಚನ–೮೪೫, ಪುಟ. ೨೬೮

ಬೊಂತಾದೇವಿ: ಕಾಶ್ಮೀರ ದೇಶದ ಮಾಂಡವ್ಯಪುರದ ಅರಸನ ಮಗಳು ಬೊಂತಾದೇವಿ. ಈಕೆಯ ವಚನಗಳ ಅಂಕಿತ 'ಬಿಡಾಡಿ'. ಬೊಂತಾದೇವಿಯ ಐದು ವಚನಗಳು ದೊರೆತಿವೆ. ಈಕೆಯ ಕಾಲ ಸುಮಾರು ೧೧೬೦. ಬೊಂತಾದೇವಿ ಎನ್ನುವ ಹೆಸರುಗಳಿಂದ ಈಕೆಯನ್ನು ಕರೆಯಲಾಗಿದೆ. ಈಕೆಯ ವಚನಗಳಲ್ಲಿ ಚಿಂತನಶೀಲ ಗುಣಗಳಿವೆ. ಮಾನವರೆಲ್ಲಾ ಸಮಾನರು ಎಂಬ ಆಶಯ ಈಕೆಯದು. ಶ್ರೇಷ್ಠ ಕನಿಷ್ಠ, ಮೇಲು-ಕೀಳು ಎಂಬ ತಾರತಮ್ಯಗಳನ್ನು ಬೊಂತಾದೇವಿ ಖಂಡಿಸುತ್ತಾಳೆ. 'ಬಿಡಾಡೆ' ಎಂಬ ಈಕೆಯ ವಚನಗಳ ಅಂಕಿತ ಯಾವ ಬಂಧನಕ್ಕೂ ಒಳಗಾಗದ ಶಿವನನ್ನು ಸಂಕೇತಿಸುತ್ತದೆ. ಇವಳ ವಚನಗಳಲ್ಲಿ ಶಿವನ ಸ್ವರೂಪ, ಅವನ ಅನಂತತೆಯನ್ನು ಎತ್ತಿಹಿಡಿಯಲಾಗಿದೆ. ಜಾತಿಯತೆಯನ್ನು ಖಂಡಿಸುವ ಆಕೆಯ ವಚನ ಹೀಗಿದೆ.

> ಊರ ಒಳಗಣ ಬಯಲು, ಊರ ಹೊರಗಣ ಬಯಲೆಂದುಂಟೆ?
> ಊರೊಳಗೆ ಬ್ರಾಹ್ಮಣಬಯಲು, ಊರ ಹೊರಗೆ ಬಯಲೆಂದುಂಟೆ?
> ಎಲ್ಲಿ ನೋಡಿದಡೆ ಬಯಲೊಂದೆ
> ಭಿತ್ತಿಯಿಂದ ಒಳಹೊರಗೆಂಬ ನಾಮವೈಸೆ
> ಎಲ್ಲಿ ನೋಡಿದಡೆ ಕರೆದೆಡೆ ಓ ಎಂಬಾತನೆ ಬಿಡಾಡಿ[೧]

ಮುಕ್ತಾಯಕ್ಕ: ಉನ್ನತ ತತ್ವಜ್ಞಾನಿಯಾಗಿದ್ದವಳು ಮುಕ್ತಾಯಕ್ಕ. ಮುಕ್ತಾಯಕ್ಕನ ಹುಟ್ಟೂರು ಗದಗ ಜಿಲ್ಲೆಯ ಲಕ್ಕುಂಡಿ. ಮಹಾಜ್ಞಾನಿ ಅಜಗಣ್ಣನ ಸಹೋದರಿ. ಈಕೆಯ ೩೨ ವಚನಗಳು ದೊರೆತಿವೆ. ಇವಳ ವಚನಗಳ ಅಂಕಿತ 'ಅಜಗಣ್ಣ'. 'ಅಜಗಣ್ಣತಂದೆ' ಎಂಬುದಾಗಿದೆ. ಈಕೆ ತನ್ನ ಸೋದರ ಅಜಗಣ್ಣನನ್ನೇ ಗುರುವಾಗಿ ಸ್ವೀಕರಿಸಿದಳು. ಈಕೆಯ ಕೆಲವು ವಚನಗಳಲ್ಲಿ ಭಾವಪೂರ್ಣ ಸೊಗಸು ಕಂಡಬರುತ್ತದೆ. ಪ್ರಖರ ಬುದ್ಧಿಶಕ್ತಿಯಿಂದ ಕೂಡಿದ ವಚನಕಾರ್ತಿ ಈಕೆ. 'ಅಂಧಕನ ಕೈಯ ಅಂಧಕ ಹಿಡಿದಂತಿರಬೇಕು, ಮೂಗನ ಕೈಯಲ್ಲಿ ಕಾವ್ಯವ ಕೇಳಿದಂತಿರಬೇಕು' ಈ ಮುಂತಾಗಿ ಆತ್ಮ ಪರಮಾತ್ಮ ಸಂಯೋಗವನ್ನು ತಿಳಿಸುತ್ತಾಳೆ.

> ಅಲರೊಳಡಗಿದ ಪರಿಮಳದಂತೆ
> ಪತಂಗದೊಳಡಗಿದ ಅನಲನಂತೆ
> ಶಶಿಯೊಳಡಗಿದ ಷೋಡಶಕಳೆಯಂತೆ
> ಉಲುಹಡಗಿದ ವಾಯುವಿನಂತೆ
> ಸಿಡಿಲೊಳಡಗಿದ ಗಾತ್ರದ ತೇಜದಂತೆ
> ಇರಬೇಕಯ್ಯಾ ಯೋಗ? ಎನ್ನ ಅಜಗಣ್ಣ ತಂದೆಯಂತೆ[೨]

---

೧. ಶಿವಶರಣೆಯರ ವಚನ ಸಂಪುಟ(೫), ವಚನ-೮೪೮, ಪುಟ. ೨೬೯

೨. ಅದೇ, ವಚನ-೮೫೪, ಪುಟ. ೨೭೧

ಮೋಳಿಗೆ ಮಹಾದೇವಿ: 'ಎನ್ನಯ್ಯ ಪ್ರಿಯ ನಿಃಕಳಂಕ ಮಲ್ಲಿಕಾರ್ಜುನ' ಎಂಬುದು ಈಕೆಯ ವಚನಗಳ ಅಂಕಿತ. ಈಕೆಯ ೬೯ ವಚನಗಳು ದೊರೆತಿವೆ. ಮೋಳಿಗೆ ಮಾರಯ್ಯನ ಹೆಂಡತಿ ಈ ಮೋಳಿಗೆ ಮಹಾದೇವಿ. ಇವರ ಮೂಲಹೆಸರು ಮಹಾದೇವ ಭೂಪಾಲ ಗಂಗಾದೇವಿ ಎಂಬುದು ಕಾಶ್ಮೀರದಿಂದ ಕಲ್ಯಾಣಕ್ಕೆ ಬಂದು ಕಟ್ಟಿಗೆ ಮಾರುವ ಕಾಯಕವನ್ನು ಈ ರಾಜದಂಪತಿಗಳು ನಿರ್ವಹಿಸುತ್ತಿದ್ದರು. ಕಾಶ್ಮೀರದಲ್ಲಿ ಪ್ರತಿನಿತ್ಯ ಆರು ಸಾವಿರ ಮಂದಿಗೆ ದಾಸೋಹ ಮಾಡುತ್ತಿರುತ್ತಾರೆ. ಬಸವಣ್ಣನವರ ಕೀರ್ತಿವಾರ್ತೆ ಕೇಳಿ ಕಲ್ಯಾಣಕ್ಕೆ ಬಂದು ಕಟ್ಟಿಗೆ ಮಾರಿ ಆ ಕಾಯಕದಿಂದ ಬಂದ ಧನದಿಂದ ದಾಸೋಹ ಕಾರ್ಯ ನಡೆಸುತ್ತಾರೆ. ತೀವ್ರವಾದ ಆಧ್ಯಾತ್ಮ ಪ್ರಜ್ಞೆಯನ್ನು ಮೋಳಿಗೆ ಮಹಾದೇವಿಯ ವಚನಗಳಲ್ಲಿ ಕಾಣಬಹುದು.

ದೇವರನ್ನೊಲಿಸಿಕೊಳ್ಳುವ ಬಗೆಗೆ ಹೇಳುವ ವಚನವೊಂದು ಹೀಗೆ.

'ಮಣ್ಣನಿತ್ತು ನಿಮ್ಮ ಕಂಡೆಹೆನೆಂದಡೆ ಜಗಭರಿತ ನೀನು;
ಹೊನ್ನನಿತ್ತು ನಿಮ್ಮ ಕಂಡೆಹೆನೆಂದಡೆ ಹಿರಣ್ಯಮೂರ್ತಿ ನೀನು
ಹೆಣ್ಣನಿತ್ತು ನಿಮ್ಮ ಕಂಡೆಹೆನೆಂದಡೆ ತ್ರಿವಿಧಶಕ್ತಿಮೂರ್ತಿ ನೀನು;
ಮನವನಿತ್ತು ನಿಮ್ಮ ಕಂಡೆಹೆನೆಂದೆಡೆ ಮನೋಮೂರ್ತಿ ನೀನು;
ಎನಗೇನು ನಿನಗಿತ್ತು ಕಾಬ ಕಾಣಿಕೆ ನೀನು ಸಿಕ್ಕುವುದಕ್ಕೆ?
ಕ್ರೀಯಲ್ಲಿ ನಿರತ ಸದ್ಭಾವದಲ್ಲಿ ಶುದ್ಧ
ಹಿಡಿದುದ ಬಿಡದೆ ಬಿಟ್ಟುದ ಹಿಡಿಯದೆ
ನಿಶ್ಚಯವಾದ ನಿಜಜ್ಞಾನಿಗಳಲ್ಲಿ ಬೆಚ್ಚಂತಿದ್ದಡೆ ನೀನು ಅಲ್ಲಿ ತಪ್ಪದಿಪ್ಪೆ
ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನಾ[೧]

ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮ: ಈಕೆ ರಾಯಸದ ಮಂಚಣ್ಣನ ಪತ್ನಿ. ರಾಯಸದ ಮಂಚಣ್ಣ ಬಸವಣ್ಣನ ಪತ್ರವ್ಯವಹಾರ ನೋಡಿಕೊಳ್ಳುತ್ತಿದ್ದ. ಅಪ್ತ ಕಾರ್ಯದರ್ಶಿ ಹಾಗೆಯೇ ವಚನಕಾರ ಕೂಡ ಆಗಿದ್ದ. 'ಅಮುಗೇಶ್ವರ ಲಿಂಗ' ಎಂಬುದು ಈ ರಾಯಮ್ಮನ ವಚನಾಂಕಿತ. ಈಕೆಯ ಒಂದು ವಚನ ಮಾತ್ರ ದೊರೆತಿದೆ. ಗುರುವಿನಿಂದ ಲಿಂಗದೀಕ್ಷೆ ಪಡೆದ ಭಕ್ತರಿಗೆ ಮೇಲು ವ್ರತ. ಪುನರ್ದೀಕ್ಷೆಯೆಂಬುದಿಲ್ಲ; ವ್ರತ ತಪ್ಪಿ ಶರೀರವಿಡಿದ ನರಕಿಗಳಿಗೆ ಮುಕ್ತಿಯಿಲ್ಲ ಎಂದು ವ್ರತ ನಿಷ್ಠೆಯನ್ನು ಈಕೆ ಬೋಧಿಸುತ್ತಾಳೆ. ಈಕೆಯ ವಚನ ಹೀಗಿದೆ.

ಗರುಡಿಯಲ್ಲಿ ಕೋಲಲ್ಲದೆ ಕಾಳಗದಲ್ಲಿ ಕೋಲುಂಟೆ?
ಭವಿಗೆ ಮೇಲುವ್ರತ ಪುನರ್ದೀಕ್ಷೆಯಲ್ಲದೆ ಭಕ್ತರುಂಟೆ?

---

೧. ಶಿವಶರಣೆಯರ ವಚನ ಸಂಪುಟ(೫) ವಚನ-೪೪೧, ಪುಟ. ೩೦೦

ವ್ರತತಪ್ಪಲು ಶರೀರವಿಡಿದ ನರಕಿಗೆ ಮುಕ್ತಿಯಿಲ್ಲ
ಅಮುಗೇಶ್ವರಲಿಂಗದಲ್ಲಿ[೧]

ರೇವಣ ಸಿದ್ದಯ್ಯಗಳ ಪುಣ್ಯಸ್ತ್ರೀ ರೇಕಮ್ಮ: ಬಸವಣ್ಣನವರ ಸಮಕಾಲೀನರಾದ ರೇವಣ ಸಿದ್ದಯ್ಯಗಳ ಪತ್ನಿ ಈ ರೇಕಮ್ಮ. ರೇಕಮ್ಮನ ಒಂದು ವಚನ ಮಾತ್ರ ದೊರೆತಿದ್ದು. 'ಶ್ರೀ ಗುರುಸಿದ್ದೇಶ್ವರ' ಎಂಬುದು ಈಕೆಯ ವಚನಾಂಕಿತವಾಗಿದೆ. ಆಚಾರಭ್ರಷ್ಟರನ್ನು ವ್ರತ ತಪ್ಪುವರನ್ನು ಕೊಂದರೂ ತಪ್ಪಿಲ್ಲವೆಂದು ಹೇಳಿದ ಶರಣೆ ಈಕೆ. ವೀರಶೈವ ಧರ್ಮದ ಅಚಲ ನಿಷ್ಠೆ ವ್ಯಕ್ತವಾಗಿರುವುದನ್ನು ಇವಳ ವಚನದಲ್ಲಿ ಕಾಣಬಹುದು.

'ಲಿಂಗಬಾಹ್ಯನ, ಆಚಾರಭ್ರಷ್ಟನ, ವ್ರತತಪ್ಪುಕನ
ಗುರುಲಿಂಗ ಜಂಗಮವ ಕೊಂದವನ
ಪಾದೋದಕ ಪ್ರಸಾದ ದೂಷಕನ
ವಿಭೂತಿ ರುದ್ರಾಕ್ಷಿ ನಿಂದಕನ ಕಂಡಡೆ
ಶಕ್ತಿಯುಳ್ಳಡೆ ಸಂಹಾರವ ಮಾಡುವುದು
ಶಕ್ತಿಯಿಲ್ಲದಿದ್ದಡೆ ಕಣ್ಣು ಕರ್ಣವ ಮುಚ್ಚಿಕೊಂಡು
ಶಿವಮಂತ್ರ ಜಪಿಸುವುದು
ಅಷ್ಟು ಆಗದಿದ್ದಡೆ ಆ ಸ್ಥಳವ ಬಿಡುವುದು
ಅದಲ್ಲದಿದ್ದಡೆ ಕುಂಭೀಪಾತಕ ನಾಯಕನರಕದಲ್ಲುಕ್ಕುವ
ಶ್ರೀಗುರುಸಿದ್ಧೇಶ್ವರನು.'[೨]

ಸತ್ಯಕ್ಕ: ಸತ್ಯಕ್ಕ ಶ್ರೀ ಸಾಮಾನ್ಯ ವರ್ಗದಿಂದ ಬಂದು ಶರಣರ ಪ್ರಭಾವ ವಲಯಕ್ಕ ಸೇರಿ ಶರಣೆಯೆನಿಸಿದಳು. ಸತ್ಯಕ್ಕನ ಸ್ಥಳ ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪ. ಸಮೀಪದ ಹರೀಜಂಜೂರು. ಶಿವಭಕ್ತರ ಮನೆಯ ಅಂಗಳದ ಗುಡಿಸುವುದು ಈಕೆಯ ಕಾಯಕವಾಗಿತ್ತು. ಸತ್ಯಕ್ಕನ ೨೯ ವಚನಗಳು ದೊರೆತಿವೆ. 'ಶಂಬುಜಕ್ಕೇಶ್ವರ' ಎಂಬುದು ಈಕೆಯ ವಚನಗಳ ಅಂಕಿತವಾಗಿದೆ. ವೈಚಾರಿಕತೆ, ಧೈರ್ಯ, ಛಲ ಇವು ಇವಳ ವಚನಗಳಲ್ಲಿ ಎದ್ದು ಕಾಣುವ ಅಂಶಗಳು. ಸತ್ಯಕ್ಕನ ವೈಯಕ್ತಿಕ ವಿಚಾರಗಳು ಅಷ್ಟಾಗಿ ತಿಳಿದುಬಂದಿಲ್ಲ. ಅಂತರಂಗದಲ್ಲಿ ಸದಾಚಾರ ಸಂಪತ್ತು ತುಂಬಿರಬೆಕು. ಬಹಿರಂಗದ ಡಾಂಬಿಕ ಆಚರಣೆಗಳಿಗೆ ಸತ್ಯಕ್ಕನ ವಿರೋಧವಿದೆ. ನೈತಿಕತೆ, ಆಚಾರಶುದ್ಧಿಯ ನಿತ್ಯನೇಮವೆನ್ನುವುದು ಆಕೆಯ ದೃಢನಂಬಿಕೆ. ಸತ್ಯಕ್ಕನಲ್ಲೂ ಸತಿಪತಿ ಭಾವದ ವಚನಗಳು ಸಿಗುತ್ತವೆ. ಇದಕ್ಕೆ ಉದಾಹರಣೆ ಈ ವಚನ,

---

೧. ಶಿವಶರಣೆಯರ ವಚನ ಸಂಪುಟ(೫) ವಚನ-೯೫೬, ಪುಟ. ೩೦೭
೨. ಅದೇ, ವಚನ-೯೫೭, ಪುಟ. ೩೦೮

ಇನಿಯಂಗೆ ತವಕವಿಲ್ಲ, ಎನಗೆ ಸೈರಣೆಯಿಲ್ಲ
ಮನದಿಚ್ಛೆಯನರಿವ ಸಖಿಯರಿಲ್ಲ, ಇನ್ನೇವೆನವ್ವಾ?
ಮನುಮಥವೈರಿಯ ಅನುಭಾವದಲ್ಲಿ ಎನ್ನ ಮನ ಸಿಲುಕಿ ಬಿಡದು
ಇನ್ನೇನ ಮಾಡುವೆನೆಲೆ ಕರುಣವಿಲ್ಲದ ತಾಯೆ?
ದಿನ ವ್ಯಥಾ ಹೋಯಿತ್ತಾಗಿ ಯೌವ್ವನ ಬೀಸರವಾಗದ ಮುನ್ನ
ಪಿನಾಕಿಯ ನೆರಹವ್ವಾ ಶಂಭುಜಕೇಶ್ವರನ. [೧]

ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ: ಕಾಳವ್ವೆಯ ಒಂದು ವಚನ ಮಾತ್ರ ದೊರೆತಿದೆ. ಇದರ ಅಂಕಿತ 'ಭೀಮೇಶ್ವರ'. ಎಂಬುದಾಗಿದೆ. ಸಿದ್ಧಬುದ್ಧಯ್ಯ ಮತ್ತು ಕಾಳವ್ವೆ ಶರಣ ದಂಪತಿಗಳ ಬಗೆಗೆ ಹೆಚ್ಚಿನ ವಿಷಯಗಳು ತಿಳಿದು ಬಂದಿಲ್ಲ. ಈಕೆ ತನ್ನ ವಚನದಲ್ಲಿ ವ್ರತಭ್ರಷ್ಟರು ಮತ್ತು ಲಿಂಗಬಾಹ್ಯರನ್ನು ಟೀಕಿಸುತ್ತಾಳೆ. ಅಂಥವರನ್ನು ಕಂಡರೆ ಸತ್ತನಾಯಿ, ಕಾಗೆಗಳನ್ನು ಕಂಡಂತೆ. ಅಂಥವರೊಡನೆ ಮಾತನಾಡಲಾಗದು ಎನ್ನುತ್ತಾಳೆ. ಆಕೆಯ ವಚನ ಹೀಗಿದೆ.

'ವ್ರತಭ್ರಷ್ಟ, ಲಿಂಗಬಾಹ್ಯನ ಕಂಡಡೆ
ಸತ್ತನಾಯ, ಕಾಗೆಯ ಕಂಡಂತೆ
ಅವರೊಡನೆ ನುಡಿಯಲಾಗದು ಭೀಮೇಶ್ವರಾ. [೨]

ಸೂಳೆಸಂಕವ್ವೆ: ಈಕೆ ಬಸವಣ್ಣನವರ ಸಮಕಾಲೀನ ವಚನಕಾರ್ತಿ. ಈಕೆಯ ಜೀವನ ವಿವರಗಳು ತಿಳಿದುಬಂದಿಲ್ಲ. ಸಂಕವ್ವೆಯ ಒಂದು ವಚನ ದೊರೆತಿದೆ. 'ನಿರ್ಲಜ್ಜೇಶ್ವರ' ಇವರ ಅಂಕಿತವಾಗಿದೆ. ವ್ರತಹೀನರ ಸಂಗ ಶಿಕ್ಷಾರ್ಹ ಎಂದು ಹೇಳುತ್ತಾಳೆ. ಮೊದಲು ವೇಶ್ಯಾವೃತ್ತಿಯನ್ನು ಮಾಡುತ್ತಿದ್ದು ಶರಣ ಚಳವಳಿಯ ಪ್ರಭಾವದಿಂದ ಸಾತ್ವಿಕ ಬದುಕಿನತ್ತ ಸಾಗಿ ಬಂದಿರಬೇಕೆಂದು ಆಕೆಯ ಹೆಸರಿನ ಹಿಂದೆ ಸೇರಿದ ವಿಶೇಷಣ ಹಾಗೂ ವಚನದಲ್ಲಿ ವ್ಯಕ್ತವಾದ ವಿಷಯಗಳು ತಿಳಿಸುತ್ತದೆ. ಆಕೆಯ ಪ್ರಾಮಾಣಿಕ, ನಿರ್ಭೀತ ವ್ಯಕ್ತಿತ್ವಕ್ಕೆ ಆಕೆಯ ವಚನ ನಿದರ್ಶನವಾಗಿದೆ. ಸಮಾಜದಲ್ಲಿ ಅವಮಾನಗಳಿಗೆ ಗುರಿಯಾಗಿ ಅಗೋಚರ ನೆಲೆಯಲ್ಲಿ ಜೀವಿಸುತ್ತಿದ್ದ ಅಪಮಾನಿತ ವರ್ಗಗಳಲ್ಲಿ ಶರಣ ಚಳವಳಿ ಮೂಡಿಸಿದ ಎಚ್ಚರಕ್ಕೆ ಸೂಳೆಸಂಕವ್ವೆ ನಿದರ್ಶನ. ವೃತ್ತಿ ಸಂಬಂಧಿತಿ ಅವಮಾನ ಮುಜುಗರಗಳನ್ನು ಮುರಿದು, ತನ್ನ ಸ್ವಂತಿಕೆ ಸ್ವಾಭಿಮಾನ ವ್ಯಕ್ತಿಯಲ್ಲಿ ರೂಢಿಸಿಕೊಂಡದ್ದು ವಿಶೇಷ. ಆಕೆಯ ದೊರೆತಿರುವ ಏಕೈಕ ವಚನ ಇಂತಿದೆ.

---

೧. ಶಿವಶರಣೆಯರ ವಚನ ಸಂಪುಟ(೫) ವಚನ-೯೬೪, ಪುಟ. ೩೧೧
೨. ಅದೇ, ವಚನ-೯೮೭, ಪುಟ. ೩೧೯

'ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ
ಹಿಡಿದಡೆ ಬತ್ತಲೆ ನಿಲಿಸಿ ಕೊಲುವರಯ್ಯ
ವ್ರತಹೀನನಸರಿದು ಬೆರೆದಡೆ
ಕಾದ ಕತ್ತಿಯಲ್ಲಿ ಕೈ ಕಿವಿ ಮೂಗ ಕೊಯ್ವರಯ್ಯ
ಒಲ್ಲನೊಲ್ಲೆ ಒಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರಾ.[೧]

ಹಡಪದಪ್ಪಣಗಳ ಪುಣ್ಯಸ್ತ್ರೀ ಲಿಂಗಮ್ಮ: ಲಿಂಗಮ್ಮ ದಲಿತ ವರ್ಗದ ಶರಣೆ, ಬಸವಣ್ಣನ ನಿಕಟವರ್ತಿ. ಆಪ್ತ ಹಡಪದ ಅಪ್ಪಣನ ಸತಿ. ಅಪ್ಪಣ್ಣಪ್ರಿಯ ಚನ್ನಬಸವೇಶ್ವರ ಲಿಂಗಮ್ಮನ ವಚನಾಂಕಿತ. ಲಿಂಗಮ್ಮನ ವೈಯಕ್ತಿಕ ಜೀವನದ ವಿವರಗಳು ಅಷ್ಟಾಗಿ ದೊರೆಯವು. ಇವಳ ೧೧೩ ವಚನಗಳು ಒಂದು ಮಾತ್ರ ಗೋಪ್ಯ ಹಾಗೂ ಒಂದು ಸ್ವರವಚನ ದೊರೆತಿದೆ. "ಹಡಪದಪ್ಪಣ್ಣನೇ ಎನ್ನ ಕರಸ್ಥಲಕ್ಕೆ ಲಿಂಗವಾಗಿ ಬಂದು ನೆಲೆಗೊಂಡನು ಎನ್ನುವ ಲಿಂಗಮ್ಮ ತನ್ನ ಆಧ್ಯಾತ್ಮ ಸಾಧನೆಗೆ ಪತಿ ಮತ್ತು ಕಲ್ಯಾಣ ಶರಣರ ಮಾರ್ಗದರ್ಶನವನ್ನು ನೆನೆಯುತ್ತಾಳೆ. ಲಿಂಗಮ್ಮನ ವಚನಗಳಲ್ಲಿ ಕಾವ್ಯಗುಣ ಕಡಿಮೆ. ಇವಳ ಹೆಚ್ಚಿನ ವಚನಗಳು ಗದ್ಯಾತ್ಮಕ ಗುಣವನ್ನು ಹೊಂದಿವೆ. ಮನದ ಚಂಚಲತೆ, ಘನವಸ್ತುವನ್ನು ಕಾಣಲು ಆ ಮನವನ್ನು ನಿಗ್ರಹಿಸಬೇಕಾದ ವಿಧಾನ, ಗುರುಲಿಂಗಜಂಗಮಭಕ್ತಿ, ಶರಣರ ನಡೆನುಡಿ, ಆಚಾರ, ತೋರಿಕೆಯಭಕ್ತಿ, ಶರಣನ್ನರಿಯದ ಭವಿಗಳು, ಢಾಂಬಿಕರ ಅವಹೇಳನ ತನ್ನ ಸಾಧನೆಯ ರೀತಿ ಯೋಗವಿಚಾರ ಇವೆಲ್ಲವೂ ಲಿಂಗಮ್ಮನ ವಚನಗಳಲ್ಲಿ ಕಾಣುವ ಮುಖ್ಯ ವಿಷಯಗಳಾಗಿವೆ. ಅರಿಷಡ್ವರ್ಗಗಳನ್ನು ಕುರಿತ ಆಕೆಯ ವಚನ ಹೀಗಿದೆ.

'ಮನವ ಗೆದ್ದೆಹೆನೆಂದು, ತಮದ ಕರಗಿಸಿ ಕಾಯವ ಮರುಗಿಸಿ
ನಿದ್ರೆಯ ಕೆಡಿಸಿ ವಿದ್ಯೆಯ ಕಲಿತೆಹೆನೆಂಬ ಬುದ್ಧಿಹೀನರಿರಾ ನೀವು ಕೇಳಿರೋ
ನಮ್ಮ ಶರಣರು ಮನವನೆಂತು ಗೆದ್ದಹರೆಂದಡೆ
ಕಾಮಕ್ರೋಧವ ನೀಗಿ, ಲೋಭ ಮೋಹ ಮದ ಮತ್ಸರವ ಛೇದಿಸಿ
ಆಸೆರೋಷವಳಿದು, ಜಗದ ಪಾಶವ ಬಿಟ್ಟು
ಆ ಮರುಗಿಸುವ ಕಾಯವನೆ ಪ್ರಸಾದಕಾಯವ ಮಾಡಿ ಸಲಹಿದರು
ಕೆಡಿಸುವ ನಿದ್ರೆಯನೆ ಯೋಗ ಸಮಾಧಿಯ ಮಾಡಿ
ಸುಖವನೇಕಿಸಿ ಜಗವನೆ ಗೆದ್ದ ಶರಣರ ಬುದ್ಧಿ ಹೀನರೆತ್ತ ಬಲ್ಲರೋ
ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣ?[೨]

---

೧. ಶಿವಶರಣೆಯರ ವಚನ ಸಂಪುಟ(೫) ವಚನ-೮೮, ಪುಟ. ೩೨೦
೨. ಅದೇ, ಪುಟ. ೩೨೪

ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ: ಗಂಗಮ್ಮ ಹಾದರ ಕಾಯಕದ ಮಾರಯ್ಯನ ಪತ್ನಿ. 'ಗಂಗೇಶ್ವರ' ಎಂಬುದು ಈಕೆಯ ವಚನಾಂಕಿತ. ಈಕೆಯ ಒಂದು ವಚನ ಮಾತ್ರ ದೊರೆತಿದೆ. ಕಾಯಕ ಸಮಾನತೆ, ವ್ರತನಿಷ್ಠೆ ಇದರ ಮುಖ್ಯ ಆಶಯವಾಗಿದೆ. ಈಕೆಯ ಮಾತಿನಲ್ಲಿ ಇವಳು ಕೀಳು ಕುಲದಿಂದ ಬಂದವಳೆಂದು ಧ್ವನಿ ಇದ್ದಂತಿದೆ. ಆ ವಚನ ಇಂತಿದೆ.

'ಆವಕಾಯಕವ ಮಾಡಿದಡೂ ಒಂದೇ ಕಾಯಕವಯ್ಯ
ಆವ ವ್ರತ ವಾದಡೂ ಒಂದೇ ವ್ರತವಯ್ಯಾ
ಆಯ ತಪ್ಪಿದಡೆ ಸಾವಿಲ್ಲ; ವ್ರತ ತಪ್ಪಿದಡೆ ಕೂಡಲಿಲ್ಲ
ಕಾಕಪಿಕದಂತೆ ಕೂಡಲ ನಾಯಕನರಕ
ಗಂಗೇಶ್ವರಲಿಂಗದಲ್ಲಿ.[೧]

ಸತ್ಯಶುದ್ಧ ಕಾಯಕ ಶ್ರದ್ಧೆಯನ್ನು ಆಚಾರಶುದ್ಧಿಯನ್ನು ಎತ್ತಿಹಿಡಿದಿರುವ ಈ ವಚನ ಗಂಗಮ್ಮನ ಪ್ರಾಮಾಣಿಕ ವ್ಯಕ್ತಿತ್ವವನ್ನು ಪ್ರಕಟಿಸಿದೆ. ವ್ರತಹೀನರ ಸ್ನೇಹ ಕೋಗಿಲೆ ಕಾಗೆಯ ಸಹವಾಸದಂತೆ ಅಂಥವರಿಗೆ ನರಕ ತಪ್ಪದು ಎಂದು ಎಚ್ಚರಿಸುವಲ್ಲಿ ಗಂಗಮ್ಮನ ಶುದ್ಧ ಆಚಾರದ ಕಾಳಜಿ, ವ್ರತಾಚಾರದ ಮಹಿಮೆ ಕಂಡುಬರುತ್ತದೆ.

೧. ಶಿವಶರಣೆಯರ ವಚನ ಸಂಪುಟ(೫), ವಚನ-೧೧೦೨, ಪುಟ. ೩೬೦

ಅಧ್ಯಾಯ–೪

ಶಿವಶರಣೆಯರು ಮತ್ತು ವಚನಸೃಷ್ಟಿ

"ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ
ಅಜಗಣ್ಣನ ಐದು ವಚನಕ್ಕೆ ಕೂಡಲಚೆನ್ನಸಂಗಮದೇವಾ
ಮಹದೇವಿಯಕ್ಕನ ಒಂದು ವಚನ ನಿರ್ವಚನ"

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ವಚನಸಾಹಿತ್ಯವು ಮಹತ್ವದ ಸೃಷ್ಟಿ. ವಚನ ಚಳವಳಿಯು ಸಾಹಿತ್ಯ ಮತ್ತು ಸಂಸ್ಕೃತಿಯ ಚಿಂತನೆಯಗಳನ್ನು ಜನಪರಗೊಳಿಸಿತು. ಸಾಂಪ್ರದಾಯಿಕ ವಸ್ತು, ಶೈಲಿ, ಭಾಷೆ ಮತ್ತು ಪ್ರಭುತ್ವ ಕೇಂದ್ರಿತ ಆಶಯಗಳು ಬದಲಾಗಿ ಜನಸಾಮಾನ್ಯರ ಬದುಕಿನ ದನಿಯಾಗಿ ಸಾಹಿತ್ಯ ತನ್ನ ಅರ್ಥ ಮತ್ತು ಸ್ವರೂಪವನ್ನು ಬದಲಿಸಿಕೊಂಡದ್ದು ಈ ಕಾಲಘಟ್ಟದಲ್ಲಿ, ಶರಣಶರಣೆಯರಿಗೆ ವಚನಗಳು ಆತ್ಮಶೋಧನೆಗೆ, ಅಧ್ಯಾತ್ಮ ಚಿಂತನೆಗೆ, ಭಕ್ತಿಸಾಧನೆಗೆ ಸ್ವಾನುಭವದ ಅಭಿವ್ಯಕ್ತಿಗೆ, ಸಾಮಾಜಿಕ ಚಳವಳಿಗೆ ಮಾಧ್ಯಮವಾದವು.

ವಚನಚಳವಳಿಯ ಸಂದರ್ಭದಲ್ಲಿ ಜಾತಿ–ಭೇದ, ಮೇಲು–ಕೀಳು, ಗಂಡು–ಹೆಣ್ಣು, ಬಡವ–ಬಲ್ಲಿದ ಎಂಬ ವ್ಯತ್ಯಾಸವಿಲ್ಲದೆ ಎಲ್ಲರೂ ಭಾಗವಹಿಸಿದ್ದು ವಿಶೇಷ. ಭೇದರಹಿತ ಸಮಾನತೆಯ ಮಾನವಧರ್ಮದ ನೆಲೆಗಟ್ಟಿನಲ್ಲಿ ಸಮಾಜ ಕಟ್ಟಲು ನಡೆದ ಶರಣ ಚಳವಳಿಯಲ್ಲಿ ಮೇಲುವರ್ಗ, ಕೀಳುವರ್ಗ, ಮಧ್ಯಮವರ್ಗಗಳೆನ್ನದೆ ವಿವಿಧ ಸ್ತರಗಳಿಂದ ವಚನಕಾರ್ತಿಯರು ಬಂದು ಸೇರಿದರು. ಕುಟುಂಬದಾಚೆಗೆ ಬೆನ್ನು ಮಾಡಿ ಬದುಕುತ್ತಿದ್ದ ಮಹಿಳೆಯರು ಶರಣ ಚಳವಳಿಯ ಮುಂಚೂಣಿಗೆ ಬಂದುದು ವಿಶೇಷ. "ನಾಮದಲ್ಲಿ ಹೆಂಗೂಸೆಂಬ ಹೆಸರಾದಡೇನು ಭಾವಿಸಲು ಗಂಡುರೂಪು ನೋಡಾ" ಎಂಬ ಅಕ್ಕನ ಭಾವದಂತೆ ಸ್ತ್ರೀ–ಪುರುಷ ಸಮಾನತೆಯ ಧನಿ ಎತ್ತಿದರು.

ವಚನಕಾರ್ತಿಯರಿಗೆ ವಚನಚಳವಳಿಯ ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ ಮತ್ತು ವೈಚಾರಿಕ ಚಿಂತನಾಕ್ರಮದ ಪ್ರಭಾವವುಂಟಾಗಿದೆ. ವಚನಕಾರ್ತಿಯರ ಮುಖ್ಯಾಸಕ್ತಿ ಆಧ್ಯಾತ್ಮ ಸಾಧನೆಯಾಗಿರುವುದರಿಂದ ಅವರ ವಚನಗಳಲ್ಲಿ ಹೆಚ್ಚಾಗಿ ದೇವರು, ಆತ್ಮ–ಪರಮಾತ್ಮ ಚಿಂತನೆ ಕಂಡುಬರುತ್ತದೆ. 'ಸತಿ–ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂಬ ತತ್ತ್ವವನ್ನು ಒಪ್ಪಿಕೊಂಡ ಶರಣೆಯರೇ ಹೆಚ್ಚು. ಬಹುಪಾಲು ಶರಣೆಯರು ಸಂಸಾರಿಗಳಾಗಿದ್ದರು. ಆಧ್ಯಾತ್ಮ ಸಾಧನೆಯಲ್ಲಿ ಸಂಸಾರವೆಂಬುದು ಶತೃವಲ್ಲ. ಅದು ಸಾಧನೆಗೆ ಪೂರಕವೇ ಆಗಿದೆ ಎಂಬುದನ್ನು

ಬದುಕಿ ಸಾಧಿಸಿ ತೋರಿದರು. ಒಬ್ಬರ ಮನಸ್ಸನ್ನು ಒಬ್ಬರು ಅರಿತು ಬಾಳಿದರು. ಬದುಕನ್ನ ಅಪಾರವಾಗಿ ಪ್ರೀತಿಸಿದರು. ಪ್ರಪಂಚಸುಖದಲ್ಲೇ ಪಾರಮಾರ್ಥದ ದರ್ಶನ ಮಾಡಿದರು. ಕೆಲವು ಸಲ ಪತಿ ಮಾರ್ಗ ತಪ್ಪಿದಾಗ ಎಚ್ಚರಿಸಿದರು. ದಾಂಪತ್ಯಧರ್ಮಕ್ಕೆ ಚ್ಯುತಿ ಬರದಂತೆ ಬಾಳಿ ಬದುಕಿದರು. 'ಬಸವನ ಅನುಭವದಿಂದ ಕಂಡು ವಿಚಾರಪತ್ನಿಯಾದೆನಯ್ಯ' ಎಂಬ ನೀಲಮ್ಮಳ ಮಾತು ಪತಿಗೆ ವೈಚಾರಿಕ ಸಂಗಾತಿಯಾಗಿ ಅವನ ಉಜ್ವಲತೆಯ ಬದುಕಿನಲ್ಲಿ ಪಾಲ್ಗೊಂಡ ಸಾರ್ಥಕ್ಯ ಮನೋಭಾವ ವ್ಯಕ್ತವಾಗುತ್ತದೆ.

ಲಿಂಗಮ್ಮ, ಲಕ್ಕಮ್ಮ ಇತ್ಯಾದಿ ಬಹುತೇಕ ವಿವಾಹಿತ ವಚನಕಾರ್ತಿಯರ ದಾಂಪತ್ಯ ನಿಷ್ಠೆ ಅವರ ವಚನಾಂಕಿತಗಳಲ್ಲಿ ಗೋಚರಿಸುತ್ತದೆ. ತಮ್ಮ ಗಂಡಂದಿರ ಹೆಸರು, ಇಷ್ಟದೈವ ಮತ್ತು ಆಧ್ಯಾತ್ಮಿಕ ಗುರುವಿನ ಹೆಸರುಗಳ ಸಂಯುಕ್ತ ರೂಪವನ್ನು ಪ್ರಿಯ ವಿಶೇಷಣದೊಂದಿಗೆ ಬಳಸಿಕೊಂಡಿರುವುದು ಗಮನಾರ್ಹವಾದ ಅಂಶ. ದುಗ್ಗಳೆ 'ದಾಸಯ್ಯ ಪ್ರಿಯರಾಮಾನಾಥ' ಲಕ್ಕಮ್ಮ 'ಮಾದಯ್ಯ ಪ್ರಿಯ ಅಮರೇಶ್ವರಲಿಂಗ' ಮೋಳಿಗೆ ಮಹಾದೇವಿಯಮ್ಮ 'ಎನ್ನಯ್ಯ ಪ್ರಿಯ ಇಮ್ಮಡಿ ನಿಃತಳಂಕ ಮಲ್ಲಿಕಾರ್ಜುನ', ಗಂಗಾಂಬಿಕೆ 'ಮಸಣಯ್ಯ ಪ್ರಿಯ ಗಜೇಶ್ವರ' ಲಿಂಗಮ್ಮ 'ಅಪ್ಪಣ್ಣಪ್ರಿಯ ಚನ್ನಬಸವಣ್ಣ', ಕಾಳವ್ವೆ 'ಉರಿಲಿಂಗಪೆದ್ದಿಗಳರಸ' ಎನ್ನುವ ಅಂಕಿತಗಳನ್ನು ಬಳಸಿಕೊಂಡಿದ್ದಾರೆ. ಮುಕ್ತಾಯಕ್ಕ, ಅಕ್ಕನಾಗಮ್ಮ ವಿವಾಹಿತೆಯರಾದರೂ ಅವರ ಅಂಕಿತದಲ್ಲಿ ಪತಿಯ ಹೆಸರಿನ ಬದಲು, ಅವರ ಅಧ್ಯಾತ್ಮ ಸಾಧನೆಗೆ ಮಾದರಿಯಾಗಿದ್ದ ಸಹೋದರರ ಹೆಸರುಗಳು ಕಾಣಸಿಗುತ್ತವೆ. ಕೆಲವರು ವಚನಾಂಕಿತಗಳ ಆಯ್ಕೆಯಲ್ಲೂ ಸ್ವಾತಂತ್ರ್ಯ ತೋರಿರುವುದು ಗಮನಾರ್ಹ.

ವಚನ ಚಳವಳಿಯ ಜನಪರ ಜೀವಪರ ಧೋರಣೆಗಳಿಗೆ ಬಹುತೇಕ ವಚನಕಾರ್ತಿಯರು ಧ್ವನಿಗೂಡಿಸಿದ್ದಾರೆ. ಕೆಲವು ವಚನಕಾರ್ತಿಯರ ರಚನೆಗಳಲ್ಲಿ ಸಿದ್ಧಭಾಷೆ, ಶೈಲಿ ವಿನ್ಯಾಸಗಳ ಅನುಕರಣೆ ಕಂಡುಬರುವುದುಂಟು. ಅಕ್ಕಮಹಾದೇವಿ, ಮುಕ್ತಾಯಕ್ಕ, ನೀಲಾಂಬಿಕೆ ಮುಂತಾದವರ ವಿಶಿಷ್ಟ ಶೈಲಿ, ಸಶಕ್ತ ನಿರೂಪಣೆ, ಕಾವ್ಯಾತ್ಮಕ ಅಭಿವ್ಯಕ್ತಿ, ಭಾವತೀವ್ರತೆ ಅವರ ಸಾಹಿತ್ಯಿಕ ಸತ್ವವನ್ನು ಎತ್ತಿಹಿಡಿದಿವೆ. ಕೆಲವು ರಚನೆಗಳು ಗದ್ಯಾತ್ಮಕ ಸರಳ ರಚನೆಗಳಾಗಿವೆ. ಅಕ್ಕಮಹಾದೇವಿಯ ಭಾವಪರವಶತೆಯ ಅನೇಕ ವಚನಗಳು ಅನುಭಾವ ಗೀತೆಗಳಾಗಿವೆ. ಶರಣೆಯರ ರಚನೆಗಳಲ್ಲಿ ಅಂತರಂಗ ಶೋಧ, ಅನುಭಾವ ಚಿಂತನೆ ಅನೇಕ ಲೌಕಿಕ ವಸ್ತುಗಳ ಉಪಮೆ, ರೂಪಕ, ಪ್ರತಿಮೆ, ಸಾದೃಶ್ಯಗಳ ಕಲೆಗಾರಿಕೆಯಲ್ಲಿ ಮೂಡಿಬಂದಿವೆ. ಪ್ರಾಸ, ಅನುಪ್ರಾಸ, ಲಯಬದ್ಧತೆ, ಆಡುಮಾತಿನ ಸೊಗಸು ಧ್ವನಿಶಕ್ತಿ, ಅರ್ಥಶಕ್ತಿಗಳೊಂದಿಗೆ ಅಭಿವ್ಯಕ್ತಿಗೊಂಡ ಹಲವು ರಚನೆಗಳನ್ನು ಶರಣೆಯರ ವಚನಗಳಲ್ಲಿ ಗಮನಿಸಬಹುದಾಗಿದೆ.

ಅಕ್ಕಮ್ಮ, ರಾಯಮ್ಮ, ರೆಮ್ಮವ್ವೆ, ಸತ್ಯಕ್ಕ, ಲಿಂಗಮ್ಮನ ವಚನಗಳಲ್ಲಿ ಜನಬಳಕೆಯ ಭಾಷೆ ಮತ್ತು ನುಡಿಗಟ್ಟುಗಳನ್ನು ಹೆಚ್ಚಾಗಿ ಕಾಣಬಹುದು. ಇವರುಗಳ ವಚನಗಳಲ್ಲಿ ಹರಿತವಾದ ಭಾಷೆ, ಮೊನಚು ಕಂಡುಬರುತ್ತದೆ. ವಿವಿಧ ವರ್ಗ ವೃತ್ತಿಗಳಿಂದ ಬಂದ ವಚನಕಾರ್ತಿಯರು ತಮ್ಮ ತಮ್ಮ ಪರಿಸರದ ಅನುಭವದ ಕಾಯಕದ ಪರಿಭಾಷೆಯನ್ನು ಬಳಸಿದ್ದಾರೆ. ಅಕ್ಕಮಹಾದೇವಿ, ನೀಲಾಂಬಿಕೆಯರ ಸಹಜ ಕಾವ್ಯ ಪ್ರತಿಭೆಯ ಭವಾಭಿವ್ಯಕ್ತಿಯುಳ್ಳ ಧ್ವನಿಪೂರ್ಣ ವಚನಗಳು ಶ್ರೇಷ್ಠ ಭಾವಗೀತೆಗಳಾಗಿವೆ. ಮುಕ್ತಾಯಕ್ಕನ ತಾತ್ತ್ವಿಕ ಚಿಂತನೆ, ವೈಚಾರಿಕತೆ ಹಡಪದ ಲಿಂಗಮ್ಮನ ವಿಮರ್ಶೆ ಅವರ ವಚನಗಳಿಗೆ ವಿಶೇಷತೆ ತಂದಿದೆ. ಮುಕ್ತಾಯಕ್ಕನ ವಚನಗಳಲ್ಲಿ ಕಾವ್ಯಾಂಶಕ್ಕಿಂತಲೂ ಚಿಂತನಶೀಲತೆಯೇ ಅಧಿಕವಾಗಿದ್ದರೆ ಕದಿರೆರೆಮ್ಮವ್ವೆ, ಲಕ್ಕಮ್ಮ, ವೀರಮ್ಮ, ಕಾಳವ್ವೆ, ಸತ್ಯಕ್ಕ ಮುಂತಾದ ಕಾಯಕ ಜೀವಿಗಳಲ್ಲಿ ಕಾಯಕನಿಷ್ಠೆ, ಆಚಾರನಿಷ್ಠೆ ಪ್ರಧಾನವಾಗಿದೆ. ಕೇತಲದೇವಿ, ಕೊಟ್ಟಣದ ಸೋಮವ್ವೆ, ಕದಿರೆಮ್ಮವ್ವೆ, ಕನ್ನಡಿಕಾಯಕದ ರೇಮಮ್ಮ ಮುಂತಾದವರು ತಮ್ಮ ವೃತ್ತಿ ಮೂಲ ಪರಿಭಾಷೆಯಲ್ಲಿ ಅನುಭಾವವನ್ನು ವ್ಯಕ್ತಪಡಿಸಿದ್ದಾರೆ. ಮೋಳಿಗೆ ಮಹಾದೇವಿಯಮ್ಮನ ವಚನಗಳಲ್ಲಿ ಆಧ್ಯಾತ್ಮಿಕ ಪರಿಭಾಷೆಯ ಸಾಂಕೇತಿಕತೆಯಿದ್ದು, ಲಕ್ಕಮ್ಮನಲ್ಲಿ ಸತ್ಯ ಶುದ್ಧ ಕಾಯಕ ಪ್ರಾಮಾಣಿಕತೆ ಅಭಿವ್ಯಕ್ತಗೊಂಡಿದೆ.

ಶರಣೆಯರೆಲ್ಲರೂ ಸತ್ಯಶುದ್ಧಕಾಯಕ ಜೀವಿಗಳು. 'ಹಾದರಕಾಯಕ'ದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ ಹೇಳುವಂತೆ 'ಆವ ಕಾಯಕವ ಮಾಡಿದರೂ ಒಂದೇ ಕಾಯಕವಯ್ಯ' ಎಂಬ ಮಾತಿನಂತೆ ತಮ್ಮ ಕಾಯಕದಲ್ಲಿ ಮೇಲುಕೀಳು ಭಾವನೆ ತೊರೆದು ಪವಿತ್ರ ಭಾವನೆ ಹೊಂದಿದವರಾಗಿದ್ದರು.

'ಮನಶುದ್ಧವಿಲ್ಲದವಂತೆ ದ್ರವ್ಯದ ಬಡತನವಲ್ಲದೆ
ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ
ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು
ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗದ ಸೇವೆಯುಳ್ಳನ್ನಕ್ಕರ'[೧]

ಆಯ್ದಕ್ಕಿ ಲಕ್ಕಮ್ಮನ ಈ ವಚನದಂತೆ ಚಿತ್ತಶುದ್ಧ ಕಾಯಕಕ್ಕೆ ಪ್ರಾಶಸ್ತ್ಯ ಕೊಟ್ಟವರು ಶರಣೆಯರು.

ಅಂತರಂಗ ಶುದ್ಧಿಯೇ ಬಹುಮುಖ್ಯ ಎಂಬುದನ್ನು ಶರಣೆಯರೂ ಕೂಡ ಒಪ್ಪಿದ್ದರು. ಕೇವಲ ಹೊರಗಿನ ಡಾಂಭಿಕ ಆಚರಣೆಗಳು ವ್ಯರ್ಥ ಎಂದರು. ಭಗವಂತನ ಒಲುಮೆ ಗಿಟ್ಟಿಸಲು ಭಾವಶುದ್ಧಿಯೇ ಮುಖ್ಯ. ಹೊರಗಿನ ಜಪ-ತಪ,

---

೧. ಶಿವಶರಣೆಯರ ವಚನ ಸಂಪುಟ(೫), ಡಾ. ವೀರಣ್ಣ ರಾಜೂರ, ವಚನ-೬೪೩, ಪು ೨೦೩

ವ್ರತ–ನೇಮಗಳು ಆಚಾರ ಶುದ್ಧಿಯ ಸಂಕೇತಗಳಾಗಿ ಅಂತರಂಗ ಶುದ್ಧಿಗೆ ಪ್ರೇರಕವಾಗಬೇಕು ಎಂದವರು ಶರಣೆಯರು.

> ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು;
> ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ
> ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ
> ದೃಢವಿಲ್ಲದ ಭಕ್ತಿ ಅಡಿ ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ
> ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗವ ಮುಟ್ಟದ ಭಕ್ತಿ[೧]

ಆಯ್ದಕ್ಕಿ ಲಕ್ಕಮ್ಮ ಗರ್ವದಿಂದ ಕೂಡಿದ ಭಕ್ತಿಯ ನಿಷ್ಪ್ರಯೋಜಕತೆಯನ್ನು ತಿಳಿಸುತ್ತಾಳೆ. ನಡೆ–ನುಡಿ ಎರಡೂ ಮುಖ್ಯ. ಮುಡಿಯಿಲ್ಲದ ಶೃಂಗಾರದಂತೆ ಅಪಹಾಸ್ಯಕ್ಕೊಳಗಾಗುವ ತ್ಯಾಗ ಬೇಕಿಲ್ಲ, ಅಡಿ ಒಡೆದ ಕುಂಭಕ್ಕೆ ಸುಜಲವ ತುಂಬಿ ವ್ಯರ್ಥವಾಗುವಂತೆ ಆಗಬಾರದು ಎಂಬ ಆಶಯ ಲಕ್ಕಮ್ಮನದು. ಶರಣೆಯರದು ಸ್ವಾಭಿಮಾನದ ಬದುಕು, ಯಾರಿಗೂ ಅಂಜದೆ ಧೈರ್ಯದಿಂದ ಬಾಳಿ ಬದುಕಿದವರು. ತಮಗೆ ಅನ್ನಿಸಿದ್ದನ್ನು ನೇರವಾಗಿ ಅಭಿವ್ಯಕ್ತಿಸಿದವರು.

"ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತಯ್ಯಾ?" ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ಅಂಜಿದಡೆಂತಯ್ಯಾ?" ಎಂಬಂತೆ ಅಭಿವ್ಯಕ್ತಿಸಿದವರು.

ಅಕ್ಕಮಹಾದೇವಿಯ ಅನುಭವ ಲೋಕ ವಿಶಿಷ್ಟವಾದದ್ದು. ತನ್ನ ಮಧುರ ಭಕ್ತಿಯನ್ನು ಕಾವ್ಯಾತ್ಮಕವಾಗಿ ಅಕ್ಕ ವ್ಯಕ್ತಪಡಿಸುತ್ತಾಳೆ.

> ಕೇಳವ್ವ ಕೇಳವ್ವ ಕೆಳದಿ, ನಾನೊಂದು ಕನಸು ಕಂಡೆ
> ಗಿರಿಯ ಮೇಲೊಬ್ಬ ಗೊರವ ಕುಳ್ಳಿರ್ದುದ ಕಂಡೆ
> ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
> ಬಂದೆನ್ನ ನೆರೆದ ನೋಡವ್ವಾ
> ಆತನನಪ್ಪಿಕೊಂಡು ತಳವೆಳಗಾದೆನು
> ಚನ್ನಮಲ್ಲಿಕಾರ್ಜುನನ ಕಂಡು
> ಕಣ್ಣ ಮುಚ್ಚಿ ತೆರೆದು ತಳುವೆಳಗಾದೆನು.[೨]

---

೧. ಶಿವಶರಣೆಯರ ವಚನ ಸಂಪುಟ(೫), ವಚನ-೬೩೪, ಪುಟ. ೨೦೧
೨. ಅದೇ, ವಚನ–೧೫೦, ಪುಟ. ೪೭.

ಅಕ್ಕ ಚೆನ್ನಮಲ್ಲಿಕಾರ್ಜುನನ್ನು ಎಲ್ಲ ಕಡೆಯಲ್ಲಿಯೂ ಕಂಡವಳು. ಚಿಲಿಪಿಲಿಯ ಗಿಳಿಗಳನ್ನು ಕೂಡ ತನ್ನ ಚೆನ್ನಮಲ್ಲಿಕಾರ್ಜುನನನ್ನು ಕಂಡಿರಾ? ಎಂದು ಕೇಳುವ ಭಾವನಾತ್ಮಕ ಜೀವಿ ಅಕ್ಕ. ಭಾವಶ್ರೀಮಂತಿಕೆ, ಅಭಿವ್ಯಕ್ತಿ ಸಾಧ್ಯತೆಯಿಂದ ಅಕ್ಕಳ ವಚನಗಳು ವಿಶೇಷ ಗಮನ ಸೆಳೆಯುತ್ತವೆ. ಲೌಕಿಕ-ಅಲೌಕಿಕ, ಮೂರ್ತ ಅಮೂರ್ತ ಸಂಗತಿಗಳನ್ನು ಉಪಮೆ ದೃಷ್ಟಾಂತಗಳ ಮೂಲಕ ಅಭಿವ್ಯಕ್ತಿಸುವಲ್ಲಿ ಅಕ್ಕ ಅದ್ವಿತೀಯಳು. ಅನುಭಾವದ ತೀವ್ರ ಹಂಬಲದಲ್ಲಿ ಪರಿತಪಿಸುವ ಭಕ್ತರ ಮನೋವೇದನೆ ಪ್ರಾಪಂಚಿಕರಿಗೆ ಅಗಮ್ಯ ಎನ್ನುವುದನ್ನು ಅಕ್ಕಮಹಾದೇವಿ, 'ಬಂಜೆ ಬೇನೆಯರಿಯಳು, ಮಲತಾಯಿ ಮುದ್ದ ಬಲ್ಲಳೆ" ಎನ್ನುವ ಲೋಕೋಕ್ತಿಯ ಮೂಲಕ ಸಮರ್ಥಿಸುತ್ತಾಳೆ. ಪರಮಾತ್ಮನನ್ನು ಪತಿಯಾಗಿ ಆರಾಧಿಸಿ ಆತನ ಸಾಮೀಪ್ಯ ಸಮಾಗಮಕ್ಕಾಗಿ ವಿಧವಿಧವಾಗಿ ಹಂಬಲಿಸುವ ಅಕ್ಕಳ ಉತ್ಕಟ ಪ್ರೇಮ, ಅಂತರಂಗದ ವೇದನೆ ಶಬ್ದಗಳ ಮೂಲಕ ಚಿಮ್ಮಿದೆ.

ಶರಣೆಯರ ವಚನಗಳು ಧಾರ್ಮಿಕ ವಿಚಾರಗಳಿಗಿಂತ ಸಾಮಾಜಿಕ ಸಂಗತಿಗಳನ್ನು ಹೆಚ್ಚಾಗಿ ಪ್ರಕಟಪಡಿಸಿವೆ. ಸಮಾಜ ಸುಧಾರಣೆಯೇ ವಚನಚಳುವಳಿಯ ಮುಖ್ಯ ಗುರಿಯಾಗಿದ್ದರಿಂದ ಇವರು ತಮ್ಮ ವಚನಗಳಲ್ಲಿ ಆ ಕಡೆಗೆ ಒಲವು ತೋರಿದ್ದಾರೆ. ಸಮಾಜದ ಮೇಲು-ಕೀಳು, ಗಂಡು-ಹೆಣ್ಣು, ಸ್ಪೃಶ್ಯ-ಅಸ್ಪೃಶ್ಯ ಮುಂತಾದ ತಾರತಮ್ಯಗಳನ್ನು ಖಂಡಿಸಿದ್ದಾರೆ. ಉತ್ತಮ ಸಮಾಜ ನಿರ್ಮಾಣಕ್ಕೆ ಶ್ರಮಿಸುತ್ತಾ ಸಾಮಾಜಿಕ ಸ್ವಾಸ್ಥ್ಯ ಕಾಪಾಡಲು ಪೂರ್ಣಪ್ರಮಾಣದಲ್ಲಿ ಭಾಗವಹಿಸಿದ್ದಾರೆ. 'ತನ್ನ ತಾವರಿಯದೇ ಅನ್ಯರಿಗೆ ಬೋಧಿಸುವ ಭಂಡತನವು ಕುರುಡ ಕನ್ನಡಿ ಹಿಡಿದಂತೆ (ಹಡಪದ ಲಿಂಗಮ್ಮ) ವ್ಯರ್ಥ ಸಾಹಸವಾಗುತ್ತದೆ ಎಂಬುದನ್ನುಅರಿತವರು ಶರಣೆಯರು. ಅಜ್ಞಾನಿಯ ಸ್ಥಿತಿ- "ಗೂಗೆ ಕಣ್ಣಕಾಣಲರಿಯದೆ ರವಿಯ ಬಯ್ವುದು, ಕಾಗೆ ಕಣ್ಣ ಕಾಣಲರಿಯದೆ ಶಶಿಯ ಬಯ್ವುದು' (ಅಕ್ಕ) ಎಂಬಂತಹ ಚಿಂತಾಜನಕ ಸ್ಥಿತಿಯನ್ನು ವಿಡಂಬಿಸಿದವರು ಶರಣೆಯರು.

ಇವರು ಕಟ್ಟುನಿಟ್ಟಾಗಿ ವ್ರತಾಚಾರಗಳನ್ನು ಪಾಲಿಸಿದವರು. ಹಿಡಿದ ವ್ರತವ ಬಿಡದಿರಲು ಅದೇ ಮಹಾಜ್ಞಾನ (ಮುಕ್ತಾಯಕ್ಕ). ವ್ರತವೆಂಬುದು ನಾಯಕರತ್ನ, ವ್ರತವೆಂಬುದು ಸುಪ್ಪಾಣಿಯ ಮುತ್ತು, ವ್ರತವೆಂಬುದು ಜೀವಕಳೆ, ವ್ರತ ಹೋದಾಗಲೆ ಇಷ್ಟಲಿಂಗದ ಕಳೆನಷ್ಟ - ಎಂದು ವ್ರತ ಮಹತ್ವವನ್ನು ಕೊಂಡಾಡಿದವರು. ಇವರು ಕೌಟುಂಬಿಕ ನೆಲೆಯನ್ನೂ ಮೀರಿ ಸಾಹಿತ್ಯ ಕ್ಷೇತ್ರದಲ್ಲಿಯೂ ತಮ್ಮನ್ನು ಗುರುತಿಸಿ-ಕೊಂಡವರು.

ಶಿವಶರಣೆಯರಿಗೆ ಪುರುಷನ ಸಾಧನೆಯ ಬಗೆಗೆ ಗೌರವವಿದೆ. ವಚನಕಾರ್ತಿ-ಯರಲ್ಲಿ ಗೃಹಿಣಿಯರು, ವಿರಾಗಿಣಿಯರು, ದಾಸಿಯರು, ವೇಶ್ಯೆಯರು ಇದ್ದು, ಅವರಿಗೆ

ತಮ್ಮ ಲೌಕಿಕ ಜವಾಬ್ದಾರಿಗಳ ಅರಿವಿದೆ. ಅವರು ತಮ್ಮ ಆಂತರಿಕ ವಿಕಾಸ, ಹೊಂದಾಣಿಕೆಗಳ ಹಾದಿಯಲ್ಲಿ ಪುರುಷ ಜನಾಂಗ, ಸಮಾಜ, ಸಮಾಜದ ಸ್ಥಿತಿಗತಿಗಳ ಬಗೆಗೆ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾರೆ. ಅನೇಕ ಜನ ಶರಣ-ಶರಣೆಯರನ್ನೂ ಪ್ರಮುಖ ವಚನಕಾರರನ್ನು ಸ್ಮರಿಸುತ್ತಾರೆ. ತಮ್ಮ ಹಿಂದಿನವರು, ಹಿರಿಯರು, ಸಮಕಾಲೀನರನ್ನು ತಮಗೆ ಮಾರ್ಗದರ್ಶನ ಮಾಡಿದವರನ್ನು ಸ್ಮರಿಸುತ್ತಾರೆ.

ಶರಣರಂತೆಯೇ ಶಿವಶರಣೆಯರೂ ಕಾಯಕ ತತ್ತ್ವ ನಿಷ್ಠೆಯನ್ನು ಒಪ್ಪಿ ಪಾಲಿಸಿಕೊಂಡು ಬಂದವರು. ಕಾಯಕದ ಬಗೆಗೆ ಹೇಳುವಾಗ ಲಕ್ಕಮ್ಮ ವ್ಯಕ್ತಪಡಿಸುವ ಸಾಮಾಜಿಕ ಪ್ರಜ್ಞೆ, ವಾಸ್ತವದೃಷ್ಟಿ ನೆನೆಯುವಂತಹದ್ದು.

ಆಸೆಯೆಂಬುದು ಅರಸಿಂಗಲ್ಲದೆ
ಶಿವಭಕ್ತರಿಗುಂಟೆ ಅಯ್ಯಾ?
ರೋಷವೆಂಬುದು ಯಮದೂತರಿಗಲ್ಲದೆ
ಅಜಾತರಿಗುಂಟೆ ಅಯ್ಯಾ?
ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ
ಮಾರಯ್ಯಪ್ರಿಯ ಅಮಲೇಶ್ವರ ಲಿಂಗಕ್ಕೆ ದೂರ ಮಾರಯ್ಯ[೧]

ಆಯ್ದಕ್ಕಿ ಲಕ್ಕಮ್ಮ ಅತಿಯಾಸೆಯನ್ನು ತಿರಸ್ಕರಿಸುತ್ತಾಳೆ. ಅಸಂಗ್ರಹ ವೃತ್ತಿ ಇರಬೇಕು. ಇಲ್ಲದಿದ್ದರೆ ಶ್ರೀಮಂತ ಶ್ರೀಮಂತನೇ, ಬಡವ ಬಡವನೇ ಆಗಿ ಸಂಪತ್ತು ಏಕಮುಖವಾಗಿ ಕೇಂದ್ರೀಕೃತವಾಗಿ ವ್ಯವಸ್ಥೆಯ ಚಿತ್ರಣದಲ್ಲಿ ಏರುಪೇರಿನ ಕಂದಕ ಅಧಿಕವಾಗುವ ಸಂಭವವನ್ನು ಲಕ್ಕಮ್ಮ ಗುರುತಿಸಿದ್ದಾರೆ. ಕಾಯಕ ನಿರಂತರವಾಗಿ ಸಾಗಬೇಕು. ಅಂದಂದಿಗೆ ಬೇಕಾದಷ್ಟನ್ನು ಮಾತ್ರ ಸಂಗ್ರಹಿಸಬೇಕು. ಅತಿಯಾದ ಸಂಗ್ರಹ ಸಮಾಜದಲ್ಲಿ ಬಂಡವಾಳಶಾಹಿಗಳನ್ನು ಸೃಷ್ಟಿಸುತ್ತದೆ. ಅದು ಆಗಬಾರದು ಎಂಬುದೇ ಈ ವಚನದ ಆಶಯವಾಗಿದೆ.

ಶಿವಶರಣೆಯರ ಬೆಡಗಿನ ವಚನಗಳು

ಶಿವಶರಣೆಯರು ಬೆಡಗಿನ ವಚನಗಳನ್ನು ಸಹ ರಚಿಸಿದ್ದಾರೆ. ವಚನ ರಚನೆಯ ವಿಶಿಷ್ಟ ತಂತ್ರ ಈ ಬೆಡಗು. ಅನುಭಾವದ ಅತೀಂದ್ರಿಯ ಅನುಭೂತಿಯನ್ನು ಸ್ವಾನುಭಾವದ ಸಂಕೀರ್ಣತೆಯಲ್ಲಿ ಶಬ್ದಗಳಲ್ಲಿ ಪಡಿಮೂಡಿಸುವ ಬೆಡಿಗಿನ ವಚನಗಳು ಸಂಕೇತಿಕತೆ, ಪರಮಾತ್ಮಕತೆ ಮತ್ತು ವಿಶಿಷ್ಟ ಪರಿಭಾಷೆಯಲ್ಲಿ ರೂಪುಗೊಳ್ಳುವ ಸಂಕೀರ್ಣ ರಚನೆಗಳು, ವಿಶೇಷ ಅಭ್ಯಾಸಪೂರ್ಣ ಸಿದ್ಧತೆಯಿಂದ ಸಾಧ್ಯವಾಗುವ

---

೧. ಶಿವಶರಣೆಯರ ವಚನ ಸಂಪುಟ(೫) ವಚನ-೬೨೮, ಪುಟ. ೨೦೦.

ಬೆಡಗಿನ ವಚನಗಳನ್ನರಿಯಲು ಸಮರ್ಪಕ ವ್ಯಾಖ್ಯಾನದ ಅಗತ್ಯವಿದೆ. ಲಿಂಗಮ್ಮ, ಮುಕ್ತಾಯಕ್ಕ, ಅಕ್ಕಮಹಾದೇವಿಯ ಬೆಡಗಿನ ವಚನಗಳ ಪರಿಭಾಷೆ, ಪ್ರತಿಮಾ ವಿಧಾನ, ಕಲ್ಪನಾವಿಲಾಸ ಆಕರ್ಷಕವಾಗಿದೆ. ಶಿವಯೋಗಿ ಅಜಗಣ್ಣನ ನಿರಾಲಂಬ ನಿಲುವನ್ನು ಬೆಡಗಿನಲ್ಲಿ ನಿರೂಪಿಸುವ ಮುಕ್ತಾಯಕ್ಕನ ಒಂದು ವಚನವು ದೇಹಜೀವ, ಭಾವ ಬಯಲಾಗಿಸಿಕೊಂಡು ಶಬ್ಧದ ಸೀಮೆದಾಟಿದ ಲಿಂಗಾಂಗಿ ಶರಣರ ಅನುಭಾವದ ವಿನೂತನ ಶಬ್ಧ ಚಿತ್ರವಾಗಿದೆ.

ನೀರ ಬೊಂಬೆಗೆ ನಿರಾಳದ ಗೆಜ್ಜೆಯಕಟ್ಟಿ
ಬಯಲ ಬೊಂಬೆಯ ಕೈಯಲ್ಲಿ ಕೊಟ್ಟು ಮುದ್ದಾಡಿಸುತ್ತಿರ್ದನಯ್ಯ
ಕರ್ಪೂರದ ಪುತ್ಥಳಿಗೆ ಅಗ್ನಿಯ ಸಿಂಹಾಸನವನಿಕ್ಕಿ
ಅಗ್ನಿ ಕರಗಿ ಕರ್ಪೂರ ಉಳಿದುದಕ್ಕೆ ಬೆರಗಾದೆನಯ್ಯಾ
ಎನ್ನ ಅಜಗಣ್ಣಯೋಗಕ್ಕೆ[೧]

ಶಿವಯೋಗ ಸಾಧನೆಯಿಂದ ಅರಿವು ಕುರುಹಿನ ಸೀಮೆದಾಟಿ, ಕಾಯಕರ್ಮದ ಹಂಗು ಹರಿದು, ಜೀವಭಾವ ಸಂಚಲನಗಳಿಂದ ಮುಕ್ತವಾದ ನಿರ್ವಿಕಲ್ಪ ಸ್ಥಿತಿಯನ್ನು ಹಡಪದ ಲಿಂಗಮ್ಮ ಬೆಡಗಿನಲ್ಲಿ ಹೀಗೆ ನಿರೂಪಿಸಿದ್ದಾಳೆ.

ಹೋಗುತ್ತ ಹೋಗುತ್ತ ಹೊಟ್ಟೆಯಡಿಯಾಯಿತ್ತು
ಬಟ್ಟಬಯಲಾಯಿತ್ತು
ತುಟ್ಟ ತುದಿಯನೇರಿ ತೂರ್ಯಾತೀತನಾಗಿ
ಇಷ್ಟ ಪ್ರಾಣ ಭಾವ ಬಯಲಾಯಿತ್ತು
ಬಯಲಲ್ಲಿ ನಿಂದುಕೊಂಡು ನೋಡುತ್ತಿರಲು
ಬ್ರಹ್ಮವೆಯಾಯಿತ್ತು, ಕರ್ಮ ಕಡೆಗೋಡಿತ್ತು
ಅರಿವರತು ನಿರಿಗೆ ನಿಃಪತಿಯಾಗಿ
ಮಿರುಗುವ ದೃಷ್ಟಿಯಲ್ಲಿ ನೋಡುತ್ತಿರಲು
ನೋಟ ತ್ರಾಟಕವ ದಾಂಟಿ ಕೂಟದಲ್ಲಿ ಕೂಡಿ ಬೆರಸಿ
ಬೆರಗಾಗದಿಪ್ಪ ಶರಣ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣ ತಾನೆ ನೋಡಾ[೨]

ಹೀಗೆ ಅನೇಕ ಶರಣೆಯರು ಬೆಡಗಿನ ವಚನಗಳನ್ನು ಬರೆದಿದ್ದಾರೆ.

---

೧. ಶಿವಶರಣೆಯರ ವಚನ ಸಂಪುಟ(೫) ವಚನ-೮೭೫, ಪುಟ. ೮೮೫
೨. ಅದೇ, ವಚನ-೯೬೧, ಪುಟ. ೩೨೨.

ಶರಣೆಯರ ವಚನ ಭಾಷೆಯಲ್ಲಿ ಉಕ್ತಿಗಳು-ಗಾದೆಗಳು

ದೇಸಿಭಾಷೆಯ ಸೊಗಸು, ಮೊನಚಿನ ಮೂಲಕ ಅರ್ಥಶಕ್ತಿ, ಧ್ವನಿಶಕ್ತಿಯನ್ನು ತಮ್ಮ ವಚನಗಳಲ್ಲಿ ಹೆಚ್ಚಿಸಿದ್ದಾರೆ. ಜನಭಾಷೆಯೇ ಸಾಹಿತ್ಯದ ಭಾಷೆ ಕೂಡ ಆದದ್ದು ವಚನಸಾಹಿತ್ಯದ ಹೆಗ್ಗಳಿಕೆ. ಜನಭಾಷೆಯ ಪ್ರಯೋಗಶೀಲತೆ ಶರಣರಂತೆ ಶರಣೆಯರಲ್ಲೂ ಮೆರೆದಿದೆ ಸಮುದಾಯದ ಭಾಷೆಯಲ್ಲಿನ ದಿನಬಳಕೆಯ ನುಡಿಗಟ್ಟುಗಳು, ಗಾದೆಮಾತುಗಳು ಸೂತ್ರಪ್ರಾಯವಾದ ಉಕ್ತಿಗಳು ಹೇರಳವಾಗಿ ಶರಣೆಯರ ವಚನಗಳಲ್ಲಿ ವ್ಯಕ್ತಗೊಂಡಿದೆ. ಅವುಗಳಿಗೆ ಉದಾಹರಣೆಗಳು ಈ ಕೆಳಕಂಡಂತಿವೆ.

ನೀರೊಳಗೆ ಹೋದವನ ಹೆಜ್ಜೆಯ ಕಾಂಬವರುಂಟೆ? (ರಾಯಮ್ಮ)

ಆಕಾಶಗಂಗೆ ಹಾರುವಂಗೆ ದೋಣಿಯ ಕೋಲ ಹಂಗೇತಕ್ಕಯ್ಯ? (ರಾಯಮ್ಮ)

ಮರುಜವಣಿಯ ಕಂಡವರಿಗೆ? ಹನಿಗುಂಟೆ? (ರಾಯಮ್ಮ)

ಕೆಸರಿನೊಳಗಣ ಹುಲ್ಲ ಮೇಯ ಹೋದ ಪಶುವಿನಂತೆ (ರಾಯಮ್ಮ)

ಸಂತೆಗೆ ಬಂದವರ ಕೊಡೆ ಸಹಜವ ನುಡಿಯಲೇತಕ್ಕೆ? (ರಾಯಮ್ಮ)

ಕಲ್ಲ ಬತ್ತಿ ನೀರನೆಲೆದಲ್ಲಿ ಪಲ್ಲವಿಸುವುದೆ ದಿಟದ ಬೀಜದ

ವೃಕ್ಷದಂತೆ (ಮಹಾದೇವಿ)

ಕೈಯಲ್ಲಿ ಜ್ಯೋತಿ ಹಿಡಿದು ಕತ್ತಲೆಯನಲೇತಕ್ಕೆ? (ಮಹಾದೇವಿ)

ಸಿಡಿಲ ಹೊಯ್ದ ಬಾವಿಗೆ ಸೋಪಾನವೇಕೋ? (ಮುಕ್ತಾಯಕ್ಕ).

ಸೊಡರುಳ್ಳ ಮನೆಗೆ ಮತ್ತೆ ತಮಂಧವೇನೋ (ಮುಕ್ತಾಯಕ್ಕ)

ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ (ಅಕ್ಕಮ್ಮ)

ಕೈದ ಕೊಡುವರಲ್ಲದೆ ಕಲಿತನವ ಕೊಡುವರುಂಟೇ? (ಲಕ್ಕಮ್ಮ)

ಎಲವರ ಮರನ ಕಾಯ್ವ ವಿಹಂಗನಂತೆ (ಅಕ್ಕಮ್ಮ)

ಬಾಗಿಲ ಮುಂದೆ ಹಾಲಸಾಗರವಿದ್ದು ಒರತೆ ನೀರಿಗೆ ಹಾರುವಂತೆ (ಲಿಂಗಮ್ಮ)

ಕಾಮಧೇನು ಕರೆವಡೆ ಕರುವಿನ ಹಂಗೇಕೆ? (ಅಕ್ಕಮಹಾದೇವಿ)

ಕಿಚ್ಚಿಲ್ಲದ ಮರನ ಕ್ರಿಮಿ ಇಂಬಗೊಂಬಂತೆ (ಅಕ್ಕಮಹಾದೇವಿ)

ಒಡೆಯನಿಲ್ಲದ ಮನೆಯ ಶುನಕ ಸಂಚುಗೊಂಬಂತೆ (ಅಕ್ಕಮಹಾದೇವಿ)

ಕುರುಡ ಕನ್ನಡಿ ಹಿಡಿದಂತೆ (ಹಡಪದ ಲಿಂಗಮ್ಮ)

ಊರ ಸೀರೆಗೆ ಅಗಸ ತಡಬಡಗೊಂಡಂತೆ (ಅಕ್ಕಮಹಾದೇವಿ)

ಸುಟ್ಟ ಮಡಿಕೆ ಮುನ್ನಿನಂತೆ ಮರಳಿ ಧರೆಯಪ್ಪ ಬಲ್ಲುದೆ?(ಅಕ್ಕಮಹಾದೇವಿ)

ಸ್ತ್ರೀ ವಿಶಿಷ್ಟ ಸಂವೇದನೆಗೆ ಮಾದರಿಯಾಗುವ ಇಂತಹ ಹಲವು ಉಕ್ತಿಗಳು, ಗಾದೆಮಾತುಗಳು ಶಿವಶರಣೆಯರ ವಚನಗಳಲ್ಲಿ ದೊರೆಯುತ್ತವೆ.

ಸಾಹಿತ್ಯಕವಾಗಿ ಶರಣೆಯರ ವಚನಗಳು, ಶರಣರ ವಚನಗಳ ಶಿಲ್ಪ, ಅಲಂಕಾರ, ಭಾಷೆ, ಶೈಲಿ, ತಂತ್ರಗಳನ್ನು ದಟ್ಟವಾದ ಪ್ರಭಾವಲಯದಲ್ಲಿಯೇ ಮೂಡಿಬಂದಿದ್ದರೂ ಅಕ್ಕ ಮಹಾದೇವಿಯ ವಚನಗಳು ಹೆಚ್ಚು ಮಟ್ಟಿಗೆ ಸ್ವಂತಿಕೆಯನ್ನು ತೋರುತ್ತವೆ. ಈಕೆಯ ವಚನಗಳ ಭಾವತೀವ್ರತೆ, ಭಾಷೆಯ ಪ್ರಸಾದಿಕತೆ, ರಚನೆಯಲ್ಲಿ ತೋರುವ ನಯ ನಾಜೂಕು, ಅಭಿವ್ಯಕ್ತಿಯ ಅನನ್ಯತೆ, ಲಯಗಾರಿಕೆ, ಭಾವಗೀತಾತ್ಮಕತೆ ಬಸವಣ್ಣನವರಲ್ಲಿ ಬಿಟ್ಟರೆ ಉಳಿದ ಮತ್ತಾವ ವಚನಕಾರರಲ್ಲಿ ಇಷ್ಟು ಪರಿಣಾಮಕಾರಿ ಯಾಗಿ ಕಂಡುಬರುವುದಿಲ್ಲ.

ಇತರ ಶರಣೆಯರ ವಚನಗಳಲ್ಲಿಯೂ ಪ್ರಭಾವವನ್ನೂ ಮೀರಿದ ಕೆಲವು ವಿಶೇಷತೆಗಳು ಗೋಚರಿಸುತ್ತವೆ. ಅಕ್ಕಮ್ಮ ಮತ್ತು ಅಮುಗೆರಾಯಮ್ಮನ ವಚನಗಳಲ್ಲಿ ಗದ್ಯಾತ್ಮಕ ಗುಣ ಹೆಚ್ಚು. ಆದರೆ ವ್ರತಾಚಾರಗಳ ನಿರೂಪಣೆ, ವ್ರತಹೀನರ ನಿಂದೆಯಲ್ಲಿ ಬಳಕೆಯಾದ ಭಾಷೆ ತುಂಬ ಹರಿತ, ಚುರುಕು ಮುಟ್ಟಿಸುವಂತಹುದು. ಅವುಗಳಲ್ಲಿ ಬರುವ ಪಶು-ಪಕ್ಷಿ, ಗಿಡ-ಮರ ಸಸ್ಯಾದಿ ಪದಾರ್ಥಗಳ ಪ್ರತಿಮೆ, ರೂಪಕಗಳು, ಗಾದೆ, ಶಬ್ದ ಚಿತ್ರ ಉಕ್ತಿ ವೈಚಿತ್ರ್ಯಗಳು ವಿಶಿಷ್ಟವೆನಿಸಿವೆ. ಲಿಂಗಮ್ಮನ ವಚನಗಳೂ ದೀರ್ಘವಾಗಿವೆ. ಬೆಡಗಿನ ಭಾಷೆಯ ಜತೆಗೆ ಅಚ್ಚ ಕಥೆಯ ತಂತ್ರವನ್ನು ತಂದಿರುವುದು ಉಳಿದವರಿಗಿಂತ ಈಕೆಯನ್ನು ಪ್ರತ್ಯೇಕಿಸಲು ಕಾರಣವಾಗಿದೆ. ಉಳಿದ ಶರಣೆಯರ ವಚನಗಳಲ್ಲಿ ಮುಕ್ತಕ ರೂಪದ ಸಂಕ್ಷಿಪ್ತ ರಚನೆಗಳಾಗಿದ್ದು ಹೆಚ್ಚಿನವು ಆಯಾ ಶರಣೆಯರ ವೃತ್ತಿ ಪರಿಭಾಷೆಯಲ್ಲಿ ಸಮರ್ಪಕವಾಗಿ ಬಳಸಿಕೊಂಡು ಪ್ರಾಮಾಣಿಕ ಅಭಿವ್ಯಕ್ತಿಗಳೆನಿಸಿವೆ. ಸಾಮಾನ್ಯವಾಗಿ ಬಳಸಿಕೊಂಡು ಪ್ರಾಮಾಣಿಕ ಅಭಿವ್ಯಕ್ತಿಗಳೆನಿಸಿವೆ. ಸಾಮಾನ್ಯವಾಗಿ ಈ ವಚನಗಳನ್ನು ರಚಿಸಿದವರು ಕೆಳಸ್ತರದಿಂದ ಬಂದವರು. ಹೀಗಾಗಿ ದಟ್ಟವಾದ ಸಾಮಾಜಿಕ ಪ್ರಜ್ಞೆ, ಮಾತಿನಲ್ಲಿ ಒರಟುತನ, ಗಡಸುಗಾರಿಕೆಯಿಂದ ಕೂಡಿದ ದೇಶಿಯ ಸೊಗಡು, ಶೋಷಣೆಯ ವಿರುದ್ಧದ ರೊಚ್ಚು ಬಂಡಾಯ ಧೋರಣೆ ಸಹಜವಾಗಿ ಒಡೆದು ಕಾಣುತ್ತದೆ.[೧]

---

೧. ಶಿವಶರಣೆಯರ ವಚನ ಸಂಪುಟ(೫), ಪ್ರಸ್ತಾವನೆ, ಪುಟ. ೫೨

ಶಿವಶರಣೆಯರು ಸಮಾಜದ ಉದ್ಧಾರಕ್ಕಗಿಯೇ ಬರೆದವರು ದುಡಿದವರು. ಹಾಗೆಯೇ ವೈಯಕ್ತಿಕ ಅನುಭಾವಿಕ ಸಾಧನೆಯ ಸಾಧನೆಗಳನ್ನು ಸಾಧಿಸಿದವರು. ನುಡಿದಂತೆ ನಡೆದವರು, ಆದರ್ಶ ದಾಂಪತ್ಯ ಬದುಕನ್ನ ಬದುಕಿದವರು. ವಾಸ್ತವದ ನೆಲೆಗಟ್ಟಿನಲ್ಲಿ ನಿಂತು ಸಮಾಜವನ್ನು ಕಟ್ಟಬಯಸಿದವರು. ಶರಣರು ಒದಗಿಸಿದ ಸ್ವಾತಂತ್ರ್ಯವನ್ನೂ ಸಮಾಜೋ ಧಾರ್ಮಿಕ ಆಂದೋಲನದಲ್ಲಿ ಕ್ರಿಯಾತ್ಮಕವಾಗಿ ಬಳಸಿ-ಕೊಂಡವರು. ಶರಣರಿಗೆ ಬೆನ್ನೆಲುಬಾಗಿ ನಿಂತವರು, ಮುಂಚೂಣಿಯಲ್ಲಿ ಕೈಹಿಡಿದು ನಡೆಸಿದವರು, ಕಾಯಕಶ್ರದ್ಧೆ, ವ್ರತನಿಷ್ಠೆ, ಪತಿಭಕ್ತಿ ಭ್ರಾತೃಪ್ರೇಮ, ಮಾತೃಹೃದಯಿಗಳಾಗಿ ಸಂಚಲನ ಸೃಷ್ಟಿಸಿದವರು ತಮ್ಮ ವಚನಗಳನ್ನು ಸಮಾಜದ ಒಳಿತಿಗಾಗಿ ಅಸ್ತ್ರವಾಗಿ ಬಳಸಿಕೊಂಡು ನುಡಿನಡೆ, ಆಚಾರ, ವಿಚಾರ ಸಂಸ್ಕೃತಿಗಳಲ್ಲಿ ಇಂದಿಗೂ ಮಾದರಿಯಾಗಿ ನಿಂತ ದಿಟ್ಟ ಮಹಿಳೆಯರು.

048725

ಅಧ್ಯಾಯ ೫

ಶಿವಶರಣೆಯರ ವಚನಗಳಲ್ಲಿ ಸ್ವಾತಂತ್ರ್ಯ ಪ್ರಜ್ಞೆ

ಶರಣ ಸಂಸ್ಕೃತಿ ಅಂತರಂಗದ ಸೌಂದರ್ಯಕ್ಕೆ ಹೆಚ್ಚು ಒತ್ತುಕೊಟ್ಟಿತು. 'ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ' ಎಂದು ಬಾಳಿ ಬದುಕಿದವರು ಶರಣರು. ಸಮಾಜದಲ್ಲಿ ಸ್ತ್ರೀ-ಪುರುಷ, ಪ್ರಭು-ಪ್ರಜೆ, ಮೇಲು-ಕೀಳು ಮುಂತಾದ ತರತಮಗಳ ನಡುವೆ ಸಮಾನತೆ ತರಲು ಯತ್ನಿಸಿದವರು. ಎಲ್ಲರೂ ಸಮಾನರಾಗಿ, ಸ್ವತಂತ್ರರಾಗಿ ಮತ್ತು ಸಹೋದರತೆಯಿಂದ ಬಾಳಿ ಬದುಕಲು ಅನುವು ಮಾಡಿಕೊಟ್ಟವರು. ಜಾತಿವ್ಯವಸ್ಥೆ ಮೂಢನಂಬಿಕೆ ಸ್ತ್ರೀಶೋಷಣೆ ಲಿಂಗ ಅಸಮಾನತೆಗಳನ್ನು ವಿರೋಧಿಸಿ ಹೊಸ ಸಮಾಜ ನಿರ್ಮಾಣಕ್ಕೆ ಶ್ರಮಿಸಿದರು.

ಹೊಸದೊಂದು ಸಮಾಜದ ಕನಸನ್ನು ಕಂಡ ಬಸವಣ್ಣ ಈ ಮೇಲು-ಕೀಳುಗಳ ಭೇದಭಾವವಿಲ್ಲದ ಆಂದೋಳನದ ನಾಯಕತ್ವವನ್ನು ಅನೇಕ ಸುಧಾರಣೆಗಳೊಂದಿಗೆ ಎತ್ತಿಕೊಂಡನು. ಬಸವಣ್ಣನ ಮಹಾಮನೆಯಲ್ಲಿ, ಅನುಭವ ಮಂಟಪದಲ್ಲಿ ವಿದ್ವಾಂಸರಿಂದ ಹಿಡಿದು ಕೆಳವರ್ಗಕ್ಕೆ ಸೇರಿದ ಚಮ್ಮಾರನವರೆಗೆ ಸಮಾಜದ ಎಲ್ಲ ಸ್ತರದ ಎಲ್ಲ ಕಾಯಕದ ಜೀವಿಗಳೂ ಸೇರತೊಡಗಿದರು. ಅಲ್ಲಮಪ್ರಭು, ಸಿದ್ಧರಾಮ, ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಆಯ್ದಕ್ಕಿ ಮಾರಯ್ಯ, ಮಧುವಯ್ಯ, ತುರುಗಾಹಿ ರಾಮಣ್ಣ, ಗಜೇಶ ಮಸಣಯ್ಯ, ನಗೆಯ ಮಾರಿತಂದೆ, ಮರೆಮಿಂಡಯ್ಯ, ಕೋಲಶಾಂತಯ್ಯ, ಮಾದಾರ ಧೂಳಯ್ಯ ಮುಂತಾದ ಹಿರಿಯ-ಕಿರಿಯ ವಚನಕಾರರೆಲ್ಲಾ ಬಸವಣ್ಣನ ನಾಯಕತ್ವದಲ್ಲಿ ಒಂದೆಡೆ ಸೇರಿದರು. ಅದೇ ರೀತಿ ಮಹಾದೇವಿಯಕ್ಕ, ಮುಕ್ತಾಯಕ್ಕ, ಸತ್ಯಕ್ಕ, ನೀಲಮ್ಮ, ಮೋಳಿಗೆಯ ಮಹಾದೇವಿ, ಆಯ್ದಕ್ಕಿ ಲಕ್ಕಮ್ಮ, ಸೂಳೆಸಂಕವ್ವ, ಗೊಗ್ಗವ್ವೆ, ಕದಿರರೆಮ್ಮವ್ವೆ, ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ! ಕಾಳವ್ವೆ, ಕೊಟ್ಟಣದ ಸೋಮವ್ವೆ, ಅಮುಗೆರಾಯಮ್ಮ ಮುಂತಾದ ವಚನಕಾರ್ತಿಯರು ಬಸವಣ್ಣನ ನಾಯಕತ್ವದಲ್ಲಿ ಸೇರಿದರು ಈ ವಚನಕಾರ್ತಿಯರು ವ್ಯಕ್ತಿಸ್ವಾತಂತ್ರ್ಯ, ವಿಚಾರಸ್ವಾತಂತ್ರ್ಯ ಅಭಿವ್ಯಕ್ತಿ ಸ್ವಾತಂತ್ರ್ಯದ ಆಶಯವನ್ನು ನಿರ್ಭೀಡೆ-ಯಿಂದ ಪ್ರಕಟಪಡಿಸಿದರು.[೧] ಕೆಳವರ್ಗದ ಸಮೂಹದಿಂದ ಬಂದ ವಚನಕಾರರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಸಿಕ್ಕ ಕಾಲ ಇದು.

ಮಹಿಳೆಯರನ್ನು ಅಸ್ಪೃಶ್ಯಳನ್ನಾಗಿ, ಅಬಲೆಯನ್ನಾಗಿ ಕಾಣುತ್ತಿದ್ದ ಕಾಲದಲ್ಲಿ ಈ ವಚನ ಚಳವಳಿ ಸಂಪೂರ್ಣ ಸ್ವಾತಂತ್ರ್ಯ ನೀಡಿತು. ಒಂದರ್ಥದಲ್ಲಿ ಇದು

---

೧. ವಚನಸಾಹಿತ್ಯ ಮತ್ತು ಸ್ತ್ರೀತ್ವದ ಕಲ್ಪನೆ, ಡಾ. ಎಚ್.ಎಲ್.ಪುಷ್ಪ, ಪುಟ. ೩೩

ಬಿಡುಗಡೆಯ ಕಾಲ ಎನ್ನಬಹುದು. ತಮ್ಮ-ತಮ್ಮ ವೃತ್ತಿಗಳನ್ನು ಉಳಿಸಿಕೊಂಡು ಎಲ್ಲರೊಂದಿಗೂ ಬೆರೆಯುವ ತಮ್ಮ ಕೀಳರಿಮೆಯನ್ನು ಮರೆತು ಗೌರವದೊಂದಿಗೆ ಬದುಕುವ ವಾತಾವರಣವನ್ನು ಈ ಸಂದರ್ಭದಲ್ಲಿ ಗುರುತಿಸಬಹುದು. ಪುರುಷನ ಜತೆ ಸರಿಸಮಾನವಾಗಿ ವ್ಯಕ್ತಿ ಸ್ವಾತಂತ್ರ್ಯ ಪಡೆದು ಧಾರ್ಮಿಕ ವೈಚಾರಿಕ ಚರ್ಚೆಗಳಲ್ಲಿ ಸಮನಾಗಿ ಭಾಗವಹಿಸುವ ಅವಕಾಶ ಸ್ತ್ರೀಗೂ ಇತ್ತು. ತಮ್ಮ ವೈಯಕ್ತಿಕ ಬದುಕನ್ನು, ದಾಂಪತ್ಯವನ್ನು ಕಾಯಕವನ್ನು ಗೌರವಯುತವಾಗಿ ಕಾಪಾಡಿಕೊಂಡು ಲೌಕಿಕ ಮತ್ತು ಪಾರಮಾರ್ಥಿಕ ಕ್ಷೇತ್ರಗಳೆರಡರಲ್ಲೂ ಶರಣೆಯರೂ ಕೂಡು ಅಸಾಮಾನ್ಯ ಸಾಧನೆಗೈದರು. ಇದುವರೆವಿಗೆ ಅಗೋಚರವಾಗಿದ್ದ ಹೆಣ್ಣಿನ ಸ್ವಾಭಿಮಾನ ಪುಟಿದೆದ್ದಿತು. ಹೆಂಗಸು ಕೇವಲ ತಾಯಿ, ಅರ್ಧಾಂಗಿ, ಸೇವಕಿಯಲ್ಲ ಅವಳಿಗೂ ಪುರುಷನಂತೆ ಸ್ವಂತಿಕೆ, ಸ್ವಾತಂತ್ರ್ಯ, ಸಮಾನತೆ ಬೇಕು, ಅವಳೂ ವೈಚಾರಿಕವಾಗಿ, ಸಾಮಾಜಿಕವಾಗಿ, ಆಧ್ಯಾತ್ಮಿಕವಾಗಿ ಚಿಂತಿಸಬಲ್ಲಳು. ಎಲ್ಲ ರಂಗಗಳಲ್ಲಿಯೂ ಸಾಧಿಸಬಲ್ಲಳು ಎಂದು ಹೆಮ್ಮೆಯಿಂದ ಹೇಳಿದ್ದನ್ನು ಶರಣೆಯರ ವಚನಗಳಲ್ಲಿ ಕಾಣಬಹುದಾಗಿದೆ.

"ಕನ್ನಡ ಸಾಹಿತ್ಯವು ಮಾರ್ಗದಿಂದ ದೇಸಿಗೆ ಸಂಕ್ರಮಣಹೊಂದಿದ ಯುಗವೆಂದು ಇದನ್ನು ಕರೆಯಬಹುದು. ಮಾರ್ಗಕಾವ್ಯದ ಪ್ರಭಾವಗಳು ಈ ಯುಗದ ಮೇಲೆ ಮೂಡಿದ್ದವು. ದೇಸಿಗೆ ವಿಶಿಷ್ಟವಾದ ಸ್ವಾತಂತ್ರ್ಯವು ವಿಷಯ, ಛಂದಸ್ಸು, ಭಾಷೆಗಳು ತಲೆದೋರಿದೆ. ಅಂತೆಯೇ ಸ್ವಾತಂತ್ರ್ಯವೆಂದು ಇದನ್ನು ಕೆಲವರು ಕರೆದಿರುವುದುಂಟು.[೧] ಭಾಷೆಯ ಬಳಕೆಯ ದೃಷ್ಟಿಯಿಂದಲೂ, ಅಭಿವ್ಯಕ್ತಿಯ ದೃಷ್ಟಿಯಿಂದಲೂ, ಸಾಹಿತ್ಯದ ವಸ್ತು ವಿಷಯದ ದೃಷ್ಟಿಯಿಂದಲೂ, ಈ ಯುಗವನ್ನು ಸ್ವಾತಂತ್ರ್ಯಯುಗವೆನ್ನಬಹುದು. ವ್ಯಕ್ತಿ ವೈಶಿಷ್ಟ್ಯದಿಂದ, ವಚನರಚನೆಯಿಂದ, ಅನಿಸಿದ್ದನ್ನು ಅಭಿವ್ಯಕ್ತಿಸುವ ಧೈರ್ಯದಿಂದ ಶರಣೆಯರು ಭಿನ್ನವಾಗಿ ನಿಲ್ಲುತ್ತಾರೆ.

ಅಯ್ಯಾ ನೀನು ಕೇಳಿದಡೆ ಕೇಳು, ಕೇಳದಡೆಮಾನು
ಆನು ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯ
ಅಯ್ಯಾ ನೀನು ನೋಡಿದಡೆ ನೋಡು, ನೋಡದಡೆ ಮಾನು
ಆನು ನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯಾ
ಅಯ್ಯ ನೀನು ಮೆಚ್ಚಿದಡೆ ಮೆಚ್ಚು ಮೆಚ್ಚದಡೆ ಮಾಣು
ಆನು ನಿನ್ನ ನಚ್ಚಿದಲ್ಲದೆ ಸೈರಿಸಲಾರೆನಯ್ಯಾ
ಅಯ್ಯಾ, ನೀನು ಒಲಿದಡೆ ಒಲಿ, ಒಲಿಯದಡೆ ಮಾಣು
ಆನು ನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯಾ

---

೧. ಕನ್ನಡ ಸಾಹಿತ್ಯ ಚರಿತ್ರೆ, ರಂ.ಶ್ರೀ.ಮುಗಳಿ, ಪುಟ. ೧೪೦

ಚೆನ್ನಮಲ್ಲಿಕಾರ್ಜುನಯ್ಯಾ
ಆನು ನಿಮ್ಮನರ್ಚಿಸಿ ಪೂಜಿಸಿ ಹರುಷದೊಳೋಲಾಡುವೆನಯ್ಯಾ[೧]

ಅಕ್ಕ ಹೇಳುವಂತೆ ಯಾರನ್ನೋ ಮೆಚ್ಚಿಸಬೇಕೆಂದು ಶರಣೆಯರು ಬರೆಯಲಿಲ್ಲ. ಹೇಳಬೇಕೆನಿಸಿದ್ದನ್ನು ಹೇಳಿದರು. ಅವರದು ತೋರಿಕೆಯ ನುಡಿಗಳಾಗಿರದೆ ಎಲ್ಲೆಲ್ಲೂ ಸಲ್ಲಬೇಕಾದ ನುಡಿಮುತ್ತುಗಳಾಗಿದ್ದವು. ತಮ್ಮ ಮನಸಿನ ನೋವು–ನಲಿವು, ಸುಖ–ದುಃಖ, ಅನುಭವ–ಅನುಭಾವಗಳಲ್ಲಿ ಹೇಳಿ 'ಹರುಷ'ಗೊಳ್ಳುತ್ತಿದ್ದರು. ನಾನು ಹಾಡಿದಲ್ಲದೆ ಸೈರಿಸಲಾರೆನು ಎಂಬ ಸ್ಥಿತಿಯಲ್ಲಿ ಹಾಡೇ ತೀರುತ್ತಿದ್ದರು.

ಶಿವಶರಣೆಯರು ಹೆಣ್ಣಿನ ಅಂತರಂಗದ ಭಾವನೆಗಳನ್ನು ಹೊರಜಗತ್ತಿಗೆ ತೋರಿದರು. ಸ್ವವಿಮರ್ಶೆ ಮೂಲಕ ತಮ್ಮನ್ನು ತಾವೇ ತಿದ್ದಿಕೊಳ್ಳಲು ಯತ್ನಿಸುತ್ತಲೇ ತಮ್ಮ ಗಂಡಂದಿರು ಸೇರಿದಂತೆ ಇಡೀ ಸಮಾಜವನ್ನೇ ತಿದ್ದುವ, ಎಚ್ಚರಿಸುವ ಕೆಲಸ ಮಾಡಿದರು. ಶರಣೆಯರ ಆತ್ಮಭಿಮಾನದ ನುಡಿಗಳಲ್ಲಿಯೇ ಅಭಿವ್ಯಕ್ತಿ ಸ್ವಾತಂತ್ರ್ಯದ ಹಂಬಲವನ್ನು ಕಾಣಬಹುದು.

೧. ಸಾಮಾಜಿಕ ಕಾಳಜಿಯ ಸ್ವಾತಂತ್ರ್ಯ ಪ್ರಜ್ಞೆ

ಶಿವಶರಣೆಯರ ಹೋರಾಟ ಕೇವಲ ದಾಂಪತ್ಯ ಜೀವನಕ್ಕಾಗಲೀ, ವೈಯಕ್ತಿಕ ಏಳಿಗೆಗಾಗಲೀ ಸೀಮಿತವಾಗದೇ ಸಮಾಜದ ಉದ್ಧಾರಕ್ಕಾಗಿಯೂ ಸಹ ಸ್ಪಂದಿಸದೆ, ಸಮಾಜದ ಹಲವು ಸಮಸ್ಯೆಗಳ ನಿವಾರಣೆಗೆ ಶ್ರಮಿಸಿದೆ. ಶರಣೆಯರ ಚಿಂತನೆಗಳು ಕೇವಲ ಹೆಣ್ತನದ ಪರಿಧಿಗೆ ಸೀಮಿತವಾಗದೇ ಎಷ್ಟೋ ಸಂದರ್ಭಗಳಲ್ಲಿ ಪುರುಷನನ್ನು ತಿದ್ದಿ ಸರಿದಾರಿಗೆ ತರುವ, ಪುರುಷನಿಗಿಂತಲೂ ಎತ್ತರಕ್ಕೇರುವ ಶಕ್ತಿ ತೋರಿದ್ದಾರೆ. ಅವರ ಆತ್ಮಸ್ಥೈರ್ಯ, ದೃಢತೆ, ಶುದ್ಧ ಮನಸ್ಸುಗಳು ತಪ್ಪುಗಳನ್ನು ನೇರವಾಗಿ ಎತ್ತಿತೋರಿ ಖಂಡಿಸಿದವು. ಯಾರ ಅಧೀನತೆಯ ಭಯವಿಲ್ಲದೆ ತಮ್ಮ ಅನುಭವಗಳನ್ನು ಅಭಿವ್ಯಕ್ತಿಸಿದರು. ಯಾವ ನಿರ್ಬಂಧವಿಲ್ಲದೆ ತಾವು ಕಂಡದ್ದನ್ನು ಕಂಡಹಾಗೆಯೇ ಹೇಳಿದರು. ಇವರು ವಂದಿಮಾಗಧರ ಕೆಲಸ ಮಾಡಿದವರಲ್ಲ ಯಾರನ್ನೋ ಹೊಗಳುವ ಕೆಲಸ ಇವರದಾಗಿರಲಿಲ್ಲ. ಸಾಮಾಜಿಕ ಹೊಣೆಗಾರಿಕೆಯಿಂದ ವಚನರಚನೆ ಮಾಡಿದರು. ಲಿಂಗ ತಾರತಮ್ಯ ಕುಟುಂಬ, ಲೈಂಗಿಕತೆ ಇತ್ಯಾದಿ ವಿಷಯಗಳಲ್ಲಿ ತಮ್ಮದೇ ಆದ ರೀತಿಯಲ್ಲಿ ವಚನ ರಚಿಸಿದ್ದಾರೆ.

ಚಂದನವ ಕಡಿದು ಕೊರೆದು ತೇದಡೆ
ನೊಂದನೆಂದು ಕಂಪ ಬಿಟ್ಟಿತ್ತೇ?

---

೧. ಶಿವಶರಣೆಯ ವಚನ ಸಂಪುಟ, ವ. ೩೬, ಪು. ೯

ತಂದು ಸುವರ್ಣವ ಕಡಿದೊರೆದಡೆ
ಬೆಂದು ಕಳಂಕ ಹಿಡಿಯಿತ್ತೆ?
ಸಂದುಸಂದ ಕಡಿದ ಕಬ್ಬನು ತಂದು ಗುಣದಲ್ಲಿಕ್ಕಿ ಅರೆದಡೆ
ಬೆಂದು ಪಾಕಗೊಂಡು ಸಕ್ಕರೆಯಾಗಿ ನೊಂದನೆಂದು ಸಿಹಿಯ ಬಿಟ್ಟಿತ್ತೆ?
ನಾ ಹಿಂದೆ ಮಾಡಿದ ಹೀನಂಗಳಲ್ಲದ ತಂದು ಮುಂದಿಳುಹಲು
ನಿಮಗೇ ಹಾನಿ
ಎನ್ನ ತಂದೆ ಚೆನ್ನಮಲ್ಲಿಕಾರ್ಜುನಯ್ಯಾ
ನೀ ಕೊಂದಡೆಯೂ ಶರಣೆಂಬುದ ಮಾಣೆ[೧]

ಶಿವಶರಣೆಯರ ಗುಣಸ್ವಭಾವವೇ ಹಾಗೆ, ಏನೇ ಬಂದರೂ ತಮ್ಮ ಗುಣ ಬಿಡರು. ಎಷ್ಟೇ ತೇಯ್ದರು ಶ್ರೀಗಂಧ ತನ್ನ ಸುವಾಸನೆಯನ್ನು, ಎಷ್ಟೇ ಬೆಂದರು ಚಿನ್ನ ಗುಣವನ್ನು, ಗುಣದಲ್ಲಿಕ್ಕಿ ಅರೆದರೂ ಕಬ್ಬು ಸಿಹಿಯನ್ನು ಬಿಡದ ಹಾಗೆಯೇ ಶರಣೆಯರು ಜೀವನದಲ್ಲಿ ಏನೇ ನೋವುಗಳು ಬಂದರು ತಮ್ಮ ನಿಷ್ಠೆಯನ್ನು, ಭಕ್ತಿಯನ್ನು, ತಮ್ಮ ಕಾಯಕವನ್ನು ಬಿಡರು. ಸ್ವಾಭಿಮಾನವನ್ನು ಬಿಡದೆ ನಿರ್ಭಯವಾಗಿ ಹೇಳುವ ಶರಣೆಯರ ಗುಣಕ್ಕೆ ಈ ಮೇಲಿನ ವಚನದ ಸಾಲುಗಳು ಸೂಕ್ತವಾಗಿ ಹೊಂದುತ್ತವೆ ಎನ್ನಬಹುದು.

ಶರಣೆಯರು ತಮ್ಮ ಗುರಿಯನ್ನು ತಲುಪಬೇಕೆಂಬ ಛಲಹೊಂದಿದ್ದರು. ಹೀಗಾಗಿ ಚೇತನಾಚೇತನರೂಪಗಳಲ್ಲಿ ಬರುವ ಕಷ್ಟಗಳನ್ನು ಸ್ವೀಕರಿಸುತ್ತವೆ. ಇದಕ್ಕೆ ಅಕ್ಕನ ಈ ವಚನವೇ ಸಾಕ್ಷಿ.

ಕಿಡಿ ಕಿಡಿ ಕೆದರಿದೆಡೆ ಎನಗೆ ಹಸಿವು ತೃಷೆಯಡಗಿತ್ತೆಂಬೆನು
ಮುಗಿಲು ಹರಿದು ಬಿದ್ದಡೆ ಎನಗೆ ಮಜ್ಜನಕ್ಕರೆದರೆಂಬೆನು
ಗಿರಿಮೇಲೆ ಬಿದ್ದಡೆ ಎನಗೆ ಪುಷ್ಪವೆಂಬೆನು
ಚೆನ್ನಮಲ್ಲಿಕಾರ್ಜುನಯ್ಯ
ಶಿರ ಹರಿದು ಬಿದ್ದಡೆ ಪ್ರಾಣ ನಿಮಗರ್ಪಿತವೆಂಬೆನು[೨]

ಚೆನ್ನಮಲ್ಲಿಕಾರ್ಜುನನನ್ನೇ ತನ್ನ ಆತ್ಮಸಂಗಾತಿ ಎಂದವಳು ಅಕ್ಕ. ಈ ಲೋಕರೂಢಿಯ ಪ್ರವಾಹದ ವಿರುದ್ಧ ಈಸಲು ಹೊರಟವಳು. ಈಕೆ ಸಾಧಿಸಿದ ಧೈರ್ಯ, ದೃಢಸಂಕಲ್ಪ, ಮನೋಬಲ ಇಲ್ಲಿ ವ್ಯಕ್ತವಾಗಿದೆ. ತಮ್ಮ ಗುರಿ ತಲುಪಲೇಬೇಕೆಂಬ ಆಂತರಿಕ ಛಲ ಇಲ್ಲಿ ವ್ಯಕ್ತವಾಗಿದೆ. ಇಡೀ ಬೆಟ್ಟವೇ ಬಿದ್ದರೂ

---

೧. ಶಿವಶರಣೆಯ ವಚನ ಸಂಪುಟ-೫, ವ. ೩೬, ಪು. ೫೨
೨. ಅದೇ, ವ. ೩೬, ಪು. ೪೪

ಅದನ್ನು ಹೂವಿನಂತೆ ಭಾವಿಸಿ ಮುಂದೆ ಸಾಗುವ ಆ ಆತ್ಮಸ್ಥೈರ್ಯ ಇಂತಹ ಕಂಪ್ಯೂಟರ್‌ಯುಗದ ಹೆಣ್ಣಿನಲ್ಲೂ ಅಪರೂಪ ಎಂದರೆ ಅತಿಶಯೋಕ್ತಿಯಾಗಲಾರದು.

"ಹೆದರದಿರು ಮನವೆ, ಹೆದರದಿರು ತನುವೆ
ನಿಜವನರಿದು ನಿಶ್ಚಿಂತವಾಗಿರು..... [೧]

ಅಕ್ಕನ ಈ ಮಾತುಗಳು ಧೈರ್ಯ ತುಂಬುವಂತಹದು. ಹೆಣ್ಣೊಬ್ಬಳು ಮತ್ತೊಂದು ಹೆಣ್ಣಿಗೆ ಸ್ಫೂರ್ತಿಯಾಗಿ ನಿಲ್ಲುವಂತವು. ಮನ ಮತ್ತು ತನು ಎರಡು ಹೆದರಿರಬೇಕು. ನಿಜವನ್ನು ತಿಳಿದು ನಿಶ್ಚಿಂತತೆಯಿಂದ ಇರಬೇಕಿದೆ. ಚಿಂತೆಯಿಂದ ಪ್ರಯೋಜನವಿಲ್ಲ. ಅದು ನಿಜವನರಿಯುವ ಚಿಂತನೆಯಾಗಬೇಕಿದೆ. ಆ ಮೂಲಕ ಚಿಂತೆಗೆ ಪರಿಹಾರ ಕಂಡಿಹಿಡಿಯಬೇಕಿದೆ. ಏನೇ ಬಂದರು ಹೆದರದಿರುವ ಮನ ಸಾಧಿಸುತ್ತದೆ ಎಂಬ ಆಶಯದಲ್ಲಿ ಈ ವಚನ ವ್ಯಕ್ತಪಡಿಸುತ್ತದೆ.

ಅನ್ಯಶಬ್ದಕ್ಕೆ ಜಿಹ್ವಾ ಬಂಧನ, ದುರ್ಗಂಧಕ್ಕೆ ನಾಶಿಕಬಂಧನ
ನಿಂದೆಗೆ ಕರ್ಣಬಂಧನ, ದೃಕ್ಕಿಂಗೆ ಕಾಮ್ಯಬಂಧನ
ಚಿತ್ತಕ್ಕೆ ಆಶಾಬಂಧನ, ಅಂಗಕ್ಕೆ ಅಹಂಕಾರ ಬಂಧನ
ಇಂತೀ ಷಡ್ಭಾವಬಂಧಂಗಳ ಹರಿದಲ್ಲದೆ
ಅರುವತ್ತುನಾಲ್ಕು ಶೀಲಕ್ಕೆ ಸಂಬಂಧಿಯಲ್ಲ
ಹೀಂಗಲ್ಲದೆ ಕಾಂಬವರ ಕಂಡು,
ಅಲ್ಲಿ ಬಂದ ತಂದು, ಇಲ್ಲಿ ಬಂದ ಕೊಟ್ಟಿಹೆನೆಂದು
ಕಳ್ಳನ ತಾಯಂತೆ ಅಲ್ಲಿ ಇಲ್ಲಿ ಹಾರೈಸುತ್ತ
ಇತೀ ಸಜ್ಜನಗಳ್ಳರ ಕಂಡು ಬಲ್ಲವರೊಪ್ಪುವರೆ ಕಳ್ಳರ ವ್ರತವ?
ಆಚಾರವೆ ಪ್ರಾಣವಾದ ರಾಮೇಶ್ವರ ಲಿಂಗವು
ಅವರುವನೆಲ್ಲಿಯು ಬಲ್ಲನಾಗಿ[೨]

ಅಕ್ಕಮ್ಮ ತನ್ನ ವಚನದಲ್ಲಿ ಹೇಳಿರುವಂತೆ ಬೇರೆ ಶಬ್ದಕ್ಕೆ ನಾಲಿಗೆ ಬಂಧನ–ವಾಗಬೇಕು. 'ನಾಲಿಗೆ ಆಳಿದವನಾಡೆಲ್ಲಾ ಆಳುವನು' ಎಂಬ ಜನಪದ ಗಾದೆ ಮಾತಿನಂತೆ ಮಾತು ಬಹುಮುಖ್ಯ. ಅನಾವಶ್ಯಕ ವಿಷಯಗಳಿಗೆ ಬಾಯಿ ಹಾಕಬಾರದು ಎಂದು ಸಾಗುವ ಈ ವಚನ ನಾಲಿಗೆ, ನಾಸಿಕ, ಕರ್ಣ, ಕಣ್ಣು, ಅಂಗ, ಚಿತ್ತಗಳ ನಿಯಂತ್ರಣ ಬಹುಮುಖ್ಯ ಎಂದು ಹೇಳಿದ್ದಾಳೆ. ಚಂಚಲ ಸ್ವಭಾವದಿಂದ ಏನು ಸಾಧಿಸಲಾಗದು. ಅಲ್ಲಿ ಒಂದು ತಂದು ಇಲ್ಲಿ ಒಂದ ಕೊಟ್ಟಿಹನೆಂದು ಕಳ್ಳನ ತಾಯಂತೆ

೧. ಶಿವಶರಣೆಯ ವಚನ ಸಂಪುಟ–೫, ಡಾ. ವೀರಣ್ಣ ರಾಜೂರ, ವ. ೩೫೦, ಪು. ೧೦೯
೨. ಅದೇ, ವ. ೩೬೨, ಪು. ೧೧೪

ಆಗದೆ ಬದುಕಬೇಕು. ಸಜ್ಜನಗಳ್ಳರನ್ನು ತಿಳಿದವರು ಒಪ್ಪರು. ಅದು ಕಳ್ಳರ ವ್ರತವಾಗುತ್ತದೆ ಎಂದಿದ್ದಾಳೆ. ಇಲ್ಲಿ ಅಕ್ಕಮ್ಮ ಮನುಷ್ಯ ಶೀಲವಂತನಾಗಿ ಬದುಕಬೇಕೆಂದು, ಅನ್ಯಶಬ್ಧ, ದುರ್ಗಂಧ, ನಿಂದೆ, ಕಾಮ, ಆಶೆ, ಅಹಂಕಾರಗಳಿಂದ ದೂರವಾಗಿ ಬದುಕಬೇಕೆಂದು ಇಲ್ಲದಿರೆ ಅದು ಕಳ್ಳರ ವ್ರತವೆಂದು ಹೇಳುವ ಮೂಲಕ ಸಾಮಾಜಿಕ ಸ್ವಾಸ್ತ್ಯಕ್ಕೆ ಬೇಕಾದ ಮುಖ್ಯ ಅಂಶಗಳನ್ನು ಹೇಳಿದ್ದಾಳೆ.

ಶರಣರು ಕಾಯಕವೇ ಕೈಲಾಸವೆಂದು ಬದುಕಿದವರು ತನ್ನ ವೃತ್ತಿ ಯಾವುದೇ ಇರಲಿ ಅದನ್ನು ನ್ಯಾಯಯುತವಾಗಿ ಮಾಡಿ ಗೌರವಯುತವಾಗಿ ಬದುಕಬೇಕೆಂಬ ತತ್ತ್ವದಡಿ ದುಡಿದವರು. ಆಧುನಿಕ ಸಮಾಜದ ಪರಿಸ್ಥಿತಿಯಲ್ಲಿ ಅಸಮಾನತೆ, ಭ್ರಷ್ಟಾಚಾರ, ಜಾತಿವ್ಯವಸ್ಥೆ, ಬಡವ–ಶ್ರೀಮಂತರ ಸಾಮಾಜಿಕ ಸ್ಥಾನಮಾನಗಳಲ್ಲಿ ಹಲವು ವ್ಯತ್ಯಾಸಗಳಿವೆ. ಒಂದು ಕಡೆ ಒಬ್ಬ ವ್ಯಕ್ತಿ ಹೆಚ್ಚು ತಿಂದು ಜೀರ್ಣಿಸಿಕೊಳ್ಳಲಾರದ ಸ್ತಿತಿ. ಇನ್ನೊಂದೆಡೆ ಒಪ್ಪೊತ್ತಿಗೆ ಗತಿಯಿಲ್ಲದೆ ಹಸಿವಿನಿಂದ ಸಾಯುವ ಸ್ಥಿತಿ. ಸಮಾಜದಲ್ಲಿ ಒಂದು ಕಡೆ ಶ್ರೀಮಂತರು ಶ್ರೀಮಂತರಾಗುತ್ತಾ ಸಾಗುತ್ತಿದ್ದರೆ, ಬಡವರು ಬಡವರಾಗಿಯೇ ಸಾಯುತ್ತಿದ್ದಾರೆ. ದ್ರವ್ಯದ ಶೇಖರಣೆಯಿಂದ ಸಾಮಾಜಿಕ ಅಸಮತೋಲನ ಹೆಚ್ಚುತ್ತಿದೆ ಎಂಬ ಗ್ರಹಿಕೆ ೧೨ನೆಯ ಶತಮಾನದ ಶರಣೆಯರ ವಚನಗಳಲ್ಲಿಯೇ ಕಂಡುಬರುತ್ತದೆ.

> ಆಸೆಯೆಂಬುದು ಅರಸಿಂಗಲ್ಲದೆ, ಶಿವಭಕ್ತರಿಗುಂಟೆ ಅಯ್ಯಾ?
> ರೋಷವೆಂಬುದು ಯಮದೂತರಿಗಲ್ಲದೆ, ಅಜಾತರಿಗುಂಟೇ ಅಯ್ಯಾ?
> ಈಸಕ್ಕಿಯ ಆಸೆ ನಿಮಗೇಕೆ? ಈಶ್ವರನೊಪ್ಪ
> ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ[೧]

ರಾಜ್ಯ ವಿಸ್ತರಣೆ ಇತ್ಯಾದಿ ಆಸೆಯಿರುವ ರಾಜನಿಗೆ ಆಸೆಯಿರಬೇಕೆ ವಿನಃ ಶಿವಭಕ್ತರಿಗೆ ಅಲ್ಲ. ಅಂತೆಯೇ ಕೋಪವು ಯಮದೂತರಿಗೆ ಹೊರತು ಶರಣರಿಗೆ ಸಲ್ಲದು. ಇಷ್ಟೊಂದು ಅಕ್ಕಿಯ ಆಸೆ ನಿಮಗಿರಿಬಾರದು. ಇದನ್ನು ಈಶ್ವರ ಒಪ್ಪನು. ಸತ್ಯ ಶುದ್ಧವಲ್ಲದ ಕಾಯಕದಿಂದ ಬಂದದ್ದು ಅಮರೇಶ್ವರ ಲಿಂಗಕ್ಕೆ ದೂರವಾಗುತ್ತದೆ ಎಂಬ ಆಯ್ದಕ್ಕಿ ಅಕ್ಕಮ್ಮನ ಸಾಲುಗಳು ತನ್ನ ಗಂಡನಾದ ಮಾರಯ್ಯನಿಗೆ ಅತಿಯಾಸೆ ಬೇಡ ಎಂಬ ನೀತಿಪಾಠ ಹೇಳುತ್ತಿವೆ. ಈ ವಚನದಲ್ಲಿ ಆಯ್ದಕ್ಕಿ ಲಕ್ಕಮ್ಮ ತನ್ನದೇ ಆದ ಸ್ವತಂತ್ರ ಆಲೋಚನೆ ಹೊಂದಿದ್ದಾಳೆ. ಒಂದು ದಿನ ಎಂದಿಗಿಂತ ಹೆಚ್ಚು ಅಕ್ಕಿಯನ್ನು ಮಾರಯ್ಯ ತಂದಾಗ ಮತ್ತು ಲಕ್ಕಮ್ಮ ಸಂತೋಷಪಡುವ ಬದಲು ಕೋಪಗೊಳ್ಳುತ್ತಾಳೆ.

---

೧. ಶಿವಶರಣೆಯರ ವಚನ ಸಂಪುಟ–೫, ಸಂ. ಡಾ. ವೀರಣ್ಣ ರಾಜೂರ, ವ. ೩೬೨, ಪು. ೧೧೪

ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ
ಇದು ನಿಮ್ಮ ಮನವೊ, ಬಸವಣ್ಣನ ಅನುಮಾನದ ಚಿತ್ತವೊ?

ಈ ಮಾತು ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗಕ್ಕೆ ಸಲ್ಲದ ಬೋನ ಅಲ್ಲಿಯೇ ಸುರಿದು ಬನ್ನಿ ಮಾರಯ್ಯ[೧]

ಈ ರೀತಿ ಗಂಡನಿಗೆ ಹೇಳಿಕಳುಹಿಸುತ್ತಾಳೆ. ಗಂಡ ಕಾಯಕ ಮರತು ಅನುಭಾವ ಗೋಷ್ಠಿಯಲ್ಲಿ ಮೈಮರೆತಾಗ 'ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ' ಎಂದು ಎಚ್ಚರಿಸಿ ಸಮಯಪ್ರಜ್ಞೆಯನ್ನು ಮಿಡಿದುದು. ಹೆಚ್ಚಿಗೆ ಅಕ್ಕಿಯನ್ನು ಆಯ್ದು ತಂದಾಗ 'ಒಮ್ಮನವ ಮೀರಿ ಇಮ್ಮನವದಲ್ಲಿ ತಂದಿರಿ ಅಲ್ಲಿಯೇ ಸುರಿದು ಬನ್ನಿ ಎಂದು ಮರಳಿ ಕಳಿಸಿದುದು, ಮಾಡುವ ಭಕ್ತಿಯಲ್ಲಿ ಅಹಂಕಾರ ತೋರಿದಾಗ "ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು" ಎಂದು ವಿವೇಕ ತೋರಿದುದು, ಭಕ್ತಿಗೆ ಪ್ರತಿಫಲವನ್ನು ಅಪೇಕ್ಷಿಸಿದಾಗ "ಮಾಡಿ ನೀಡಿ ಹೋದೆಹೆನೆಂದಾಗ ಕೈಲಾಸವೇನು ಕೈಕೂಲಿಯೇ?' ಎಂದು ನಿರಾಪೇಕ್ಷ ನಿಷ್ಕಾಮ ಭಕ್ತಿ ಅನುಸರಿಸಲು ತಿಳಿಸಿದುದು, "ನಿನ್ನ ವಿರಕ್ತಿ ನಷ್ಟವಾಗದ ಮುನ್ನ ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗವನರಿಯಿರಯ್ಯಾ" ಎಂದು ಅರಿವಿನ ಮಾರ್ಗ ಅನುಸರಿಸಲು ಬೋಧಿಸಿದುದು – ಇವೆಲ್ಲ ಲಕ್ಕಮ್ಮ ಏರಿನಿಂತ ಆಧ್ಯಾತ್ಮಿಕ ನಿಲುವನ್ನು ನಿದರ್ಶಿಸುತ್ತವೆ. ಇಲ್ಲಿ ಲಕ್ಕಮ್ಮ ಶರಣರು ಕೊಟ್ಟ ಸ್ತ್ರೀ ಸ್ವಾತಂತ್ರ್ಯ ವೃಕ್ಷದ ಸತ್ಫಲವಾಗಿ ಕಾಣುತ್ತಾಳೆ.[೨] ಮನಸ್ಸು ಶುದ್ಧವಾಗಿಲ್ಲದವರಿಗೆ ಬಡತನವೇ ಹೊರತು ಚಿತ್ತ ಶುದ್ಧದಲ್ಲಿ ಕಾಯಕ ಮಾಡುವ ಸದ್ಭಕ್ತರಿಗೆ ಎತ್ತ ನೋಡಿದರತ್ತ ಲಕ್ಷ್ಮಿ ತಾನಾಗಿರುವಳು. ಇವರಿಗೆ ದ್ರವ್ಯದ ಬಡತನಬಾರದು ಎಂದು ಹೇಳುತ್ತಾಳೆ. ಹಣದಾಸೆಯ ಹಿಂದೆ ಬೀಳುವ ಜನರಿಗೆ ಆಯ್ದಕ್ಕಿ ಲಕ್ಕಮ್ಮ ಮೊದಲು ಮನಶುದ್ಧಿಯಿಂದ ಕಾಯಕಮಾಡಿ ನಂತರ ಹಣ ಸಂಪತ್ತು ನಿಮಗೆ ಸಿಕ್ಕೇ ಸಿಗುತ್ತದೆ ಎಂಬ ಸಂದೇಶವನ್ನು ನೀಡುತ್ತಿದ್ದಾಳೆ.

ಸಾಮಾಜಿಕವಾಗಿ ಗಮನಿಸಿದಾಗ ವಚನ ಚಳವಳಿಯ ಕಾಲಘಟ್ಟದಲ್ಲಿ ಹೆಣ್ಣಿನ ಸ್ವಾತಂತ್ರ್ಯದ ವಿಷಯವಾಗಿ ಎಲ್ಲೂ ಆಕೆಯ ಬಗೆಗೆ ಅಸ್ಪೃಶ್ಯ ಭಾವವಿರಲಿಲ್ಲ. ಬಹುತೇಕ ಮಂದಿ ಕೆಳಜಾತಿಗೆ ಸೇರಿದವರಾಗಿದ್ದರು ಎಂಬುದರಲ್ಲಿ ಅವರ ಸಮಾನತೆಯ ಅವಕಾಶಗಳ ಬಗೆಗೆ ತಿಳಿಯುತ್ತದೆ. ಅಕ್ಕಮಹಾದೇವಿಗೆ ಸಾಧ್ಯವಾದಂತೆ ತನಗೆ ಸರಿಕಂಡ ಬದುಕನ್ನು ಆರಿಸಿಕೊಳ್ಳುವ ಅಥವಾ ತನಗೆ ಸರಿಕಾಣದ್ದನ್ನು ತಿರಸ್ಕರಿಸುವ ಸ್ವಾತಂತ್ರ್ಯವನ್ನು ಉಳಿದವರಲ್ಲಿ ಅಷ್ಟಾಗಿ ಕಾಣಬರುವುದಿಲ್ಲ ಎನ್ನಬಹುದು. ಆದರೆ

---

೧. ಶಿವಶರಣೆಯ ವಚನ ಸಂಪುಟ-೫, ಸಂ. ಡಾ. ವೀರಣ್ಣರಾಜೂರ, ವ. ೬೩೦, ಪು. ೨೦೦
೨. ಅದೇ, ಪ್ರಸ್ತಾವನೆ, ಪು. ೨೨

ಎಲ್ಲರಲ್ಲೂ ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ಗಮನಿಸಬಹುದು. ಬಹುಶಃ ವಚನ ಚಳವಳಿಯ ಸಂದರ್ಭ ಆಧ್ಯಾತ್ಮಿಕ ಸ್ವಾತಂತ್ರ್ಯಕ್ಕೆ ನೀಡಿದ ಮಹತ್ವವನ್ನು ಆರ್ಥಿಕ ಸ್ವಾತಂತ್ರ್ಯದ ಅಂಶಗಳ ಕಡೆಗೆ ಆದ್ಯತೆ ನೀಡಲಿಲ್ಲ ಎನ್ನಬಹುದು. ಸ್ತ್ರೀ ಎಂಬ ಕಾರಣಕ್ಕೆ ಸಮಾಜದಲ್ಲಿ ಹಲವು ಸಾಮಾಜಿಕ ಸಾಮೂಹಿಕ ಸಂದರ್ಭಗಳಲ್ಲಿ ಹೆಣ್ಣನ್ನು ಬೇರ್ಪಡಿಸುವ ಅಥವಾ ದೂರ ಹಾಕುವ ಕ್ರಿಯೆಗಳು ನಡೆಯದೇ ಆಕೆಯೂ ಸಾಮೂಹಿಕ ಚಳವಳಿಯಲ್ಲಿ ಮುಂಚೂಣಿಯಲ್ಲೇ ನಿಂತಳು.

ಪ್ರತಿವ್ಯಕ್ತಿಯೂ ತಾನು ಸ್ವತಂತ್ರವಾಗಬೇಕು ಎಂಬ ಅಪೇಕ್ಷೆಯಿಂದಲೇ ಹೋರಾಟ ಆರಂಭಿಸುತ್ತಾನೆ. ಎಲ್ಲಿ ಸ್ವಾತಂತ್ರಕ್ಕೆ ಹೆಚ್ಚು ಅಡ್ಡಿಯಿರುತ್ತದೋ ಅಲ್ಲೆಲ್ಲಾ ಹೋರಾಟ ಹೆಚ್ಚು ಹೆಚ್ಚಾಗಿಯೇ ನಡೆಯುತ್ತದೆ. ಜೀವ ಸ್ವಾತಂತ್ರ್ಯ ಎಂಬ ಮಾತು ಬಂದಾಗ ಹೆಣ್ಣು ಜೀವದ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾಗಿತ್ತು. ಆಕೆ ಪೂಜೆ ಮಾಡಲು ಯೋಗ್ಯಳಲ್ಲ. ಆಕೆ ಸೇವೆ ಮಾಡಲು ಮಾತ್ರ ಅರ್ಹಳು. ಅವಳಿಗೆ ಮುಕ್ತಿಯಿಲ್ಲ, ಅವಳು ಪುರುಷಾವಲಂಬಿ ಎಂಬ ಧೋರಣೆಗೆ ವಚನಕಾರ್ತಿಯರು ಸೆಡ್ಡು ಹೊಡೆದು ನಿಂತರು. ಹೆಣ್ಣು ವಚನರಚನೆಯಲ್ಲಿ ತೊಡಗಿದ್ದ ಒಂದು ದೊಡ್ಡ ಪ್ರತಿಭಟನೆ ಅಕ್ಕಮಹಾದೇವಿ ಸಮಾಜದ ಸಂಕೋಲೆಗಳನ್ನು ದಿಕ್ಕರಿಸಿ ಪ್ರತಿಭಟಿಸಿದಳು. ತನ್ನನ್ನ ತಾನೇ ನಗ್ನಗೊಳಿಸಿಕೊಂಡದ್ದು ಪುರುಷಲೋಕದ ವಿರುದ್ಧದ ಪ್ರತಿಭಟನೆಯೆ ಎನ್ನಬಹುದು.

ಕೈಸಿರಿಯ ದಂಡವ ಕೊಳಬಹುದಲ್ಲದೆ
ಮೈಸಿರಿಯ ದಂಡವ ಕೊಳಲುಂಟೆ?
ಉಟ್ಟಂತಹ ಉಡಿಗೆ ತೊಡಿಗೆಯನೆಲ್ಲ ಸೆಳೆದುಕೊಳಬಹುದಲ್ಲದೆ
ಮುಚ್ಚಿರ್ದ ಮುಸುಕಿರ್ದ ನಿರ್ವಾಣದ ಸೆಳೆದುಕೊಳಬಹುದೆ?
ಚೆನ್ನಮಲ್ಲಿಕಾರ್ಜುನದೇವರ ಬೆಳಗನುಟ್ಟು ಲಜ್ಜೆಗೆಟ್ಟವಳಿಗೆ
ಉಡುಗೆ ತೊಡುಗೆಯ ಹಂಗೇಕೋ ಮರುಳೆ? [೧]

ಅಕ್ಕ ವಿವಸ್ತ್ರಳಾದುದೂ ಒಂದು ಪ್ರತಿಭಟನಾತ್ಮಕ ನಿರ್ಧಾರ 'ಅಕ್ಕ ಬತ್ತಲೆ-ಯಾಗುವ ಕ್ರಿಯೆಯಲ್ಲಿ ಒಂದು ಪ್ರತಿಭಟನೆಯ ಅಸ್ತ್ರವಾಗಿ ಕಂಡಳು ಎನ್ನುವುದು ಮುಖ್ಯ. ನಮ್ಮಲ್ಲಿ ಹೆಣ್ಣನ್ನು ಬೆತ್ತಲೆಗೊಳಿಸಿ ಅವಮಾನಿಸುವುದು, ಶಿಕ್ಷಿಸುವುದು ಪುರುಷಲೋಕದ ಒಂದು ಅಹಂಕಾರದ ಕ್ರಮವಾಗಿದೆ. ಆದರೆ ಹೆಣ್ಣು ತಾನೇ ವಿವಸ್ತ್ರಳಾಗಿ ಪುರುಷನಿಗೆ ಎದುರೇಟು ಹಾಕಿದರೆ ಅದೆಂತಹ ಉಗ್ರ ಪ್ರತಿಭಟನೆಯಾಗಬಲ್ಲುದು ಎಂಬುದನ್ನು ಇತ್ತೀಚಿನ ಮಣಿಪುರದ ಮಹಿಳೆಯರ ಬೆತ್ತಲೆ

---

೧. ಶಿವಶರಣೆಯ ವಚನ ಸಂಪುಟ, ಡಾ. ವೀರಣ್ಣ ರಾಜೂರ, ವ. ೩೬೨, ಪು. ೧೧೪

ಪ್ರಕರಣದಲ್ಲಿ ಕಂಡಿದ್ದೇವೆ. ಅಕ್ಕ ತನ್ನನ್ನು ಬೆತ್ತಲೆಗೊಳಿಸಿಕೊಂಡಿದ್ದರ ಹಿಂದೆಯೂ ಇಂಥದೇ ವೈಯಕ್ತಿಕ ಒತ್ತಡಗಳು ಕೆಲಸಮಾಡಿವೆ. ಅಂದಿನ ಸಾಮಾಜಿಕ ಸಂಪ್ರದಾಯದ ವಿರುದ್ಧ ಪುರುಷಸತ್ತೆಯನ್ನು ಪ್ರತಿಭಟಿಸಿ, ತನ್ನದೇ ಜೀವನ ಮಾರ್ಗವನ್ನು ಆಯ್ಕೆಮಾಡಿಕೊಂಡು ಹಾದಿಯಲ್ಲಿ ಬಂದದ್ದೆಲ್ಲವನ್ನೂ ಪಕ್ಕಕ್ಕೆ ತಳ್ಳಿ ಬೆತ್ತಲೆಯಾಗಿ ಹೊರಟ ಮಹಾದೇವಿ ನಿಜವಾದ ವ್ಯಕ್ತಿ ಸ್ವಾತಂತ್ರ್ಯದ ಪ್ರತಿಪಾದಕಿ.[೧] ಅಕ್ಕ ತನ್ನ ವಚನಗಳಲ್ಲಿ ಸಮಾಜದ ವ್ಯವಸ್ಥೆಗೆ ಉತ್ತರಕೊಡುತ್ತಾ ಸಾಗಿದ್ದಾಳೆ.

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದೊಡೆಂತಯ್ಯ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆ ತೆರೆಗಳಿಗಂಜಿದೊಡೆಂತಯ್ಯಾ?
ಸಂತೆಯೊಳಿಗೊಂದು ಮನೆಯ ಮಾಡಿ,
ಶಬ್ದಕ್ಕೆ ನಾಚಿದಡೆಂತಯ್ಯಾ?
ಚನ್ನಮಲ್ಲಿಕಾರ್ಜುನದೇವ ಕೇಳಯ್ಯ

ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು[೨]

ಅಕ್ಕಳ ಈ ವಚನ ಸಮಾಧಾನವನ್ನು ಹೇಳುತ್ತಲೇ ವ್ಯವಸ್ಥೆಯ ಚಿತ್ರಣ ಕಟ್ಟಿಕೊಡುತ್ತದೆ. 'ವ್ಯಕ್ತಿ ಸ್ವಾತಂತ್ರ್ಯದ ಮಾತಂತಿರಲಿ', ಹೆಣ್ಣಿಗೆ ಸ್ವಾತಂತ್ರ್ಯವೆಂಬುದೇ ಇಲ್ಲವೆಂದು ಸಾರಿದ ವೈದಿಕ ಧರ್ಮಶಾಸ್ತ್ರಗಳನ್ನೆಲ್ಲಾ ಮೌನವಾಗಿ ಕಸಗುಡಿಸಿದಂತೆ ಗುಡಿಸಿ ಸಾರಿಸುತ್ತದೆ ಅಕ್ಕಳ ಈ ವಚನ. ಮಹಾದೇವಿ ಮಾತ್ರವಲ್ಲ ಹಲವಾರು ಶಿವಶರಣೆಯರು ಕೂಡ ಅಂತೆಯೇ ಆಗಿ ಹೋದರೆಂಬುದು ವಚನ ಸಾಹಿತ್ಯ ಚರಿತ್ರೆಯೊಳಗಿನ ಸಾಧಾರ ಸತ್ಯ. ಆದಾಗ್ಯೂ ಶರಣ ಸಮಾಜದಲ್ಲಿ ಅಕ್ಕ ಏರಿದ ಸ್ಥಾನ ಇಲ್ಲಿ ವ್ಯಕ್ತಿ ಸ್ವಾತಂತ್ರ್ಯ ಮುಖ್ಯವಾದರೂ ವಿಶೇಷವಾಗಿ ಹೆಣ್ಣಿನ ಸ್ವಾತಂತ್ರ್ಯದ ವಿಷಯದಲ್ಲಿ ಸಮಸ್ತ ಮಾನವ ಕುಲದ ವ್ಯಕ್ತಿ ಸ್ವಾತಂತ್ರ್ಯವೆಂಬುದರ ಉತ್ಕೃಷ್ಟದ ಸ್ಥಿತಿ ಎನ್ನಬಹುದು. ಈ ವಚನದಲ್ಲಿ ಬಳಕೆಯಾಗಿರುವ 'ಬೆಟ್ಟ' 'ಮೃಗ', 'ಸಮುದ್ರ' ಮತ್ತು 'ಸಂತೆ' ಈ ಪದಗಳು ಸಮಾಜದ ವ್ಯಗ್ರತೆ, ಶೋಷಣೆ ಮತ್ತು ಮಾನವ ಸ್ವಾತಂತ್ರ್ಯದ ದಮನ ಪ್ರವೃತ್ತಿಗೆ 'ಸಂಕೇತವಾದರೆ, 'ಮನೆ' 'ಸ್ಥೈರ್ಯ'ದ ದ್ಯೋತಕವಾದರೆ 'ಸಮಾಧಾನಿ'

---

೧. ಅಕ್ಕಮಹಾದೇವಿಯ ವಚನಗಳು, (ಸಂ) ರಹಮತ್ ತರೀಕೆರೆ ಲೇ. ಅಕ್ಕ : ಕದಳಿಯ ಜ್ಯೋತಿ – ಎನ್.ಗಾಯತ್ರಿ, ಪು. ೯೫.

೨. ಶಿವಶರಣೆಯ ವಚನ ಸಂಪುಟ-೫, ಡಾ. ವೀರಣ್ಣ ರಾಜೂರ, ವ. ೨೫೩, ಪು. ೭೮

ಎಂಬುದು ಬದುಕಿಗೆ ಎದುರಾದ ಸವಾಲುಗಳನ್ನು ಒಪ್ಪಿಕೊಂಡು ಮುನ್ನಡೆಯಲೇ-ಬೇಕಾದ ಅನಿವಾರ್ಯತೆಯನ್ನು ಸೂಚಿಸುತ್ತದೆ. ಇವೆಲ್ಲಕ್ಕಿಂತಲೂ ವಿಶೇಷವಾಗಿ 'ಸಮಾಧಾನಿಯಾಗಿರಬೇಕು' ಎಂಬ ಸಾಲಂತೂ ಇಷ್ಟೆಲ್ಲಾ ಹೋರಾಟ ಒಂದು ನಿಶ್ಚಿಂತ ಹಾಗೂ ನೋವಿಲ್ಲದ ಸಮಾಜ ಸ್ಥಾಪನೆಗಾಗಿ ಎಂಬ ಧೋರಣೆಯನ್ನು ತುಂಬಾ ಅರ್ಥಗರ್ಭಿತವಾಗಿ ವಚನದೊಳಿಂದ ಹೊರಡಿಸುವುದನ್ನು ಮನಗಾಣಬಹುದು. ಶರಣರು ಪ್ರತಿಪಾದಿಸಿದ ವ್ಯಕ್ತಿಸ್ವಾತಂತ್ರ್ಯದ ವಿಷಯದಲ್ಲಿ ಕಕ್ಕಯ್ಯ ಚೆನ್ನಯ್ಯಾದಿಗಳು ಒಂದು ಬಗೆಯ ಮಾದರಿಗಳೆನಿಸಿದರೆ, ಅಕ್ಕಮಹಾದೇವಿಯೇ ಮೊದಲಾದ ಹೆಣ್ಣುಗಳು ಇನ್ನೊಂದು ಬಗೆಯ ಮಾದರಿಗಳೆನಿಸುತ್ತಾರೆ"[೧] ಮೃಗಗಳಿಗೆ, ನೆರೆತೊರೆಗಳಿಗೆ ಶಬ್ದಕ್ಕೆ ಅಂಜಬಾರದು ಎಂಬ ಧೈರ್ಯ ತುಂಬುತ್ತಲೇ ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದೇ ಬರುತ್ತವೆ. ಆಗ ಹಿಗ್ಗದೆ-ಕುಗ್ಗದೆ ಬದುಕಬೇಕು ಸಮಾಧಾನ-ದಿಂದ ಬದುಕಬೇಕೆಂಬುದೇ ಅಕ್ಕ ತಿಳಿಸುವ ವಿಶೇಷಾಂಶ.

ಆಸೆಯುಳ್ಳನ್ನಕ್ಕ ರೋಷ ಬಿಡದು
ತಾಮವುಳ್ಳನ್ನಕ್ಕ ಕಳವಳ ಬಿಡದು
ಕಾಯಗುಣವುಳ್ಳನ್ನಕ್ಕ ಜೀವನ ಬುದ್ಧಿ ಬಿಡದು
ಭಾವವುಳ್ಳನ್ನಕ್ಕ ಬಯಕೆ ಸವೆಯದು
ನಡೆಯುಳ್ಳನ್ನಕ್ಕ ನುಡಿಗೆಡದು
ಇವೆಲ್ಲವು ಮುಂದಾಗಿದ್ದು ಹಿಂದನರಿದೆನೆಂಬ
ಸಂದೇಹಿಗಳಿರಾ, ನೀವು ಕೇಳಿರೋ,
ನಮ್ಮ ಶರಣರು ಹಿಂದ ಹೇಗೆ ಅರಿದರೆಂದಡೆ
ಆಸೆಯನಳಿದರು, ರೋಷವ ಹಿಂಗಿದರು
ಕಾಮನ ಸುಟ್ಟರು, ತಳವಳವ ಹಿಂಗಿದರು
ಕಾಯಗುಣವಳಿದರು, ಜೀವನ ಬುದ್ಧಿಯ ಹಿಂಗಿದರು
ಭಾವವ ಬಯಲು ಮಾಡಿದರು, ಬಯಕೆಯ ಸವೆದರು
ಹಿಂದನರಿದು ಮುಂದೆ ಲಿಂಗವೆ ಗೂಡಾದ ಶರಣರ
ಈ ಸಂದೇಹಗಳೆತ್ತ ಬಲ್ಲರು, ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣ?[೨]

---

೧. ದಲಿತವರ್ಗದ ಶರಣರು ಮತ್ತು ಶರಣೆಯರು – ಒಂದು ಅಧ್ಯಯನ, ಡಾ. ಮ.ನ.ಜವರಯ್ಯ, ಪು. ೧೪೦.

೨. ಶಿವಶರಣೆಯ ವಚನ ಸಂಪುಟ-೫, ಡಾ. ವೀರಣ್ಣ ರಾಜೂರ, ಪು. ೮೭

ಹಡಪದಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ ಕೀಳುಕುಲದಲ್ಲಿ ಹುಟ್ಟಿ ಬಂದ ಶರಣೆ. ಮನದ ಚಂಚಲತೆಯಿಂದ ಘನವಾದ ಸಾಧನೆ ಸಾಧ್ಯವಿಲ್ಲ ಎನ್ನುತ್ತಾಳೆ. ಆಸೆ ಇದ್ದಾಗ ರೋಷ, ಕಾಮದ ಜತೆಗೆ ಕಳವಳ, ದೇಹದ ಮೋಹ, ಬಯಕೆ, ಇವೆಲ್ಲವನ್ನು ಮೀರಿ ಸಾಧಿಸಬೇಕು ಎಂದು ಹೇಳುತ್ತಾಳೆ. 'ಸಂದೇಹಿಗಳಿರಾ ನೀವು ಕೇಳಿರೋ' ಎಂದು ಕೂಗಿ ಕರೆದು ಶರಣರ ಸಾಧನೆ ಬಗೆಗೆ ತಿಳಿಸುತ್ತಾಳೆ. ಆಸೆಯನಳಿದು ರೋಷ ಬಿಟ್ಟವರು, ಕಾಮನಸುಟ್ಟ ಕಳವಳ ಹಿಂಗಿದವರು ಶರಣರು. ಶರಣರದು ಬಯಲುಭಾವ ಎಂದಿದ್ದಾಳೆ. ಇಲ್ಲಿ ವ್ಯಕ್ತಿಯ ಸಾಮಾಜಿಕ ಸಾಧನೆಗೆ ಈ ಪಂಚೇಂದ್ರಿಯಗಳನ್ನು ಮೆಟ್ಟಿ ನಿಂತು ಗುರಿ ತಲುಪಬೇಕು ಎಂದಿದ್ದಾಳೆ.

ಸಾಮಾಜಿಕವಾಗಿ ಹಲವು ಅನುಭವಗಳನ್ನು ಶರಣೆಯರು ಹೊಂದಿದ್ದರು. ಬುದ್ಧಿಜೀವಿ ಮುಕ್ತಾಯಕ್ಕನ ವಚನಗಳಲ್ಲಿ ಸಾಮಾಜಿಕ, ನೈತಿಕ ವಿಷಯಗಳಿಗಿಂತ ಬೌದ್ಧಿಕ ತಾತ್ತ್ವಿಕ ವಿಷಯಗಳ ಪ್ರತಿಪಾದನೆಯೇ ಹೆಚ್ಚಾಗಿರುವುದು ಕಂಡುಬರುತ್ತದೆ. ಸುಮ್ಮನೆ ದಿನಗಳೆಯದೆ ವ್ಯರ್ಥವಾಗಿ ಸಮಯ ಕಳೆಯದೆ, "ಮಾಡಬನ್ನಿ ದಿನಶಿವರಾತ್ರಿಯ ಕೇಳಬನ್ನಿ ಶಿವಾನುಭವವ" ಎಂದು ಶಿವಭಕ್ತರಿಗೆ ನಿತ್ಯ ಶಿವರಾತ್ರಿ ಆಚರಿಸಲು ಸೂಚಿಸುತ್ತಾಳೆ.

'ನುಡಿಯಲು ಬಾರದು ಕೆಟ್ಟ ನುಡಿಗಳ
ನಡೆಯಲು ಬಾರದು ಕೆಟ್ಟ ನಡೆಗಳ
ನುಡಿದಡೇನು ನುಡಿಯದಿರ್ದಡೇನು?
ಹಿಡಿದವ್ರತ ಬಿಡದಿರಲು, ಅದೆ ಮಹಾಜ್ಞಾನದಾಚರಣೆ
ಎಂಬೆನು ಅಜಗಣ್ಣ ತಂದೆ[೧]

ಕೆಟ್ಟನುಡಿಗಳನ್ನು ನುಡಿಯದೆ ಕೆಟ್ಟ ನಡೆ ನಡೆಯದೆ ಬಾಳಬೇಕು. ಹಿಡಿದ ವ್ರತ ಬಿಡದಿರುವುದೇ ಮಹಾಜ್ಞಾನದಾಚರಣೆ ಎಂದು ಸಾರಿದ್ದಾಳೆ. ಸಮಾಜದಲ್ಲಿ ಕೆಟ್ಟ ನಡೆ-ನುಡಿಗಳಿಂದ ಸಾಮಾಜಿಕ ಸ್ವಾಸ್ತ್ಯ ಕೆಡುತ್ತದೆ ಎಂದು ಮುಕ್ತಾಯಕ್ಕ ಈ ವಚನದಲ್ಲಿ ಹೇಳಿದ್ದಾಳೆ. ಯಾವುದೇ ಕೆಲಸವಾಗಲಿ ಸಾಧಿಸುವ ಛಲದೊಂದಿಗೆ ಮುಂದುವರಿಯ-ಬೇಕು. ನಮ್ಮ ಛಲಗಳು ಕೆಟ್ಟ ನಡೆ ನುಡಿಗಳಿಂದ ಕೂಡಿರದೇ ಮಹಾಜ್ಞಾನದ ಕಡೆಗೆ ಇರಬೇಕಿದೆ. ಜ್ಞಾನದ ಇಂಗಿತವನ್ನು ಹೀಗೆ ಹೇಳುತ್ತಾಳೆ. ನಡೆನುಡಿಯಲ್ಲಿ ಪರಿಶುದ್ಧತೆ ಇರಬೇಕು. ಅರ್ಥಹೀಣವಾದ ರೂಢಿಗಳನ್ನು ತೊಡೆದುಹಾಕಿ ಪೂರ್ಣಜ್ಞಾನ ಪಡೆಯಬೇಕೆಂದು ಸೂಚಿಸಿದ್ದಾಳೆ.

---

೧. ಶಿವಶರಣೆಯ ವಚನ ಸಂಪುಟ, ಡಾ. ವೀರಣ್ಣ ರಾಜೂರ, ವ. ೨೫೩, ಪು. ೭೮

ಆರು ಇಲ್ಲದವಳೆಂದು ಆಳಿಗೊಳಲುಬೇಡ
ಆಳಿಗೊಂಡಡೆ ಆನು ಅಂಜುವಳಲ್ಲ
ಒಲವಿನ ಒತ್ತೆ ಕಲ್ಲನು ಬೆವರಿಸಬಲ್ಲೆ ಕಾಣಿರೋ
ಅಪ್ಪದವರನಪ್ಪದಡೆ ತರಗೆಲೆಯಂತೆ
ರಸವನರಸಿದಡುಂಟೆ ಅಜಗಣ್ಣತಂದೆ?[೧]

ಈ ವಚನದಲ್ಲಿ ಮುಕ್ತಾಯಕ್ಕಳ ಛಲ ಧೈರ್ಯ ಗೋಚರಿಸುತ್ತದೆ. ಯಾರು ಇಲ್ಲದವಳೆಂದು ನನ್ನನ್ನ ತಿರಸ್ಕರಿಸಿದರೆ ಕೇಳುವವಳಲ್ಲ. ಅಂಜುವವಳಲ್ಲ ಎನ್ನುವಾಗ ಅವಳು ಶಿವನಿಗೆ ಸವಾಲು ಹಾಕುವ ಆತ್ಮವಿಶ್ವಾಸ ಎದ್ದುಕಾಣುತ್ತದೆ. ಲೋಕದ ಒಡೆಯನಿಗೆ ಅಂಜದವಳು ಲೋಕ ಜನರಿಗೆ ಭಯಪಡುವುದುಂಟೆ? ೧೨ನೆಯ ಶತಮಾನದ ಕಾಲಕ್ಕೆ ಹೆಣ್ಣೊಬ್ಬಳು ಇಂತಹ ಧೈರ್ಯ ಛಲದ ಮಾತುಗಳನ್ನಾಡುವುದರ ಮೂಲಕ ಸ್ತ್ರೀಸ್ವಾತಂತ್ರ್ಯದ ಧನಿಯಾಗಿದ್ದಾಳೆ.

ಶರಣೆಯರು ಸಮಾಜದ ಜಾತಿ ವ್ಯವಸ್ಥೆಯ ಬಗೆಗೆ ಧನಿ ಎತ್ತಿದ್ದಾರೆ. ತಲತಲಾಂತರದಿಂದ ಜಾತಿಪದ್ಧತಿಯನ್ನು ಪ್ರಶ್ನಿಸಿದ್ದಾರೆ. ಜಾತಿಯತೆಯನ್ನು ವಿರೋಧಿಸಿ ಅದರಂತೆ ಎಲ್ಲ ಒಂದೇ ಎಂಬ ಭಾವದಡಿ ಬಾಳುವೆ ಮಾಡಿದವರು ಶಿವಶರಣರು. ಕದಿರೆರಮ್ಮವ್ವೆಯ ವಚನವೊಂದು ಹೀಗಿದೆ.

ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ
ಅಡಿಯ ಹಲಗೆ ಬ್ರಹ್ಮ; ತೋರಣ ವಿಷ್ಣು
ನಿಂದ ಬೊಂಬೆ ಮಹಾರುದ್ರ
ರುದ್ರನ ಬೆಂಬಳಿಯವೆರಡು ಸೂತ್ರಕಣ್ಣು
ಅರಿವೆಂಬ ಕದಿರು, ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿ
ಸುತ್ತಿತ್ತುನೂಲು; ಕದಿರು ತುಂಬಿತ್ತು
ರಾಟೆಯ ತಿರುಹಲಾರೆ – ಎನ್ನ ಗಂಡ ಕುಟ್ಟಿಹ
ಇನ್ನೇವೆ ಕದಿರರೆಮ್ಮಿಯೊಡೆಯ ಗುವ್ವೇಶ್ವರಾ?

ಇಲ್ಲಿ ರೆಮ್ಮವ್ವ ಲೌಕಿಕ ಕಾಯಕದ ಕ್ರಿಯೆಗಳನ್ನೆಲ್ಲ ಪಾರಲೌಕಿಕ ಪರಮಾತ್ಮನ ಸಂಬಂಧವಾದ ಆಧ್ಯಾತ್ಮಿಕ ಅನುಭವಕ್ಕೆ ಹೊಂದಿಸಿ ಹೇಳಿದ್ದಾಳೆ. ಶುದ್ಧಕಾಯಕ ಜೀವಿ ರೆಮ್ಮವ್ವ ಲೌಕಿಕ ಉದಾಹರಣೆಯ ಮೂಲಕ ಅಲೌಕಿಕದ ಜ್ಞಾನವನ್ನು ಬೆಸೆದುಕೊಂಡು ಬಂದಿದ್ದಾಳೆ. ಸುಂದರವಾದ, ಈ ವಚನದಲ್ಲಿ ತನ್ನ ಕೆಲಸದ ಮೂಲ ಸಾಧನವಾದ

೧. ಶಿವಶರಣೆಯ ವಚನ ಸಂಪುಟ-೫, ಸಂ. ಡಾ. ವೀರಣ್ಣರಾಜೂರ, ವ. ೨೫೩, ಪು. ೭೮

ರಾಟೆಯ ಪ್ರತಿಯೊಂದು ಕ್ರಿಯೆಯನ್ನು ಪರಮಾತ್ಮ ಸಂಬಂಧವಾದ ಅನುಭವಕ್ಕೆ ಹೋಲಿಸಿ ಆಧ್ಯಾತ್ಮ ತತ್ತ್ವವನ್ನೇ ನಿರೂಪಿಸಿಕೊಂಡು ಹೋಗುತ್ತಾಳೆ. ಕಾಯಕದಲ್ಲಿಯೇ ಕೈಲಾಸವನ್ನು ಸಾಕ್ಷಾತ್ಕರಿಸಿಕೊಂಡ ಶರಣೆಯ ಸಾಧನೆಯ ಉನ್ನತಿಕೆಯನ್ನಿಲ್ಲಿ ಗಮನಿಸಬಹುದು. ಕಾಯಕನಿಷ್ಠೆಯೇ ಮುಖ್ಯವಾಗಿ ತನ್ನ ವೃತ್ತಿಸಾಧನದ ಪ್ರತಿಯೊಂದರಲ್ಲೂ ದೇವರಿರುತ್ತಾನೆ. ಅದೇ ನನ್ನ ಜಾತಿ ಎಂದು ಹೇಳಿದ್ದಾಳೆ.

ತನು ಬತ್ತಲೆಯಾದಡೇನು? ಮನ ಬತ್ತಲೆಯಾಗದನ್ನಕ್ಕ?
ವ್ರತವಿದ್ದಡೇನು, ವ್ರತಹೀನರಾದ ಬಳಿಕ?
ನೆರೆದಡೆ ನರಕವಯ್ಯ ನಿಂಬೇಶ್ವರಾ[೧]

ಗುಡ್ಡವ್ವೆ ತನ್ನ ಈ ವಚನದಲ್ಲಿ ಅಂತರಂಗ-ಬಹಿರಂಗ ಶುದ್ಧಿಗಳೆರಡೂ ಮುಖ್ಯ ಎಂದಿದ್ದಾಳೆ. ಅಂತರಂಗಶುದ್ಧಿಯಾದಾಗಲೇ ಅರಿವು ಸಾಧ್ಯವಾಗುತ್ತದೆ. ಕೇವಲ ತೋರಿಕೆಯ ವ್ರತಸಲ್ಲದು, ಬಹಿರಂಗದಲ್ಲಿ ಮಾತ್ರ ವ್ರತಾಚರಣೆ ಮಾಡುವವ ವ್ರತಹೀನ,. ಅಂಥವನ ಸಹವಾಸ ನರಕವಾಸ ಎಂಬುದು ಗುಡ್ಡವ್ವೆಯ ನಿಲವು. ಪರಿಶುದ್ಧವಾದ ಮನಸ್ಸಿನಿಂದ ಮಾಡುವ ವ್ರತಾಚಾರದ ಮಹಿಮೆಯನ್ನು ಸುಲಭವಾದ ಮಾತಿನಲ್ಲಿ ಸಾಧಿಸಿದ್ದಾಳೆ. ಸೂತ್ರಬದ್ಧವಾಗಿ, ನೇರಕ್ಕೆ ಮನಕ್ಕೆ ನಾಟುವಂತೆ ಮನ 'ಬತ್ತಲೆ'ಯಾಗಬೇಕು ಎಂದು ಹೇಳುವ ಗುಡ್ಡವ್ವೆ ಚಿಂತನೆ ಅಂದಿನ ಪರಿಪಕ್ವ ಚಿಂತನೆಯ ಮಾತುಗಳಾಗಿವೆ.

ಕುರಿಕೋಳಿ ಕಿರಿಮೀನು ತಿಂಬವರಿಗೆಲ್ಲ ಕುಲಜ ಕುಲಜರೆಂದೆಂಬರು
ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳು ಜಾತಿಯೆಂಬರು
ಅವರೆಂತು ಕೀಳು ಜಾತಿಯಾದರು? ಜಾತಿಗಳು ನೀವೇಕೆ ಕೀಳಾಗಿರೋ?
ಬ್ರಾಹ್ಮಣನುಂಡುದು ಪುಲ್ಲಿಗೆ ಶೋಭಿತವಾಗಿ ನಾಯಿ ನೆಕ್ಕಿ ಹೋಯಿತು.
ಮಾದಿಗರುಂಡುದು ಪುಲ್ಲಿಗೆ ಬ್ರಾಹ್ಮಣಗೆ ಶೋಭಿತವಾಯಿತು.
ಅದೆಂತೆಂದಡೆ : ಸಿದ್ದಲಿಕೆಯಾಯಿತು, ಸಗ್ಗಳೆಯಾಯಿತು.
ಸಿದ್ದಲಿಕೆಯ ತುಪ್ಪವನು, ಸಗ್ಗಳೆಯ ನೀರನು
ಶುದ್ಧವೆಂದು ಕುಡಿವ ಬುದ್ಧಿಗೇಡಿ ವಿಪ್ರರಿಗೆ ನಾಯಕನರಕ ತಪ್ಪದಯ್ಯಾ
ಉರಿಲಿಂಗಪೆದ್ದಿಗಳರಸು ಒಲ್ಲನವ್ವಾ[೨]

ಗೋಮಾಂಸ ತಿನ್ನುವವರನ್ನು ಕೀಳುಜಾತಿ ಎಂದು ಕರೆಯುವ ಜನರಿಗೆ ಕಟುವಾದ ಮಾತುಗಳನ್ನಾಡುತ್ತಾ ಕುರಿ, ಕೋಳಿ, ಮೀನು ಮುಂತಾದ ಪ್ರಾಣಿಗಳನ್ನು

೧. ಶಿವಶರಣೆಯ ವಚನ ಸಂಪುಟ-೫, ಡಾ. ವೀರಣ್ಣ ರಾಜೂರ, ವ. ೨೫೩, ಪು. ೭೮
೨. ಅದೇ, ವ. ೨೦೬, ಪು. ೬೫೨

ತಿನ್ನುವ ವರ್ಗವೆಲ್ಲ ಕುಲಜರನ್ನಿಸಿಕೊಂಡರೆ ಪಂಚಾಮೃತವನ್ನು ಕರೆಯುವ ಶ್ರೇಷ್ಠವಾದ ಗೋವನ್ನು ತಿನ್ನುವ ಮಾದಿಗ ಏಕೆ ಕುಲಜರೆನ್ನಿಸಿಕೊಳ್ಳುವುದಿಲ್ಲ ಎಂದು ಪ್ರಶ್ನಿಸುತ್ತಾಳೆ. 'ಸಿದ್ದಲಿಕೆಯ ತುಪ್ಪವನು, ಸಗ್ಗಳೆಯ ನೀರನು ಶುದ್ಧವೆಂದು ಕುಡಿದ ಬುದ್ಧಿಗೇಡಿ ವಿಪ್ರರಿಗೆ ನಾಯಕ ನರಕ ತಪ್ಪದು' ಎಂದು ಎಚ್ಚರಿಸುತ್ತಾಳೆ. ಇಷ್ಟು ನೇರ ಪ್ರತಿಭಟನೆ ಮೆಚ್ಚುವಂತದ್ದು. ಶೂದ್ರವರ್ಗದ ಆಹಾರ ವ್ಯವಸ್ಥೆಯ ಬಗ್ಗೆ ಸ್ವಾಭಿಮಾನ ಮತ್ತು ಕೆಚ್ಚನ್ನು ಈಕೆ ತೋರಿದ್ದಾಳೆ. ಈ ರೀತಿ ಕೆಳವರ್ಗದ ವಚನಕಾರ್ತಿಯರು ಕುಲದ ಬಗ್ಗೆ ತಮ್ಮ ಪರಿಮಿತಿಯೊಳಗೆ ಆಲೋಚನೆಗೆ ತೊಡಗುತ್ತಾರೆ. ತಮ್ಮ ಬದುಕಿನ ವಿವರಗಳು ಆಹಾರ ವ್ಯವಸ್ಥೆ, ಕಸುಬು ಮುಂತಾದವುಗಳ ಜತೆಯಲ್ಲಿ ತಮ್ಮ ಕುಲದ ಬಗ್ಗೆ ಅಭಿಮಾನವನ್ನು ಪ್ರಕಟಿಸುತ್ತಾರೆ.

ನುಡಿಯ ಹಂಗಿನ್ನು ನಮಗೆ ಹಿಂಗದು
ನಡೆಯ ನೆಂತು ಪರರಿಗೆ ಹೇಳುವಿರಿ?
ಒಡಲ ಹಂಗಿನ ಸುಳುಹು ಬಿಡದು;
ಎನ್ನೊಡನೆ ಮತ್ತೀತರ ಅನುಭವವಣ್ಣಾ?
ತಾನಾದಲ್ಲದೆ ಇದಿರಿಂಗೆ ಹೇಳಬಹುದೆ?
ಅರಿವೆ ತೋರಬಲ್ಲಡೆ ತನ್ನನರುಹದೆ ಅರಿವನು
ಕಾಣಾ ಎನ್ನ ಅಜಗಣ್ಣ ತಂದೆ[೧]

ಮುಕ್ತಾಯಕ್ಕ ಹೇಳುವಂತೆ ಶಿವಶರಣರು ಶಬ್ಧನಿರೀಕ್ಷೆಗಿಂತ ಅಂತರಂಗದ ನಿರೀಕ್ಷೆಗೆ ಗಮನಕೊಡಬೇಕು. ಮಾತಿಗಿಂತ ಕ್ರಿಯೆಯಲ್ಲಿ, ಪ್ರಾಮಾಣಿಕತೆಯಲ್ಲಿ ನಂಬಿಕೆಯಿರಬೇಕು. ಈಕೆಯ ಮಾತುಗಳಲ್ಲಿ ಆ ನಂಬಿಕೆ, ಆಪ್ತತೆ ಪ್ರಾಮಾಣಿಕತೆಗಳನ್ನು ಗಮನಿಸಬಹುದು. ಅರಿವು, ಆಚಾರ ಬೌದ್ಧಿಕತೆಯ ಪ್ರಾಮುಖ್ಯತೆಯನ್ನು ಮುಕ್ತಾಯಕ್ಕ ನೇರವಾಗಿ ಹೇಳುತ್ತಾಳೆ. ತಾನು ಸರಿಬರದ ಹೊರತು ಬೇರೆಯವರಿಗೆ ಹೇಳಬಹುದೇ ಎಂದು ಪ್ರಶ್ನಿಸುತ್ತಾಳೆ.

ಸತ್ಯಸಂಗತಿಗಳ ಮೇಲೆ ಬೆಳಕು ಚೆಲ್ಲುವ ಹಲವು ವಚನಗಳ ಸೃಷ್ಟಿಕರ್ತೆ ಸತ್ಯಕ್ಕ. ಸತ್ಯಕ್ಕ ದೃಢ ನಿಲುವಿನಿಂದ ಅಭಿವ್ಯಕ್ತಿಸಿದವಳು. ಜನಪರ ಆಂದೋಳನದ ಹಲವು ವಿಚಾರಗಳನ್ನು ತನ್ನ ವಚನಗಳಲ್ಲಿ ಬಿಡಿಸುತ್ತಾ ಹೋಗುತ್ತಾಳೆ. ಸತ್ಯಶೋಧನೆಗಾಗಿಯೇ ಸತ್ಯಕ್ಕ ಚಿಂತನೆ ನಡೆಸಿದವಳು. ಆಕೆ ಹುಟ್ಟು ಜಾತೀಯತೆಯನ್ನು ಕುರಿತು ಹೇಳಿದ್ದಾಳೆ. ಅದಕ್ಕೆ ಸಂಬಂಧಿಸಿದ ವಚನವೊಂದು ಹೀಗಿದೆ.

---

೧. ಶಿವಶರಣೆಯ ವಚನ ಸಂಪುಟ-೫, ಸಂ. ಡಾ. ವೀರಣ್ಣರಾಜೂರ, ವ. ೨೫೩, ಪು. ೭೮

ಅಯ್ಯಾ ಪುಣ್ಯ–ಪಾಪ, ಇಹ–ಪರಂಗಳಿಗೆ ಹೊರಗಾದ
ಶಿಷ್ಯ–ಗುರು–ಜಂಗಮದ ವಿಚಾರವೆಂತೆಂದಡೆ
ತನ್ನ ತಾನೆ ಪಕ್ವವಾಗಿ, ವೃಕ್ಷವ ತನ್ನೊಳಗೆ ಮಾಡಿಕೊಂಡು
ಶಿವಾಜ್ಞೆಯಿಂದ ತೊಟ್ಟು ಬಿಟ್ಟ ಹಣ್ಣಿನಂತೆ
ಶಿವಭಕ್ತಮತ ಮೊದಲಾಗಿ
ಆದ ಜಾತಿಯಲ್ಲಿ ಜನಿತವಾದಡೇನು?
ಪೂರ್ವಗುಣಧರ್ಮಗಳ ಮುಟ್ಟದೆ
ಲೋಕಾಚಾರವ ಹೊದ್ದದೆ,
ಪಂಚಮಹಾಪಾತಕಂಗಳ ಬೆರಸದೆ,
ಸತ್ಯಶರಣರ ಸಂಗ, ಸತ್ಯ ನಡೆನುಡಿಯಿಂದಾಚರಿಸಿ,
ಲಿಂಗಾಚಾರ ಮೋಹಿಯಾಗಿ
ಅಡಿಗೆರಗಿ ಬಂದ ಪೂರ್ವಜ್ಞಾನಿ ಪುನರ್ಜಾತಂಗೆ,
ಪಕ್ಷಿ ಫಳರಸಕ್ಕೆರಗುವಂತೆ ಮೋಹಿಸಿ,
ಅಂಗದ ಮಲಿನವ ತೊಡೆದು ಚಿದಂಗವ ಮಾಡಿ,
ಚಿದ್ಘನಲಿಂಗವ ಸಂಬಂಧಿಸಿ
ಇಪ್ಪತ್ತೊಂದು ದೀಕ್ಷೆಯ ಕರುಣಿಸುವಾತನೆ
ತ್ರಿಣೇತ್ರವುಳ್ಳ ಗುರುವೆಂಬೆನಯ್ಯಾ
ಅಂಥಾ ಗುರುತರಜಾತನ ಭೇದಿಸಿ, ತ್ರಿವಿಧ ಜಪವ ಹೇಳಿ,
ತ್ರಿವಿಧ ಲಿಂಗಾನುಭಾವವ ಬೋಧಿಸುವಾತನೆ
ಸರ್ವಾಂಗಲೋಚನವುಳ್ಳ ಜಂಗಮವೆಂಬೆ ನೋಡಾ
ಇಂಥಾ ಸನ್ಮಾರ್ಗಿಗಳಿಗೆ ಭವಬಂಧನ ನಾಸ್ತಿ ಕಾಣಾ
ಶಂಭುಜಕ್ಕೇಶ್ವರಾ[೧]

ಈ ಸುದೀರ್ಘ ವಚನದಲ್ಲಿ ಅವರಿವರ ಮನೆಯ ಕಸಗುಡಿಸಿ ಭಿಕ್ಷೆಬೇಡಿ ಜೀವಿಸಿದ ಒಬ್ಬ ಮಹಿಳೆಯ ಕಲ್ಪನಾಲೋಕದ ವಿಸ್ತಾರವನ್ನು ಅವಳ ಕವಿಕಲ್ಪನೆ, ಅವಳ ಅಧ್ಯಾತ್ಮ, ಇವೆರಡೂ ಕೂಡ ಆಕೆಯ ವಚನಗಳಲ್ಲಿ ವಿಶಿಷ್ಟವಾಗಿ ಮೇಳವಿಸಿದೆ. ಆ ಮೂಲಕವೇ ಆಕೆ ಜನಪರ ಆಂದೋಲನದ ಪರ ಧನಿ ಎತ್ತುವುದು. ಸತ್ಯಕ್ಕನ ಈ ವಚನದಲ್ಲಿ ಜಾತಿಯನ್ನು ಕುರಿತ ವಿಡಂಬನೆ ಕಂಡುಬರುತ್ತದೆ. ಪೂರ್ವ

೧. ಶಿವಶರಣೆಯ ವಚನ ಸಂಪುಟ, ಡಾ. ವೀರಣ್ಣ ರಾಜೂರ, ವ. ೨೫೩, ಪು. ೭೮

ಗುಣಕರ್ಮಗಳ ಒಳಗೊಂಡು ಅವನ್ನ ವೈಭವೀಕರಿಸುವ ವೈದಿಕ ವರ್ಣಧರ್ಮ ಗ್ರಂಥಗಳ ಬಗೆಗೆ ತಿರಸ್ಕಾರ ಭಾವವಿದೆ. ಇಲ್ಲಿ ಇಹ-ಪರ, ನರಕ-ಸ್ವರ್ಗ, ಪಾಪ-ಪುಣ್ಯಗಳ ಪರಿಕಲ್ಪನೆಗಳ ಪ್ರಸ್ತಾಪವಿದೆ. 'ಪಾಪ, ಪುಣ್ಯ, ಇಹ, ಪರ ಮುಂತಾದವುಗಳ ಕೇವಲ ನಾಮೋಚ್ಚಾರಣೆಯ ಹಿಂದೆ ಜಾತಿ, ಕುಲ, ಮೇಲು, ಕೀಳು, ಶ್ರೇಷ್ಠ ಮತ್ತು ಕನಿಷ್ಠವೇ ಮುಂತಾದ ಘೋರ ವಿಚಾರಗಳೆಲ್ಲ ಸಾಲುಗಟ್ಟಿ ನಡೆದುಬರುತ್ತವೆ. ಅಂತಲೇ ಅತ್ಯಂತ ಸರಳವಾದ ಮಾತುಗಳಲ್ಲಿ ಅವುಗಳನ್ನು ಕೇವಲ ವಿಡಂಬಿಸಿ ಕೈಬಿಡುವಲ್ಲಿನ ಅಕ್ಕನ ಅಭಿವ್ಯಕ್ತಿ ಜಾಣ್ಮೆಯನ್ನು ತಾತ್ತ್ವಿಕ ವಿಮರ್ಶನ ಪ್ರೌಢಿಮೆಯನ್ನು ಅರಿಯಲೆತ್ನಿಸ-ಬೇಕು. ಬರಿಯ ಜ್ಞಾನಸಾಧನೆ ಶಿವಧ್ಯಾನಿಗೆ ಮಾತ್ರ ಸಾಧ್ಯವೆಂಬುದನ್ನು ಸ್ವಯಂ ತನ್ನ ವಚನ ನಿದರ್ಶನದಿಂದಲೇ ಸ್ವಾನುಭವದ ನೆಲೆಯಲ್ಲಿ ನಿಂತು ಪ್ರತಿಪಾದಿಸಿದ್ದಾಳೆ.[೧] ಜಾತಿ, ಮತ, ವರ್ಣಗಳನ್ನು ತೊರೆಯಬೇಕು. ಆಗ ಶರಣ ಭವಬಂಧನ ಮುಕ್ತಿಹೊಂದಿ ಜೀವನದಲ್ಲಿ 'ಪಕ್ವವಾಗಿ ತೊಟ್ಟು ಬಿಟ್ಟ ಹಣ್ಣಿನಂತೆ' ಎಂದು ಹೇಳುತ್ತಾಳೆ. ಸತ್ಯಕ್ಕಳ ಕವಿ ಪ್ರತಿಭೆ ಆಕೆಯ ಸಾಮಾಜಿಕ ಚಿಂತನೆಗಳನ್ನು ಈ ವಚನದಲ್ಲಿ ಗಮನಿಸಬಹುದಾಗಿದೆ.

ಚಿಕ್ಕವಯಸ್ಸಿನಿಂದಲೇ ಶಿವಭಕ್ತಿಯಲ್ಲಿ ನೆಲೆಗೊಂಡು ವೈರಾಗ್ಯ ತಾಳಿದ ಶರಣೆ ಬೊಂತಾದೇವಿ ಯಾವ ಬಂಧನಕ್ಕೂ ಒಳಗಾಗದ ಬಯಲರೂಪಿ ಶಿವನ ಸಂಕೇತಿಸುವ 'ಬಿಡಾಡಿ' ಎಂಬ ಅಂಕಿತವಿಟ್ಟು ಈಕೆ ಸ್ವತಂತ್ರ ಮನೊವೃತ್ತಿಯಿಂದ ವಚನಗಳನ್ನು ರಚಿಸಿದ್ದಾಳೆ. ಆಕೆಯ ವಚನವೊಂದು ಹೀಗಿದೆ.

'ಊರ ಒಳಗಣ ಬಯಲು, ಊರ ಹೊರಗಣ ಬಯಲೆಂದುಂಟೆ?
ಊರೊಳಗೆ ಬ್ರಾಹ್ಮಣ ಬಯಲು, ಊರ ಹೊರಗೆ ಹೊಲೆಬಯಲೆಂದುಂಟೆ?
ಎಲ್ಲಿ ನೋಡಿದಡೆ ಬಯಲೊಂದೆ
ಭಿತ್ತಿಯಲ್ಲಿ ಒಳಹೊರಗೆಂಬ ನಾಮವೈಸೆ
ಎಲ್ಲಿ ನೋಡಿದಡೆ ಕರೆದಡೆ ಓ ಎಂಬಾತನೆ ಬಿಡಾಡಿ[೨]

ಬೊಂತಾದೇವಿಯ ಸಾಮಾಜಿಕ ಕಳಕಳಿಯನ್ನು ಪ್ರತಿನಿಧಿಸುವ ವಚನ ಇದಾಗಿದೆ. ಮೇಲು-ಕೀಳು ಎಂಬ ಭಾವವಳಿದು ಸಮಾನತೆಯನ್ನು ಆಕೆ ಬಯಸುತ್ತಾಳೆ. ಸಮಾಜದ ವರ್ಣ, ಕುಲ, ಗೋತ್ರ, ಜಾತಿಗಳ ಬಗೆಗೆ ಅವಳ ತಿರಸ್ಕಾರವಿದೆ. ಸಮಾಜದ ಬಗೆಗೆ ಕಳಕಳಿಯಿದೆ, ಅನುಕಂಪವಿದೆ. ಬ್ರಾಹ್ಮಣ, ಹೊಲೆಯ ಎಂಬ ಮೇಲು-ಕೀಳು ವ್ಯವಸ್ಥೆಯನ್ನು ವಿರೋಧಿಸುತ್ತಾಳೆ. ಒಳ-ಹೊರ, ಮೇಲು-ಕೀಳು,

---

೧. ದಲಿತವರ್ಗದ ಶರಣರು ಮತ್ತು ಶರಣೆಯರು ಒಂದು ಅಧ್ಯಯನ,
ಡಾ. ಮ.ನ.ಜವರಯ್ಯ, ಪು. ೨೫೯.

೨. ಶಿವಶರಣೆಯ ವಚನ ಸಂಪುಟ, ಡಾ. ವೀರಣ್ಣ ರಾಜೂರ, ವ. ೨೫೩, ಪು. ೭೮

ಇವೆಲ್ಲ ಮಾನವ ನಿರ್ಮಿತ ಕಟ್ಟುಪಾಡುಗಳು, ಜಾತಿಸೂತಕ ಪದಗಳು. ಕೇವಲ ಹೆಸರುಗಳಾಗಿವೆ. ಈ ಜಾತಿ ವ್ಯವಸ್ಥೆಯನ್ನು ಮೀರಿ, ಸಮಾನತೆಯಿಂದ ಬಾಳುವೆ ಮಾಡಬೇಕೆಂದು ಬೊಂತಾದೇವಿ ಬಯಸುತ್ತಾಳೆ. ಸಾಮಾಜಿಕವಾಗಿ ಬ್ರಾಹ್ಮಣ - ಹೊಲೆಯ ಎಂಬ ತರತಮಗಳನ್ನು ಧಿಕ್ಕರಿಸಿ ಸ್ವತಂತ್ರ ಆಲೋಚನೆಗಳನ್ನು ಅಭಿವ್ಯಕ್ತಗೊಳಿಸಿದ್ದಾಳೆ. ಇದನ್ನು ಹೋಲುವಂತೆ ಅಕ್ಕಮ್ಮ ತನ್ನ ವಚನವೊಂದರಲ್ಲಿ ಹೀಗೆ ಪ್ರಶ್ನಿಸುತ್ತಾಳೆ.

ಬತ್ತಲೆ ಇದ್ದವರೆಲ್ಲ ಕತ್ತೆಯ ಮಕ್ಕಳು
ತಲೆ ಬೋಳಾದವರೆಲ್ಲ ಮುಂಡೆಯ ಮಕ್ಕಳು
ತಲೆ ಜಡೆಗಟ್ಟಿದವರೆಲ್ಲಾ ಹೊಲೆಯರ ಸಂತಾನ
ಆವ ಪ್ರಕಾರವಾದಡೇನು? ಅರಿವೆ ಮುಖ್ಯವಯ್ಯಾ
ಆಚಾರವೆ ಪ್ರಾಣವಾದ ರಾಮೇಶ್ವರಲಿಂಗದಲ್ಲಿ[೧]

ತೋರಿಕೆಯ ಭಕ್ತಿಯನ್ನು ವಿರೋಧಿಸುವ ಈಕೆ ಜಾತಿವ್ಯವಸ್ಥೆಯನ್ನು ಕಟುವಾಗಿ ವಿರೋಧಿಸುತ್ತಾಳೆ. ವ್ರತಭ್ರಷ್ಟರು, ಆಚಾರವಿಹೀನರು ಮತ್ತು ವೇಷಧಾರಿಗಳನ್ನು ಇವಳೆಂದಿಗೂ ಒಪ್ಪುವುದಿಲ್ಲ. ಅರಿವು, ಜ್ಞಾನ, ಮುಖ್ಯವೇ ಹೊರತು ಯಾವ ಪ್ರಕಾರ ಎಂಬುದಲ್ಲ. ಇವರು ಇಂತಹ ಜಾತಿಯ ಜನ ಎಂದು ಬೊಟ್ಟುಮಾಡಿ ತೋರುವ ನಡವಳಿಕೆಯನ್ನು ವಿರೋಧಿಸಿದವರು.

ಧಾರ್ಮಿಕ ಸ್ವಾತಂತ್ರ್ಯ ಪ್ರಜ್ಞೆ:

ವಚನ ಚಳವಳಿ ಮೂಲತಃ ಧಾರ್ಮಿಕ ಚಳವಳಿಯೇ ಸರಿ. ಅಂದಮಾತ್ರಕ್ಕೆ ಸಾಮಾಜಿಕ ಮತ್ತು ಸಾಹಿತ್ಯಿಕ ಆಯಾಮಗಳು ಗೌಣವೆಂದು ಅರ್ಥವಲ್ಲ. ಈ ಸಂದರ್ಭದಲ್ಲಿ ಸ್ತ್ರೀಯರಿಗೆ ಆಧ್ಯಾತ್ಮಿಕ ಕ್ಷೇತ್ರದಲ್ಲಿ ದೊರೆತ ಅವಕಾಶ ಗಮನಾರ್ಹ-ವಾದದ್ದು. ಹೆಣ್ಣಿಗೆ ಪರಂಪರಾನುಗತವಾಗಿ ಹೊರಿಸಲಾಗಿದ್ದ ಹೆಂಡತಿ, ತಾಯಿಮಗಳ ಪಾತ್ರಗಳನ್ನು ನಿರಾಕರಿಸಿ ಹೊಸ ಅಸ್ತಿತ್ವವನ್ನು ಕೊಟ್ಟಿದ್ದು ವಚನ ಸಾಹಿತ್ಯ ಸಂದರ್ಭ ಧರ್ಮದ ಸೋಗಿನಲ್ಲಿ ಹೊಟ್ಟೆಹೊರೆದುಕೊಳ್ಳುವ ವೇಷಧಾರಿಗಳನ್ನು ತಮ್ಮ ವಚನಗಳಲ್ಲಿ ಶರಣೆಯರು ಟೀಕಿಸಿದ್ದಾರೆ. ಶಿವಶರಣನಾದವನು ಹೇಗಿರಬೇಕು. ಗುರು-ಲಿಂಗ-ಜಂಗಮ ನಿಷ್ಠೆ ಹೇಗಿರಬೇಕು ಎಂದು ಹೇಳುತ್ತಲೇ ಕಟುಟೀಕೆಗಳ ಮೂಲಕ ಡಾಂಭಿಕ ಭಕ್ತರನ್ನು ಎಚ್ಚರಿಸುವ ಕೆಲಸಮಾಡುತ್ತವೆ. ಕೆಲವು ವಚನಕಾರ್ತಿಯರ ವಚನಗಳು ನೇರವಾಗಿ ಮತ್ತು ಸರಳವಾಗಿ ಶಿವ ಮತ್ತು ಶಿವಶರಣನೀತಿ, ನಿಯಮ ಆಚರಣೆಗಳ ಬಗ್ಗೆ ಹೇಳುತ್ತಾರೆ. ಆ ಮೂಲಕ ಅನುಭಾವ ಲೋಕವನ್ನೇ ಪರಿಚಯ

---

೧. ಶಿವಶರಣೆಯ ವಚನ ಸಂಪುಟ-೫, ಸಂ. ಡಾ. ವೀರಣ್ಣ ರಾಜೂರ, ವ. ೪೪೬, ಪು. ೪೪೩

ಮಾಡಿಕೊಡುತ್ತಾರೆ. ಕೆಲವು ವಚನಕಾರ್ತಿಯರಲ್ಲಿ ಪ್ರತಿಭಟನೆ ಕೆಚ್ಚು ಅಥವಾ ಸಮಾಜ ಕುರಿತಾದ ನಿರ್ದೇಶನಗಳು ಅಷ್ಟಾಗಿ ಕಂಡುಬರುವುದಿಲ್ಲ. ಕೆಲವರಲ್ಲಿ ಸಿಡಿದೆದ್ದು ಪ್ರತಿಭಟಿಸಿ, ಶಿವ ಮತ್ತು ಶಿವಶರಣರ ರೀತಿ, ನೀತಿ, ಆಚಾರಗಳಿಗೆ ತಪ್ಪಿದವರನ್ನು ಖಂಡಿಸುವ ಪರಿ ಇದೆ. ಸಮಾಜವನ್ನು ತಿದ್ದುವ ಕೆಲಸ ಮಾಡುತ್ತಾ ತಪ್ಪಿದವರನ್ನು ನಿಂದಿಸುತ್ತಾ ಸಾಗುತ್ತಾರೆ. ತಾವು ಸ್ತ್ರೀಯರು, ಸಮಾಜದ ಕೆಳವರ್ಗದ ಜೀವಿಗಳು ಎಂಬುದು ಮುಖ್ಯವಾಗದೆ ಹೊಸ ಕನಸುಗಳನ್ನು ಹೊತ್ತು ಆದರ್ಶಸಮಾಜವೊಂದನ್ನು ನಿರ್ಮಿಸಲು ಟೊಂಕಕಟ್ಟಿದ ಸೈನಿಕರಂತೆ ಹೋರಾಟ ಮಾಡುತ್ತಾರೆ. ಅನುಭಾವಿಕ ಕ್ಷೇತ್ರದಲ್ಲಿ ಅಪಾರ ಸಾಧನೆಗೈದು ಸಮಾಜೋಧಾರ್ಮಿಕ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮದೇ ಆದ ಸ್ವತಂತ್ರ ಚಿಂತನೆಗಳನ್ನು ಶರಣೆಯರು ತಮ್ಮ ವಚನರತ್ನಗಳ ಮೂಲಕ ಬಿತ್ತಿದ್ದಾರೆ.

'ವಚನ ಸಮಾಜದಲ್ಲಿ ಹೆಣ್ಣಿನ ಸ್ವಾತಂತ್ರ್ಯದ ವಿಷಯವನ್ನು ಇನ್ನೊಂದು ಬಗೆಯಲ್ಲೂ ವಿಶ್ಲೇಷಿಸಬಹುದು. ವಚನ ಸಮಾಜದಲ್ಲಿ ಹೆಣ್ಣಿನ ಬಗ್ಗೆ ಅಸ್ಪೃಶ್ಯ ಭಾವವಿರಲಿಲ್ಲ ಹಾಗೂ ಮದುವೆ ಎಂಬ ಶುದ್ಧಲೌಕಿಕ ವಿಷಯವನ್ನು ಕುರಿತು ವಚನಕಾರರಿಗೆ ತಿರಸ್ಕಾರವೂ ಇರಲಿಲ್ಲ ಎಂಬುದು ಸರ್ವವಿಧಿತವಾಗಿದೆ. ವಚನಚಳವಳಿಯಲ್ಲಿ ಪಾಲ್ಗೊಂಡ ೨೦೦ಕ್ಕೂ ಹೆಚ್ಚು ಶರಣರಿಗೆ ವಿವಾಹವಾಗಿತ್ತೆಂದು ತಿಳಿದುಬರುತ್ತದೆ. ಕುತೂಹಲದ ವಿಷಯವೆಂದರೆ ನಮಗೆ ಗೊತ್ತಿರುವ ಸುಮಾರು ೩೫ ಸಂಖ್ಯೆಯ ಶರಣೆಯರಲ್ಲಿ ೨೫ಕ್ಕೂ ಹೆಚ್ಚು ಮಂದಿ ಕೆಳಜಾತಿಗೆ ಸೇರಿದವರಾಗಿದ್ದರು. ಮಹಿಳೆಯರಿಗೆ ಆಧ್ಯಾತ್ಮಿಕ ಸ್ವಾತಂತ್ರ್ಯ ಸಿಕ್ಕಿದ್ದರೂ ಕೆಳಜಾತಿಯ ಶರಣೆಯರಿಗೆ ಮನುಷ್ಯ ಸಹಜ ಆಯ್ಕೆಗಳ ವಿಷಯದಲ್ಲಿ ಸ್ವಾತಂತ್ರ್ಯ ಸಿಕ್ಕಿರಲಿಲ್ಲ.

ಅವರಿಗೆ ಪುರೋಹಿತಶಾಹಿ ಮೌಲ್ಯಗಳಾದ ಜಾತಿ, ವರ್ಣಗಳನ್ನು ಒಂದು ಕಡೆ ಮತ್ತು ಇನ್ನೊಂದು ಕಡೆ ಪಿತೃಪ್ರಧಾನ ವ್ಯವಸ್ಥೆಯ ಮೌಲ್ಯಗಳಾದ ಕುಟುಂಬ, ಪತಿಭಕ್ತಿ ಇತ್ಯಾದಿಗಳನ್ನು ಎದುರಿಸುವ ಅನಿವಾರ್ಯ ಇತ್ತೆಂದು ತೋರುತ್ತದೆ. ಆದ್ದರಿಂದ ಅಕ್ಕನಿಗೆ ಸಾಧ್ಯವಾದಂತೆ ತನಗೆ ಸರಿಕಂಡ ಬದುಕನ್ನು ಆಯ್ಕೆಮಾಡುವ ಮತ್ತು ತಿರಸ್ಕರಿಸುವ ಸ್ವಾತಂತ್ರ್ಯ ಎಲ್ಲರಿಗೂ ಇರಲಿಲ್ಲ. ಇನ್ನೊಂದು ಮುಖ್ಯ ಅಂಶವೆಂದರೆ, ಹೆಣ್ಣಿಗೆ ನಿಜವಾದ ಸ್ವಾತಂತ್ರ್ಯ ಸಿಗದೇ ಹೋಗಿದ್ದಕ್ಕೆ ಮುಖ್ಯಕಾರಣ, ವಚನಚಳವಳಿ ಮಹಿಳೆಯರ ಆಧ್ಯಾತ್ಮಿಕ ಸ್ವಾತಂತ್ರ್ಯಕ್ಕೆ ನೀಡಿದ ಮಹತ್ವವನ್ನು ಆರ್ಥಿಕ ಸ್ವಾತಂತ್ರ್ಯಕ್ಕೆ ನೀಡಲಿಲ್ಲ ಎಂಬುದೇ ಆಗಿದೆ'[೧] ಥಾಮಬಿಕ ಭಕ್ತರನ್ನು ಶರಣೆಯರು ವಿರೋಧಿಸುತ್ತಾರೆ.

---

೧. ಅಕ್ಕಮಹಾದೇವಿ ವಚನಗಳು – ಸಂ. ರಹಮತ್ ತರೀಕೆರೆ, ಲೇಖನ: ಅಕ್ಕನ ವಚನಗಳ ಓದು ಮರುಪರಿಶೀಲನೆ, ಲೇ. ಎಸ್. ಸಿರಾಜ್ ಅಹಮ್ಮದ್, ಪು. ೮೨.

ದೃಢವಿಲ್ಲದ ಭಕ್ತಿಯ ನಿಷ್ಪ್ರಯೋಜಕತೆಯನ್ನು ಆಯ್ದಕ್ಕಿ ಲಕ್ಕಮ್ಮನ ಈ ವಚನ ಹೀಗೆ ತಿಳಿಸುತ್ತದೆ.

ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು
ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ
ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ
ದೃಢವಿಲ್ಲದ ಭಕ್ತಿ ಅಡಿ ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ
ಮಾರಯ್ಯ ಪ್ರಿಯ ಅಮಲೇಶ್ವರ ಲಿಮಗವ ಮುಟ್ಟದ ಭಕ್ತಿ[೧]

ಅಹಂಕಾರದಿಂದ ಮಾಡುವ ಭಕ್ತಿ ಕೇವಲ ಸಂಪತ್ತಿನ ನಷ್ಟವಾಗುತ್ತದೆ. ನಡೆಯಿಲ್ಲದ ನುಡಿ ಅರಿವಿಂಗೆ ನಷ್ಟವುಂಟು ಮಾಡುತ್ತದೆ. ಏನೂ ಕೊಡದೆ ತ್ಯಾಗಿ ಎನಿಸಿಕೊಳ್ಳುವುದು ಮುಡಿಯಿಲ್ಲದ ಶೃಂಗಾರ, ದೃಢವಿಲ್ಲದ ಭಕ್ತಿ ತಳ ಒಡೆದ ಮಡಿಕೆಗೆ ಸುಜಲ ತುಂಬಿದಂತೆ ವ್ಯರ್ಥವಾಗುತ್ತದೆ. ಇಂತಹ ಭಕ್ತಿ ಅಮಲೇಶ್ವರ ಲಿಂಗವನ್ನು ಮುಟ್ಟದು ಎಂದು ಲಕ್ಕಮ್ಮ ಹೇಳುತ್ತಾಳೆ. ಕಾಲಕಣ್ಣಿಯ ಕಾಮಮ್ಮನು ತನ್ನ ವಚನದಲ್ಲಿ ವ್ರತನಿಷ್ಠರಲ್ಲದ ಭ್ರಷ್ಟರ ಬಗೆಗೆ ಹೀಗೆ ಹೇಳುತ್ತಾಳೆ.

'ಎನ್ನ ಶರಣಂಗಳ ಲಿಂಗದಲ್ಲಿ ಕಟ್ಟುವೆ
ಗುರುಲಿಂಗಜಂಗಮದ ಕಾಲ ಕಟ್ಟುವೆ
ವ್ರತಭ್ರಷ್ಟರ ನಿಟ್ಟೊರಸುವೆ, ಸುಟ್ಟು ತುರುತುರನೆ ತೂರುವೆ
ನಿರ್ಭೀತಿ ನಿಜಲಿಂಗದಲ್ಲಿ'[೨]

ಕಾಲಕಣ್ಣಿಯ ಕಾಮಮ್ಮನದು ಒಂದೇ ವಚನ ದೊರೆತಿದೆ. ಇಲ್ಲಿ ವ್ಯಕ್ತವಾಗಿರುವ ಸಿಟ್ಟು ದಂಗುಬಡಿಸುವಂತಿದೆ. ಹೆಣ್ಣು-ಗಂಡು ಎಂಬ ಭೇದವಿಲ್ಲದೆ ತನುಮನಗಳ ಶುದ್ಧಿಯನ್ನು ಎತ್ತಿಹಿಡಿಯುವ ಪ್ರಾಮಾಣಿಕತೆ, ಡಾಂಭಿಕ ಭಕ್ತರ ಬಗ್ಗೆ ಇರುವ ರೊಚ್ಚನ್ನು ಸಾರ್ವಜನಿಕವಾಗಿ ಸಾಹಿತ್ಯದಲ್ಲಿ ತೋರಿಸಿಕೊಳ್ಳುವ ಅವಕಾಶ ದೊರೆತಿದ್ದು ಈ ವಚನಯುಗದಲ್ಲೇ. ವ್ರತಭ್ರಷ್ಟರನ್ನು ತುರುತುರುನೆ ತೂರುವೆ ಎನ್ನುವ ಕಿಚ್ಚು ಮನತಟ್ಟುವಂತಹದ್ದು.

ಕದಿರ ರಮ್ಮವ್ವೆ, ಆಯ್ದಕ್ಕಿ ಲಕ್ಕಮ್ಮ, ಕೊಟ್ಟಣದ ಸೋಮವ್ವೆ, ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ, ಬಾಚಿಕಾಯದ ಕಾಳವ್ವೆ ಮುಂತಾದ ಕೆಳವರ್ಗಕ್ಕೆ ಸೇರಿದ ವಚನಕಾರ್ತಿಯರು ಜಾನಪದ ಜೀವನದ ಅನಿವಾರ್ಯ ಅಂಗವಾದ ದುಡಿಮೆಯಲ್ಲಿ ತೊಡಗಿಸಿಕೊಂಡು ಅದಕ್ಕೆ ಸಮಸಮವಾಗಿಯೇ ಅನುಭಾವಲೋಕದಲ್ಲಿ ತಮ್ಮನ್ನು

೧. ಶಿವಶರಣೆಯ ವಚನ ಸಂಪುಟ, ಡಾ. ವೀರಣ್ಣ ರಾಜೂರ, ವ. ೬೩೪, ಪು. ೬೩೨
೨. ಅದೇ, ವ. ೬೩೨, ಪು. ೬೩೪

ತೊಡಗಿಸಿಕೊಂಡಿದ್ದಾರೆ. ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ ಹೀಗೆ ಹೇಳುತ್ತಾಳೆ.

ಕಾಯಕ ತಪ್ಪದಡೆ ಸೈರಿಸಬಾರದು
ವ್ರತ ತಪ್ಪಲೆಂತೂ ಸೈರಿಸಬಾರದು
ಕರ್ಮಹರ ಕಾಳೇಶ್ವರಾ
ಕೈತಪ್ಪಿ ಕೆತ್ತಲು ಕಾಲಿಗೆ ಮೂಲ
ಮಾತು ತಪ್ಪಿನುಡಿಯಲು ಬಾಯಿಗೆ ಮೂಲ
ವ್ರತಹೀನನ ನೆರೆಯಲು ನರಕಕ್ಕೆ ಮೂಲ
ಕರ್ಮಹರಕಾಳೇಶ್ವರಾ[೧]

ತನ್ನ ಬಾಚಿ ಕಾಯಕದಲ್ಲಿ ವಹಿಸಬೇಕಜಾದ ಜಾಗ್ರತೆಯನ್ನು ಈ ವಚನ ವ್ಯಕ್ತಪಡಿಸುತ್ತದೆ. ಕಾಯಕ ತಪ್ಪಿದರೆ ಸಹಿಸಲಾರದು. ವ್ರತತಪ್ಪಿದರೂ ಸಹಿಸಲಾರದು. ಮಾತನ್ನು ತಪ್ಪಿ ಆಡುವಂತಿಲ್ಲ. ವ್ರತಹೀನನನ್ನು ನೆರೆಯುವಂತಿಲ್ಲ ಎಂಬ ತನ್ನ ಕಾಯಕದ ವಿವರದೊಂದಿಗೆ ಭಕ್ತಿಯ ಕಲ್ಪನೆಯನ್ನು ತನ್ನದೇ ಆದ ಸ್ವಂತ ರೀತಿಯಲ್ಲಿ ಕೊಡುತ್ತಾಳೆ. ಕಾಯಕ, ನುಡಿ, ವ್ರತ ಇವುಗಳನ್ನು ಎಚ್ಚರಿಕೆಯಿಂದ ಪಾಲಿಸಬೇಕು. ಸ್ವಲ್ಪ ವ್ಯತ್ಯಾಸವಾದರೂ ತೊಂದರೆಗೆ ಗುರಿಯಾಗಬೇಕಾಗುತ್ತದೆ ಎಂದು ಹೇಳುವುದರ ಜೊತೆಗೆ ಒಂದೊಂದು ತಪ್ಪಿನಿಂದ ದೊರಕುವ ಫಲಗಳನ್ನು ಸೂಚಿಸುತ್ತಾಳೆ.

ಕೊಟ್ಟಣ ಕುಟ್ಟುವ ಕಾಯಕದಿಂದ ಗುರುಲಿಂಗಜಂಗಮ ಸೇವೆ ಮಾಡುತ್ತಾ ಬಂದ ಕೊಟ್ಟಣದ ಸೋಮಮ್ಮ ತನ್ನ ವಚನದಲ್ಲಿ ಈ ರೀತಿ ಹೇಳಿದ್ದಾಳೆ.

ಹದತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಿಲ್ಲ
ವ್ರತಹೀನನ ನೆರೆಯ ನರಕವಲ್ಲದೆ ಮುಕ್ತಿಯಿಲ್ಲ
ಅರಿಯದುದು ಹೋಗಲಿ ಅರಿದು ಬೆರೆದೆನಾದಡೆ
ಕಾದ ಕತ್ತಿಯಲ್ಲಿ ಕಿವಿಯ ಕೊಯ್ವರಯ್ಯ
ಒಲ್ಲೆ ಒಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರಾ[೨]

ವ್ರತಾಚಾರ ನಿಷ್ಠೆಯನ್ನು ಸೋಮಮ್ಮ ಈ ವಚನದಲ್ಲಿ ಹೇಳುತ್ತಿದ್ದಾಳೆ. ಮಾಡುವ ಕಾಯಕವನ್ನು ನಿಷ್ಠೆಯಿಂದ ಮಾಡಿದರೇನೆ ಫಲ ದೊರಕುವುದು. ಇಲ್ಲದಿರೆ 'ನುಚ್ಚಲ್ಲದೆ ಅಕ್ಕಿಯಲ್ಲ' ಎನ್ನುತ್ತಾ ವ್ರತಹೀನನನ್ನು ಸೇರಿದರೆ ನರಕವಲ್ಲದೆ ಮುಕ್ತಿದಕ್ಕದು

೧. ಶಿವಶರಣೆಯ ವಚನ ಸಂಪುಟ-೫, ಸಂ. ಡಾ. ವೀರಣ್ಣ ರಾಜೂರ, ವ. ೮೪೫, ಪು. ೨೬೮
೨. ಅದೇ, ವ. ೬೬೦, ಪು. ೭೦

ಎನ್ನುತ್ತಾಳೆ. ತಾನು ವ್ರತಹೀನನನ್ನು ಬೆರೆಯಲು ಒಲ್ಲೆ ಎಂದು ಸೋಮಮ್ಮ ತನ್ನ ಇಷ್ಟದೈವ ಸಾಕ್ಷಿಯಾಗಿ ಪ್ರತಿಜ್ಞೆ ಮಾಡುತ್ತಾಳೆ. ತಾನು ಅನುಸರಿಸುವ ಈ ವ್ರತಾಚಾರ ಶುದ್ಧಿಯ ಮಾರ್ಗದಲ್ಲಿ ಇತರರೂ ನಡೆಯಬೇಕೆಂಬ ಅವರ ಸ್ವತಂತ್ರ ಬಯಕೆ ಗಮನಾರ್ಹವಾದದ್ದು.

ಹೆಣ್ಣಿಗೆ ಈಗಾಗಲೇ ಇರುವ ಸಿದ್ಧ ಸಾಮಾಜಿಕ ಅರ್ಥಗಳನ್ನು ಅಕ್ಕಮಹಾದೇವಿ ನಿರಾಕರಿಸುತ್ತಾಳೆ. ಅಕ್ಕನ ಆಧ್ಯಾತ್ಮಿಕತೆ ಬಂಧನದ ಸಂಸಾರವನ್ನು ವಿರೋಧಿಸುತ್ತಾ ನಡೆವ ಸ್ವಾತಂತ್ರ್ಯ ಚಿಂತನೆಗಳಾಗಿವೆ.

ಹಸಿವಾದೊಡೆ ಊರೊಳಗೆ ಬಿಕ್ಷಾನ್ನಗಳುಂಟು
ತೃಷೆಯಾದಡೆ ಕೆರೆ ಹಳ್ಳ ಬಾವಿಗಳುಂಟು
ಅಂಗಶೀತಕ್ಕೆ ಬೀಸಾಟ ಅರಿವೆಗಳುಂಟು
ಶಯನಕ್ಕೆ ಹಾಳು ದೇಗುಲಗಳುಂಟು
ಚೆನ್ನಮಲ್ಲಿಕಾರ್ಜುನಯ್ಯಾ
ಆತ್ಮ ಸಂಗಾತಕ್ಕೆ ನೀನೆನಗುಂಟು[೧]

ಅಕ್ಕನ ಸ್ವತಂತ್ರ ಚಿಂತನೆಗಳಿಗೆ ಇಂತಹ ವಚನಗಳೇ ಸಾಕ್ಷಿ, ಕಾಯದ ಹಸಿವು, ತೃಷೆ ನಿದ್ರೆಗಳು ಸಿದ್ಧ ಸಮಾಜದ ನಿಯಮ ಮತ್ತು ನಿಯಂತ್ರಣಗಳಿಗೆ ಅನುಗುಣವಾಗಿ ಜರುಗುತ್ತಿವೆ. ಈ ಸಿದ್ಧ ಸಮಾಜ ಎಂಬ ಕಲ್ಪನೆಯ ಹಿಂದೆ ಆಕ್ರಮಣ ಶಕ್ತಿಗಳು ಅಡಗಿರುತ್ತವೆ. ಕಾಯಕವನ್ನು ನಿಷ್ಕ್ರಿಯಗೊಳಿಸಿ ತನ್ನ ಗುಲಾಮನನ್ನಾಗಿಸಿಕೊಳ್ಳುವ ಕೆಲಸವೂ ಇಂಥ ಶಕ್ತಿಗಳ ಹಿಂದೆ ಸುಪ್ತವಾಗಿರುತ್ತದೆ. ಅಸಂಖ್ಯಾತ ಕಾಯಗಳು ಈ ಬಗೆಯ ಶಕ್ತಿಯ ಉರಿಯಲ್ಲಿ ಅವಸಾನ ಹೊಂದುವುದು ಸಹಜ. ಇಂಥ ಶಕ್ತಿಗಳು ರೂಪಿಸಿದ ಜೀವನಕ್ರಮವನ್ನು ಆತ್ಮಸಂಗಾತವನ್ನಾಗಿಸಿಕೊಳ್ಳದೆ, ತನ್ನ ಅರಿವಿನ ವಿಕಾಸದ ಗುರುವಾದ ಚೆನ್ನಮಲ್ಲಿಕಾರ್ಜುನನಲ್ಲಿ ತನ್ನನ್ನು ತಾನು ಲೀನಗೊಳಿಸಿಕೊಳ್ಳುವ ಅಕ್ಕ ಅಕ್ರಮ ಸಂಗಾತವನ್ನು ಆರಿಸಿಕೊಂಡಿದ್ದಾಳೆ. ಈ ಆಯ್ಕೆಯಲ್ಲಿ ಏಕಕಾಲಕ್ಕೆ ಸಾಂಪ್ರದಾಯಿಕ ಹಾಗೂ ಮಾನವ ನಿರ್ಮಿತ ಕೃತಕ ಜೀವನಲಯವನ್ನು ನಾಶಗೊಳಿಸಿಕೊಳ್ಳುವ ಚಳವಳಿ ಅಡಗಿದೆ'[೨] ಹಸಿವಿಗೆ, ತೃಷೆಗೆ, ಅಂಗಶೀತಕ್ಕೆ, ಶಯನಕ್ಕೆ ಸಿಗುವ ಪರಿಹಾರಗಳಿಗಿಂತ ಆತ್ಮಸಂಗಾತಕ್ಕೆ ಸಿಗುವ ಚೆನ್ನಮಲ್ಲಿಕಾರ್ಜುನನ ಸ್ನೇಹ ಅಕ್ಕನಿಗೆ ಬಹುಮುಖ್ಯ. ಸಮಾಜದ ಚೌಕಟ್ಟನ್ನು ಮೀರಿ ಚಿಂತಿಸುವ ಅಕ್ಕ ಚೆನ್ನಮಲ್ಲಿಕಾರ್ಜುನನೇ ತನ್ನ ಸರ್ವಸ್ವ ಎಂದು ನಂಬಿದವಳು.

---

೧. ಶಿವಶರಣೆಯ ವಚನ ಸಂಪುಟ, ಡಾ. ವೀರಣ್ಣ ರಾಜೂರ, ವ. ೩೩೬, ಪು. ೧೦೪

೨. ಅಕ್ಕಮಹಾದೇವಿ ವಚನಗಳು, ಸಂ: ರಹಮತ್ ತರೀಕೆರೆ, ಪು. ೬೦

ಅಕ್ಕನ ವಚನಗಳಲ್ಲಿ ಆಕೆ ಅಲೌಕಿಕ ಗುರುವಿನ, ಅಲೌಕಿಕ ಗಂಡನನ್ನು ಹುಡುಕುವ ಹಂಬಲವನ್ನು ಕಾಣಬಹುದು. ಅವಳ ಚೆಲುವ ಸಾವಿಲ್ಲದವನು. ಆಕೆ ಹೀಗೆ ಹೇಳುತ್ತಾಳೆ.

'ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚಲುವಂಗೆ, ನಾನೊಲಿದೆ
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚಲುವಂಗೆ ನಾನೊಲಿದೆ, ಎಲೆ ಅವ್ವಗಳಿರಾ!
ಭವವಿಲ್ಲದ ಭಯವಿಲ್ಲದ ನಿರ್ಭಯ ಚಲುವಂಗೊಲಿದೆ ನಾನು
ಸೀಮೆಯಿಲ್ಲದ ನಿಸ್ಸೀಮಂಗೊಲಿದೆ ನಾನು
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆ
ಮಿಗೆಮಿಗೆ ಒಲಿದೆ ಎಲೆ ಅವ್ವಗಳಿರಾ'[೧]

ಅಕ್ಕನ ಚಲುವನಿಗೆ ಸಾವೂ ಇಲ್ಲ, ರೂಪವೂ ಇಲ್ಲ. ಆತ ಭವವಿಲ್ಲದ ಭಯವಿಲ್ಲದ ನಿರ್ಭಯ ಚಲುವ. ಈಕೆ ಕೂಡ ನಿರ್ಭಯದವಳು. ಸೀಮೆಯಿಲ್ಲದ ನಿಸ್ಸೀಮನನ್ನು ತನ್ನ ಗಂಡ ಎಂದು ಹೇಳುತ್ತಲೇ ಸಾಂಪ್ರದಾಯಿಕ ಹೆಣ್ಣಿಗಿರುವ ಸೀಮೆಗಳನ್ನು ದಾಟಿ ನಿಂತು ನಿರ್ದಾಕ್ಷಿಣ್ಯವಾಗಿ ಚೂರು ಅಳುಕಿಲ್ಲದೆ ಆಕೆ ಅಭಿವ್ಯಕ್ತಿಸುತ್ತಾಳೆ. ನಾಳೆ ಬರುವುದು ನಮಗಿಂದೆ ಬರಲಿ, ಇಂದು ಬರುವುದು ನಮಗೀಗಲೇ ಬರಲಿ ಆಗೀಗ ಎನ್ನದಿರೊ ಚೆನ್ನಮಲ್ಲಿಕಾರ್ಜುನ' ಎಂಬ ನೇರನುಡಿ ಅಕ್ಕನದು.

'ಇಹಕ್ಕೊಬ್ಬ ಗಂಡನೆ? ಪರಕ್ಕೊಬ್ಬ ಗಂಡನೆ?
ಲೌಕಿಕಕ್ಕೊಬ್ಬ ಗಂಡನೆ ಪಾರಮಾರ್ಥಕ್ಕೊಬ್ಬ ಗಂಡನೆ?
ಎನ್ನ ಗಂಡ ಚೆನ್ನಮಲ್ಲಿಕಾರ್ಜುನ ದೇವರಲ್ಲದೆ
ಮಿಕ್ಕಿದ ಗಂಡರೆಲ್ಲ ಮುಗಿಲಮರೆಯ ಬೊಂಬೆಯಂತೆ'[೨]

ಅಕ್ಕ 'ಶರಣಸತಿ ಲಿಂಗಪತಿ' ತತ್ವದಡಿಯಲ್ಲಿ ಬದುಕಿದ್ದವಳು. ಆಕೆಯ ಪಾಲಿಗೆ ಚೆನ್ನಮಲ್ಲಿಕಾರ್ಜುನ, ಗುರು, ತಂದೆ, ಪತಿ ಎಲ್ಲವೂ ಆಗಿದ್ದಾಳೆ. ಹಾಗಾಗಿಯೇ ಆಕೆಯ ಪಾಲಿಗೆ ಇಹ–ಪರ ಎರಡಕ್ಕೂ ಒಬ್ಬನೇ ಗಂಡ. ಆತನೇ ಅವಳ ಸರ್ವಸ್ವ. ಉಳಿದ ಪುರುಷರೆಲ್ಲರು ಆಕೆಗೆ 'ಮುಗಿಲಮರೆಯ ಬೊಂಬೆ'ಗಳು. ಅಕ್ಕ ಮತ್ತು ಚೆನ್ನಮಲ್ಲಿಕಾರ್ಜುನನ ಸಂಬಂಧ ಈ ಲೋಕದ ಎಲ್ಲಾ ಸಂಬಂಧಗಳಿಗೆ ಅತೀತವಾದದ್ದು. ಎಲ್ಲಾ ನಿಯಮಗಳನ್ನು ಮೀರಿದ್ದು

---

೧. ಶಿವಶರಣೆಯ ವಚನ ಸಂಪುಟ, ಡಾ. ವೀರಣ್ಣ ರಾಜೂರ ವ. ೬೩೨, ಪು. ೬೩೪
೨. ಅದೇ, ವ. ೩೨೩, ಪು. ೧೦೨

ಜಲದ ಮಂಟಪದ ಮೇಲೆ ಉರಿಯ ಚಪ್ಪರವನ್ನಿಕ್ಕಿ
ಆಲಿಕಲ್ಲ ಹಸೆಯ ಹಾಸಿ ಬಾಸಿಗವ ಕಟ್ಟಿ
ಕಾಲಿಲ್ಲದ ಹೆಂಡತಿಗೆ ತಲೆಯಿಲ್ಲದ ಗಂಡ ಬಂದು ಮದುವೆಯಾದನು
ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ
ಮಲ್ಲಿಕಾರ್ಜುನನೆಂಬ ಗಂಡಂಗೆನ್ನ
ಮದುವೆಯ ಮಾಡಿದರೆಲೆ ಅವ್ವಾ[೧]

ಅಕ್ಕ ತನ್ನ ಅನುಭಾವಿಕ ಮದುವೆಯ ಪ್ರಸ್ತಾಪವನ್ನು ಇಲ್ಲಿ ಮಾಡಿದ್ದಾಳೆ. 'ಈ ವಚನವನ್ನು ಸೂಕ್ಷ್ಮವಾಗಿ ಗಮನಿಸಿದರೆ ಇಲ್ಲಿ ಕಾಲಿಲ್ಲದ ಹೆಂಡತಿ ಅಂದರೆ ಭಿನ್ನ ಕ್ರಿಯೆ ಅರಿಯದವಳೆಂಬ ಅರ್ಥವಿದೆ. ತಲೆಯಿಲ್ಲದ ಗಂಡನಿಗೆ ಅಖಂಡ ಜ್ಞಾನವನ್ನು ಹೊಂದಿದ ಪರಮಾತ್ಮನೆಂಬ ಅರ್ಥವೂ ಇದೆ. ಇದನ್ನು ಸರಳ ಗಂಡು ಹೆಣ್ಣಿನ ಮದುವೆಯಂತೆ ನೋಡಲು ಸಾಧ್ಯವಿಲ್ಲ. ಮೇಲಿನ ಮಾತುಗಳನ್ನು ಗಮನಿಸಿದರೆ ವಚನ ಸಮಾಜದ ಸಾಮಾಜಿಕ ವಿವರಗಳು ಹೆಣ್ಣಿನ ಸ್ವಾತಂತ್ರ್ಯವನ್ನು ಕುರಿತಾದ ಪ್ರಶ್ನೆಗಳನ್ನು ಸಮಸ್ಯಾತ್ಮಕಗೊಳಿಸಿದರೆ, ಇವೇ ಪ್ರಶ್ನೆಗಳನ್ನು ವಚನಗಳ ಅಂತಃಸಾಕ್ಷ್ಯದ ನೆರವಿನಿಂದ ಬೇರೆ ರೀತಿಯಲ್ಲಿ ಬಿಡಿಸಲು ಸಾಧ್ಯವಿದೆ ಎನಿಸುತ್ತದೆ'[೨] ವಚನಚಳವಳಿಯ ಸಮಾಜದ ಹಿನ್ನೆಲೆಯಲ್ಲಿ ಅಕ್ಕನ 'ಎಂದೆಂದಿಗೂ ಬಿಡಿದ ಬಾಳುವೆಗೆ ಕೊಟ್ಟರೆನ್ನ' ಎಂಬ ಮಾತುಗಳು ಮಲ್ಲಿಕಾಜುನನೆಂಬ ಗಂಡನಿಗಾಗಿಯೇ ಆಕೆಯ ಬದುಕು ಮೀಸಲು ಎಂಬುದು ಅರಿವಾಗುತ್ತದೆ. ಅಕ್ಕ ಮತ್ತು ಚೆನ್ನಮಲ್ಲಿಕಾರ್ಜುನನ ನಡುವೆ ನಡೆಯುವ ಈ ಅಲೌಕಿಕ ಮದುವೆಯ ವರ್ಣನೆ ಅದ್ಭುತವಾಗಿದೆ. ಅಕ್ಕ 'ಶರಣಸತಿ ಲಿಂಗಪತಿ' ಎಂಬ ಭಾವದಡಿ ಬದುಕಿದವಳು. ಮಲ್ಲಿಕಾರ್ಜುನನೇ ಆಕೆಗೆ ಪತಿ, ತಂದೆ ಗುರು ಎಲ್ಲವೂ ಆಗಿದ್ದ ಅವಳ ಕಲ್ಪನೆಯ ವೈವಾಹಿಕ ಜೀವನ ತುಂಬಾ ಸುಂದರವಾದುದು.

'ಕದಳಿ ಎಂಬುದು ತನು, ಕದಳಿ ಎಂಬುದು ಮನ
ಕದಳಿ ಎಂಬುದು ವಿಷಯಗಳು
ಕದಳಿ ಎಂಬುದು ಭವಘೋರಾರಣ್ಯ
ಈ ಕದಳಿ ಎಂಬುದ ಗೆದ್ದು ತವೆ ಬದುಕಿ ಒಂದು
ಕದಳಿಯ ಬನದಲ್ಲಿ ಭಹರನ ಕಂಡೆನು
ಭವಗೆದ್ದು ಬಂದ ಮಗಳೆ ಎಂದು

---

೧. ಶಿವಶರಣೆಯ ವಚನ ಸಂಪುಟ-೫, ಸಂ. ಡಾ. ವೀರಣ್ಣ ರಾಜೂರ, ವ. ೧೭೯, ಪು. ೫೬
೨. ಅಕ್ಕಮಹಾದೇವಿ ವಚನಗಳು, ಸಂ. ರಹಮತ್ ತರೀಕೆರೆ, ಪು. ೧೧೨

ಕರಣದಿ ತೆಗೆದು ಬಿಗಿಯಪ್ಪಿದಡೆ

ಚೆನ್ನಮಲ್ಲಿಕಾರ್ಜುನನ ಹೃದಯಕಮಲದಲ್ಲಿ ಅಡಗಿದೆನು'[೧]

ಅಕ್ಕನ ಬದುಕು ಸರಳ ಸುಂದರವಲ್ಲ. ಅವಳದು ಹೋರಾಟದ ಬದುಕು ಅಥವಾ ಬದುಕೇ ಒಂದು ಹೋರಾಟ. ಆಕೆಯ ಹೋರಾಟವೆ ತನುಮನಗಳನ್ನು ಜಯಿಸುವುದು. ಅಕ್ಕ ಬದುಕಿನಲ್ಲಿ ಬರುವ ವಿಕಾರಗಳಿಗೆ ಅಂಜಿ ಬೆನ್ನು ಮಾಡಿದವಳಲ್ಲ. ಎದುರಿಸಿ ನಿಂತವಳು. ಈ ಕದಳಿಯ ಬನದಲ್ಲಿ ಇದ್ದುಕೊಂಡೇ ಭವಹರನ ಕಂಡವಳು. ಚೆನ್ನಮಲ್ಲಿಕಾರ್ಜುನನ್ನು ಕಾಣುವುದೇ ಅವಳ ಜೀವನದ ಗುರಿ ಕದಳಿಯೆಂಬ ಭವ ಘೋರಾಣ್ಯಗೆದ್ದು ಬದುಕಿ ಬಂದು ಹರನನ್ನು ಕಂಡವಳು ಆಕೆ. ಆಕೆ ನೆಲೆಸಿರುವುದು ಚನ್ನಮಲ್ಲಿಕಾರ್ಜುನನ ಹೃದಯಕಮಲದಲ್ಲಿ ಎಂಬುದು ಬಹಳ ಮುಖ್ಯವಾದದ್ದು. ಅಕ್ಕ ಕದಳಿ ಎಂಬುದನ್ನು ಪ್ರತಿಮಾತ್ಮಕವಾಗಿ ಬಳಸಿಕೊಂಡಿರುವುದು ಕಂಡುಬರುತ್ತದೆ.

ಸಂಗಾತಿಯ ಆಯ್ಕೆ ವಿಷಯದಲ್ಲಿ ಪುರುಷನದೇ ಅಂತಿಮ ಮಹಿಳೆಗೆ ತನ್ನ ಸಂಗಾತಿಯನ್ನು ಆಯ್ಕೆ ಮಾಡುವ ಅವಕಾಶವಿಲ್ಲ. ತನ್ನ ಮನಸ್ಸಿಗೆ ಒಪ್ಪದ ವರನನ್ನು ತಿರಸ್ಕರಿಸುವ ಅಧಿಕಾರವೂ ಹೆಣ್ಣಿಗೆ ಸಿಗದು. ಈ ಎಲ್ಲಾ ಕಟ್ಟುಪಾಡುಗಳನ್ನು ಮೀರಿ ನಿಂತವಳು ಅಕ್ಕಮಹಾದೇವಿ. ಈ ಅಸಾಧ್ಯತೆಗಳನ್ನು ಸಾಧ್ಯಮಾಡಿ ತೋರಿದವಳು ಅಕ್ಕ. ಹೊಸ ಚಿಂತನೆಗಳಿಗೆ ಅಕ್ಕನಾಂದಿಯಾಡುತ್ತಾಳೆ. ಹೊಸ ಹೊಸ ಕನಸುಕಂಡವಳು. ಲೋಕದ ನೊಂದ ಹೆಣ್ಣುಗಳಿಗೆ ಹೊಸ ಕನಸುಗಳನ್ನು ಬಿತ್ತಿದವಳು.

'ಅಕ್ಕ ಕೇಳೆ ನಾನೊಂದು ಕನಸ ಕಂಡೆ

ಅಕ್ಕಿ ಅಡಿಕೆ ಓಲೆ ತೆಂಗಿನಕಾಯಿ ಕಂಡೆ

ಚಿಕ್ಕ ಚಿಕ್ಕ ಜಡೆಗಳ ಸುಲಿಪಿಲ್ಲಿ ಗೊರವನು

ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವಾ

ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು

ಚೆನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು'[೨]

ಅಕ್ಕ ಈ ತರಹದ ಸಾವಿರ ಕನಸು ಕಂಡವಳು. ತನ್ನದೇ ಆದ ರೀತಿ ಬದುಕಿ ತೋರಿದವಳು. ಹಗಲು-ರಾತ್ರಿಯೆನ್ನದೆ ಚೆನ್ನಮಲ್ಲಿಕಾರ್ಜುನನ್ನ ಹಂಬಲಿಸಿದವಳು. ಅಕ್ಕನಿಗೆ ಚೆನ್ನಮಲ್ಲಿಕಾರ್ಜುನ ಪ್ರಿಯಕರನಾಗಿದ್ದನು. ಅವಳು ಈ ತನ್ನ ಪ್ರಿಯಕರನಿಗಾಗಿ ಅನಂತಕಾಲ ತಪಸ್ಸು ಮಾಡಬಲ್ಲಳು. 'ಅವಳ ಚೆನ್ನಮಲ್ಲಿಕಾರ್ಜುನನು ಸೃಷ್ಟಿ ಸ್ಥಿತಿ, ಲಯಾದಿಗಳ ನಿಗೂಢೀಕರಣವನ್ನು ನಂಬುವವರಿಗೆ "ದೇವರು ಆಗ ಕಂಡರೆ, ಅವಳಿಗೆ

---

೧. ಶಿವಶರಣೆಯ ವಚನ ಸಂಪುಟ, ಡಾ. ವೀರಣ್ಣ ರಾಜೂರ, ವ. ೧೧೫, ಪು. ೩೮

೨. ಅದೇ, ವ. ೯, ಪು. ೪

ಮಾತ್ರ ತನ್ನೊಳಗಿನ ಅನಂತ ಬಯಕೆಗಳ ಲೋಕಕ್ಕೆ ಒಳಹರಿವು ಪಡೆದುಕೊಳ್ಳಬಲ್ಲ ನಿಷ್ಕಲ್ಮಷ ಪ್ರಿಯಕರನಾಗಿದ್ದಾನೆ. ಅವಳು ಇಂಥ ಪ್ರಿಯಕರನಿಗಾಗಿ ಅನಂತಕಾಲ ತಪಿಸಬಲ್ಲಳು. ಭೌತಿಕವಾಗಿ ದಕ್ಕದೇ ಹೋದರೂ ಜೀವಭಾವದ ಅಸೀಮನೆಲೆಯಲ್ಲಿ ಸಂವಾದ ಏರ್ಪಡಿಸಿಕೊಳ್ಳಬಲ್ಲಳು. ಇಂಥ ಸಂಕೀರ್ಣ ವ್ಯಕ್ತಿತ್ವದ ಅಕ್ಕನೊಂದಿಗೆ ಮುಖಾಮುಖಿಯಾಗುವುದೆಂದರೆ ಬದುಕನ್ನು ಕಟ್ಟಿಕೊಳ್ಳುವ ಯತ್ನವೆಂದೇ ಅರ್ಥ. ಸ್ತ್ರೀವಾದಿ ಚಿಂತನೆಗಳ ವಿಸ್ತೃತ ಕ್ಯಾನವಾಸಿನ ಮೇಲೆ ಮಹತ್ವಪೂರ್ಣ "ಮಾಸ್ಟರ್ ಪೀಸ್" ಆಗಿ ಒದಗಿಬರುವ ಅವಳು ಅಂದು ತಾಳಿದ ನಿಲುವುಗಳಿಗಾಗಿ ಮುಖ್ಯವಾಗುವಂತೆ ಇಂದು ಸಹ ನಾವು ಮತ್ತೆ ಮತ್ತೆ ಕಟ್ಟಿಕೊಳ್ಳಬೇಕಾದ ಸ್ತ್ರೀತ್ವದ ರೂಪಕವಾಗಿ ಮುಖ್ಯವಾಗುತ್ತಾಳೆ. ಲಿಂಗಭೇದ ನೀತಿಯು ಅಂತಿಮವಾಗಿ ಚಾತುರ್ವರ್ಣ ವ್ಯವಸ್ಥೆಯ ಮುಖವಾಣಿಯಾಗಿತ್ತು. ಆದ್ದರಿಂದ ಅಕ್ಕ ತನ್ನ ಭಿನ್ನ ಹೆಜ್ಜೆಗಳನ್ನು ಇಡುವಾಗಲೂ ಚಾತುವರ್ಣದ ನಂಬಿಕೆಗಳನ್ನು ಒಡೆಯುವ ಕೆಲಸವನ್ನೇ ಮಾಡುತ್ತಾಳೆ"[೧] ಪ್ರತಿಭಟನಾತ್ಮಕ ವಚನಗಳೇ ಈ ಮಾತುಗಳಿಗೆ ಸಾಕ್ಷ್ಯ ನೀಡುತ್ತವೆ.

"ಓದಿ ಓದಿ ವೇದವಾದಕ್ಕಿಕ್ಕಿತ್ತು
ಕೇಳಿ ಕೇಳಿ ಶಾಸ್ತ್ರ ಸಂದೇಹಕ್ಕಿಕ್ಕಿತ್ತು
ಅರಿದೆಹೆ ಅರೆದೆಹೆನೆಂದು ಆಗಮ ಅರೆಯಾಗಿ ಹೋಯಿತ್ತು
ಪೂರೈಸಿದೆ ಪೂರೈಸಿದೆನೆಂದು
ಪುರಾಣ ಪೂರ್ವದ ಬಟ್ಟೆಗೆ ಹೋಯಿತ್ತು
ನಾನೆತ್ತ ತಾನೆತ್ತ?
ಬೊಮ್ಮ ಬಟ್ಟ ಬಯಲು ಚೆನ್ನಮಲ್ಲಿಕಾರ್ಜುನ"[೨]

ವೈಯಕ್ತಿಕ ನೆಲೆಯನ್ನು ಮೀರಿದ ಸಾಮೂಹಿಕ ಹೋರಾಟವನ್ನು ಅಕ್ಕ ಮಾಡಿದ್ದಾಳೆ. ಲಿಂಗ, ವರ್ಣ, ವರ್ಗಭೇದಗಳನ್ನು ಅಕ್ಕ ಸದಾ ಖಂಡಿಸುತ್ತಾ ಬಂದವಳು. ಆ ಖಂಡನಾತ್ಮಕ ಹೋರಾಟ ಇಂದೂ ಆದರ್ಶ ಮತ್ತು ಅವಶ್ಯ ಕೂಡ. 'ಅಕ್ಕನ ಭಕ್ತಿ ದ್ರೌಪದಿಯ ಭಕ್ತಿಯಂತಲ್ಲ. ದ್ರೌಪದಿಗೆ ತನ್ನ ಕಷ್ಟಕಾಲದಲ್ಲಿ ಕೃಷ್ಣ ಬಂದು ರಕ್ಷಿಸುತ್ತಾನೆ ಎಂಬ ಶರಣಾಗತ ಭಾವವಿತ್ತು. ಅವಳ ಧೈರ್ಯವೆಲ್ಲ ದೇವರ ಭಕ್ತಿವತ್ಸಲತನವನ್ನು ಅಧರಿಸಿದ್ದು. ಆದರೆ ಮಹಾದೇವಿ ಎಲ್ಲಾ ದೇವರು ತನ್ನ ರಕ್ಷಣೆಗೆ ಬರುತ್ತಾನೆ ಎಂಬ ನಿರೀಕ್ಷೆ ಇಟ್ಟುಕೊಂಡವಳಲ್ಲ. ತಾನು ಚೆನ್ನಮಲ್ಲಿಕಾರ್ಜುನನಿಗೆ ಮನಗೊಟ್ಟವಳಾದ್ದರಿಂದ ಮತ್ತೇನು ನಡೆದರೂ ಅವನಿಗೇ ಅರ್ಪಿತವಾದದ್ದು

---

೧. ಅಕ್ಕಮಹಾದೇವಿ ವಚನಗಳು, ಸಂ. ರಹಮತ್ ತರೀಕೆರೆ, ಪು. ೧೧೨
೨. ಶಿವಶರಣೆಯ ವಚನ ಸಂಪುಟ, ಡಾ. ವೀರಣ್ಣ ರಾಜೂರ, ವ. ೧೦೭, ಪು. ೩೬

ಎಂಬಂತಹ ದೃಢನಂಬಿಕೆ ಅಥವಾ ನಿರ್ಲಕ್ಷ್ಯ ಅವಳಲ್ಲಿತ್ತು. ಅಂತಿಮವಾಗಿ ಇದರಲ್ಲಿ ಪ್ರಕಟವಾಗುವ ಸತ್ಯವೇನೆಂದರೆ ತಾನು ತಳೆದ ನಿಲುವು ಏನಾದರೂ ಸರಿ ಬಿಡುವುದಿಲ್ಲವೆನ್ನುವ ಸ್ವಾಭಿಮಾನವೇ ಹೊರತು ಅಲ್ಲೆಲ್ಲೂ ದೈನ್ಯತೆಯಿಲ್ಲ, ರಕ್ಷಣೆಯ ಯಾಚನೆಯಿಲ್ಲ 'ಚನ್ನಮಲ್ಲಿಕಾರ್ಜುನನು ಇರಿದ ಅಂಗು ಎನ್ನ ಒಡಲಲ್ಲಿ ಮುರಿದು, ಹೊರಳುವುದ ನೀವೆತ್ತ ಬಲ್ಲಿರಿ' ಎಂಬುದು ಅಕ್ಕನ ಪ್ರಶ್ನೆ. ಅವಳ ಸಖಿಯರೇ ಅವಳ ಒಲವನ್ನು ಭ್ರಮಾಧೀನವೆಂದು ಹಂಗಿಸಿದರೆ ಅಕ್ಕ ತಳೆಯುವ ನಿಲುವು ಇದು. ಇದರಲ್ಲಿ ಮತ್ತೂ ಪ್ರಕಟಗೊಂಡಿರುವುದು ಆತ್ಮವಿಶ್ವಾಸವೇ ಹೊರತು ಅವಲಂಬನೆಯಲ್ಲ'[೧] ಅಕ್ಕನ ಪಾಲಿಗೆ ತಾನು ಹೆಣ್ಣು ಎಂಬುದು ಸಾಧನೆಗೆ ಅಡ್ಡಿಯಾಗಲೇ ಇಲ್ಲ. ಹೆಣ್ಣಾಗಿದ್ದೇ ಗಂಡಿನ ಅಸ್ತಿತ್ವದ ಎಲ್ಲಾ ಅಂಶಗಳನ್ನು ಸಾಧ್ಯಮಾಡಿ ತೋರಿದಳು.

ಕೊಟ್ಟಣದ ಸೋಮಮ್ಮನು ತನ್ನ ವಚನದಲ್ಲಿ ಈ ರೀತಿ ಹೇಳಿದ್ದಾಳೆ.

'ಹದತಪ್ಪಿ ಕಟ್ಟಲು ನುಚ್ಚಲ್ಲದೆ ಅಕ್ಕಿಯಿಲ್ಲ
ವ್ರತಹೀನನ ನೆರೆಯ ನರಕವಲ್ಲದೆ ಮುಕ್ತಿಯಿಲ್ಲ
ಅರಿಯದುದು ಹೋಗಲಿ, ಅಂದು ಬರೆದೆನಾದಡೆ
ಕಾದ ಕತ್ತಿಯಲ್ಲಿ ಕಿವಿಯ ಕೊಯ್ವರಯ್ಯ
ಒಲ್ಲೆ ಒಲ್ಲೆನಾಗಿ, ನಿಮ್ಮಾಣೆ ನಿರ್ಲಜ್ಜೇಶ್ವರಾ'[೨]

ಕೊಟ್ಟಣದ ಸೋಮವ್ವೆ ಅಕ್ಕಿ ಕುಟ್ಟುವ ಕಾಯಕವನ್ನು ಮಾಡುತ್ತಿದ್ದವಳು. ಕಾಯಕ ನಿಷ್ಠೆಯೇ ಅವಳಿಗೆ ಪ್ರಧಾನವಾದದ್ದು. ಹದತಪ್ಪಿ ಕುಟ್ಟಾದರೆ ಅಕ್ಕಿ ಸಿಗದು ಬದಲು ನುಚ್ಚಾಗುತ್ತದೆ. ವ್ರತಹೀನನ ಸಹವಾಸದಿಂದ ಖಂಡಿತ ಮುಕ್ತಿ ದೊರೆಯದು ಕಾದಕತ್ತಿಯಲ್ಲಿ ಕಿವಿಯ ಕೊಯ್ವರಯ್ಯಾ ಎಂದು ಎಚ್ಚರಿಸುತ್ತಾಳೆ. ಇಲ್ಲಿ ಸೋಮವ್ವ ತನ್ನ ಕಾಯಕದ ಪರಿಭಾಷೆಯಲ್ಲೆ ವ್ರತಹೀನರನ್ನು ಖಂಡಿಸುತ್ತಾಳೆ. ಹದತಪ್ಪಿ ಕುಟ್ಟಲು 'ನುಚ್ಚು' ಈ ತರಹದ ವೃತ್ತಿಯ ಪರಿಭಾಷೆಯೊಳಗೆ ತನ್ನದೇ ರೀತಿಯಲ್ಲಿ ಧೈರ್ಯವಾಗಿ ಸ್ವತಂತ್ರವಾಗಿ ಅಭಿವ್ಯಕ್ತಿಸಿದ್ದಾಳೆ.

'ಉದರ ಪೋಷಣಕ್ಕೆ ಗಿಡುಗಿಡುದಪ್ಪುದೆ ತಿರುಗುವ ಕುನ್ನಿ
ಒಡೆಯನ ಗುರತಬಲ್ಲುದೇ
ಮಳೆಗಾಲದಲ್ಲಿ ಮೀನು ಮಿಡಿಚೆಯ ತಿಂಬನರಿ
ಕತ್ತಲೆಯ ಬಲ್ಲುದೆ?
ಸತ್ತ ಹಂದಿಯ ತಿಂಬ ನಾಯಿ

---

೧. ಅಕ್ಕಮಹಾದೇವಿ ವಚನಗಳು, ಸಂ. ರಹಮತ್ ತರೀಕೆರೆ, ಪು. ೧೩೮
೨. ಶಿವಶರಣೆಯ ವಚನ ಸಂಪುಟ, ಡಾ. ವೀರಣ್ಣ ರಾಜೂರ, ವ. ೬೭೦, ಪು. ೨೧೭

ಬೆಳದಿಂಗಳ ಬಲ್ಲುದೆ?
ಕರ್ತನನರಿಯದ ವೇಷಧಾರಿಗಳು
ನಿಮ್ಮನೆತ್ತ ಬಲ್ಲರು ಅಮುಗೇಶ್ವರಾ? [೧]

ಅಮುಗೆರಾಯಮ್ಮ ಹೇಳಬೇಕಾದನ್ನು ನೇರವಾಗಿ ಹೇಳುವ ಸ್ವಭಾವದವಳು. ಆದ್ಯರ ವೇದ್ಯರ ವಚನಗಳಿಂದ ಅರಿತಿದ್ದೇವೆ ಎಂಬ ಜನಗಳಿಗೆ ಚಾಟಿ ಬೀಸುತ್ತಾಳೆ. ಅವಳ ಪ್ರಕಾರ ಜ್ಞಾನವೆಂಬುದು ಬೀದಿವಸ್ತುವಲ್ಲ. ನಿಜವಾದ ವಿರಕ್ತಿಯಾದವನು ಎಲ್ಲೂ ತನ್ನನ್ನು ಅನುಭಾವಿ ಎಂದು ವೈಭವೀಕರಿಸಿ ಹೇಳಿಕೊಳ್ಳುವುದಿಲ್ಲ. ಅವನು ನಾನು, ನೀನು, ಕುಲಬಾಂಧವರನ್ನು ಮೀರಿದ ಅರಿವು ಗಳಿಸಿರುತ್ತಾನೆ ಎನ್ನುತ್ತಾಳೆ. ಹೊಟ್ಟೆ ತುಂಬಿಸಿಕೊಳ್ಳಲು ತಿರುಗುವ ನಾಯಿಗೆ ಒಡೆಯನ ಅರಿವು ಇಂದು ಮಳೆಗಾಲದಲ್ಲಿ ಮೀನು ಮಿಡಚೆ ತಿನ್ನುವ ನರಿ ಕತ್ತಲೆಯನ್ನು ಅರಿಯದು. ಸತ್ತ ಹಂದಿ ತಿನ್ನುವ ನಾಯಿ ಬೆಳದಿಂಗಳನ್ನು ಅರಿಯದು. ಇದೇ ರೀತಿ ಕೇವಲ ವಿರಕ್ತಿಯ ವೇಷ ಧರಿಸಿದರೆ ಆತ ದೇವರನ್ನರಿಯಲಾರ ಎನ್ನುತ್ತಾಳೆ. ಆಕೆ ಭಕ್ತಿ ಎನ್ನುವುದು ತೋರಿಕೆಗಲ್ಲ ಅದು ಅಂತರಂಗದೊಳಗೆ ಆಚರಿಸಬೇಕಾದದ್ದು ಎಂದು ಹೇಳುತ್ತಾಳೆ.

ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ ತೀವ್ರ ವಿಚಾರಣೀಯವಾದ ವಚನಗಳನ್ನು ರಚಿಸಿದ್ದಾಳೆ. ಡಾಂಭಿಕ ಭಕ್ತಿಯನ್ನು ಆಕೆ ಕಟುವಾಗಿ ಟೀಕಿಸುತ್ತಾಳೆ.

'ತೂಬರದ ಕೊಳ್ಳಿಯಂತೆ ಉರಿವಾತ ಭಕ್ತನೆ?
ಹುಸಿದು ತಂದು ಮಾಡುವಾತ ಭಕ್ತನೆ?
ಭಕ್ತರ ಕುಲವನೆತ್ತಿ ನಿಂದಿಸುವಾತ ಭಕ್ತನೆ?
ನಿಂದಯಾ ಶಿವಭಕ್ತನಾಂ ಕೋಟಿ ಜನ್ಮನಿ ಸೂಕರಃ!
ಸಪ್ತಜನ್ಮನಿ ಭವೇತ ಕುಷ್ಠೀ ದಾಸೀಗರ್ಭೆವಲ ಜಾಯತೇ
ಎಂದುದಾಗ, ತನ್ನ ಪ್ರಾಣದ ಮೇಲೆ ಬಂದದೂ ಬರಲಿ, ಇರವ ಬಿಡಬೇಕು
ಬಿಡದಿರಲು ಉರಿಲಿಂಗ ಪೆದ್ದಿಗಳರಸನೊಲ್ಲನವ್ವಾ'[೨]

ಈ ವಚನದಲ್ಲಿ ಗಮನಾರ್ಹ ಹಲವು ವಿಚಾರಗಳಿವೆ. ಅವಳ ಜಾಗೃತ ಪ್ರಜ್ಞೆಯನ್ನು ಇಲ್ಲಿ ಗಮನಿಸಬಹುದು. ಡೋಂಗಿ ಭಕ್ತರನ್ನು ಕಂಡು ಕುದಿಯುತ್ತಾಳೆ. ತೂಬರದ ಬಳ್ಳಿಯಂತೆ ಉರಿವಾತ ಭಕ್ತನೆ? ಹಸಿದು ತಂದು ಮಾಡುವಾತ ಭಕ್ತನೆ? ಭಕ್ತರ ಕುಲವನೆತ್ತಿ ನಿಂದಿಸುವಾತ ಭಕ್ತನೆ? ಎಂದು ಭಕ್ತರ ವೇಷದ, ಡೋಂಗಿ ಆಧ್ಯಾತ್ಮ ಪ್ರದರ್ಶಿಸುವವರನ್ನು ಕಾಳವ್ವೆ ಟೀಕಿಸುತ್ತಾಳೆ. ಕುಲ ಮತ್ತು ಜಾತಿಯನ್ನೆತ್ತಿ ನಿಂದಿಸುವಾತ

---

೧. ಶಿವಶರಣೆಯ ವಚನ ಸಂಪುಟ, ಡಾ. ವೀರಣ್ಣ ರಾಜೂರ, ವ. ೫೩೦, ಪು. ೧೭೨
೨. ಅದೇ.,

ಭಕ್ತನೆ ಎಂಬ ಪ್ರಶ್ನೆ ಮಹತ್ವದ್ದು. ಅಸ್ಪೃಶ್ಯ ವರ್ಗದಿಂದ ಬಂದು ಶರಣಧರ್ಮವನ್ನು ಅವಲಂಬಿಸಿದ ಕಾಳವ್ವೆ ಜಾತಿಯತೆಯ ಅನ್ಯಾಯ ಮತ್ತು ಅವಮಾನಗಳ ವಿರುದ್ಧ ಧನಿ ಎತ್ತಿ ಪ್ರತಿಭಟಿಸಿದ್ದು ಆಕೆಯ ಸ್ವಾತಂತ್ರ್ಯ ಹೋರಾಟದ ಅಂಶಗಳನ್ನು ತಿಳಿಸುತ್ತದೆ.

ಕಾಳವ್ವೆಯ ಈ ವಚನದಲ್ಲಿ ಬರುವ ಸಂಸ್ಕೃತ ಸಾಲುಗಳು 'ಶಿವಭಕ್ತರನ್ನು ನಿಂದಿಸುವವರು ಕೋಟಿ ಜನಗಳಲ್ಲೂ ಹಂದಿಯಾಗಿ ಹುಟ್ಟುತ್ತಾರೆ. ಕುಷ್ಠರೋಗಿಯಾದ ದಾಸಿಯ ಗರ್ಭದಲ್ಲಿ ಜನಿಸುತ್ತಾರೆ ಎಂಬ ಅರ್ಥ ನೀಡುತ್ತವೆ. ಶಿವಭಕ್ತರನ್ನು ಕುಲದ ಹೆಸರಿನಲ್ಲಿ ನಿಂದಿಸುವ ವ್ಯವಸ್ಥೆಯ ವಿರುದ್ಧ ಕಾಳವ್ವೆ ಪ್ರತಿಭಟಿಸುತ್ತಾಳೆ. ಶಿವಭಕ್ತರನ್ನು ನಿಂದಿಸಿದರೆ ಬರುವ ಶಿಕ್ಷೆಯನ್ನು ಆಕೆ ಸಂಸ್ಕೃತ ಭಾಷೆಯಲ್ಲಿ ಹೇಳಿ ಎಚ್ಚರಿಸುತ್ತಿದ್ದಾಳೆ. ಆಕೆ ಕನ್ನಡ ಮತ್ತು ಸಂಸ್ಕೃತಗಳ ಅಪಾರಜ್ಞಾನ ಹೊಂದಿದ್ದಳೆಂಬುದು ತಿಳಿಯುತ್ತದೆ. 'ಅಸ್ಪೃಶ್ಯರಿಗೆ ಜೀವಿಸಲು ಕೂಡ ಹಕ್ಕಿಲ್ಲದ ವೈದಿಕ ವ್ಯವಸ್ಥೆಯಲ್ಲಿ ಕಾಳವ್ವೆಯು ಪಡೆದ ಅಕ್ಷರ ಸ್ವಾತಂತ್ರ್ಯವಾಗಲಿ ಅವಳು ಮೆರೆದ ಅಭಿವ್ಯಕ್ತಿ ಸ್ವಾತಂತ್ರ್ಯವಾಗಲಿ ತೀರಾ ಸಾಮಾನ್ಯವಾದ ಘಟನೆಯೇನಲ್ಲ. ಅದರಲ್ಲೂ ಶರಣ ಸಂಸ್ಕೃತಿಯಲ್ಲಿ ಅವಳು ಪಡೆದ ಆ ಸ್ವಾತಂತ್ರ್ಯಕ್ಕೆ ಪ್ರತಿಯಾಗಿ ಶರಣ ಸಂಸ್ಕೃತಿಯ ಸಂಘಟನೆಗೂ ಅದರ ಮುನ್ನಡೆಗೂ ತನ್ನ ಬದುಕನ್ನೇ ತ್ಯಾಗ ಮಾಡಿದ ಕಾಳವ್ವೆಯ ಜೀವನ ಹಾಗೂ ದರ್ಶನವನ್ನು ಅವಳ ವಚನಗಳ ಅಧ್ಯಯನದಿಂದಲೂ ಅರ್ಥಮಾಡಿಕೊಳ್ಳಬೇಕಾಗುತ್ತದೆ.[೧] ಆಯ್ದಕ್ಕಿ ಲಕ್ಕಮ್ಮ ತನ್ನ ವಚನವೊಂದರಲ್ಲಿ ಭಕ್ತನ ಬಗೆಗೆ ಹೀಗೆ ಹೇಳುತ್ತಾಳೆ.

> 'ಭಕ್ತಂಗೆ ಬಡತನವುಂಟೆ? ನಿತ್ಯಂಗೆ ಮರಣವುಂಟೆ?
> ಭಕ್ತರು ಬಡವರೆಂದು ಮತ್ತೊಂದ ಕೊಟ್ಟೆಹೆನೆಂದಡೆ
> ಮಾರಯ್ಯ ಪ್ರಿಯ ಅಮಲೇಶ್ವರಲಿಂಗ ಸತ್ತಂದಿಗಲ್ಲದೆ ಬಡತನವಿಲ್ಲ'[೨]

ಶರಣೆ ಲಕ್ಕಮ್ಮ ಶಿವಸಂತಳು. ಲಕ್ಕಮ್ಮ ತನ್ನ ವಚನಗಳಲ್ಲಿ ಬಡತನದ ಬಗೆಗೆ ಹಲವು ಬಾರಿ ಪ್ರಸ್ತಾಪಿಸಿದ್ದಾಳೆ. ಮೊದಲು ಮಾನವ ಮಾನಸಿಕ ಬಡತನದಿಂದ ದೂರವಾಗಿ ಹೃದಯ ಶ್ರೀಮಂತನಾಗಬೇಕೆನ್ನುತ್ತಾಳೆ. ಆಕೆ ನಿಜಭಕ್ತನಿಗೆ ಬಡತನವೇ ಬರದು ಎನ್ನುತ್ತಾಳೆ. ದೇವರು ಸತ್ತಮೇಲೆ ಮಾತ್ರ ನಮಗೆ ಬಡತನ ಎನ್ನುತ್ತಾಳೆ. ಹಲವು ರೀತಿಯ ಬಡತನದ ಸಂಕಷ್ಟಗಳನ್ನು ಲಕ್ಕಮ್ಮ ಅನುಭವಿಸಬೇಕು. ಅವಳು ನಿಷ್ಠುರವಾದಿ ನೇರನೇರವಾಗಿ ಅಭಿವ್ಯಕ್ತಿಸುವ ಅವಳ ವಚನಗಳ ಸಾಲಿನಲ್ಲಿ ನಾವು ಅವಳ ಸ್ವತಂತ್ರ ಆಲೋಚನೆಗಳನ್ನು ಗುರುತಿಸಬಹುದು.

---

೧. ದಲಿತವರ್ಗದ ಶರಣರು ಶರಣೆಯರು – ಒಂದು ಅಧ್ಯಯನ, ಡಾ. ಮ.ನ.ಜವರಯ್ಯ, ಪು. ೨೪೯.

೨. ಶಿವಶರಣೆಯ ವಚನ ಸಂಪುಟ, ಡಾ. ವೀರಣ್ಣ ರಾಜೂರ ವ. ೬೪೧, ಪು. ೨೦೩

ಲಿಂಗಾಧಾರಿತ ಸ್ವಾತಂತ್ರ್ಯ ಪ್ರಜ್ಞೆ

ಸಾಮಾಜಿಕ ಸುಧಾರಣೆಯ ಚಳವಳಿಯಾದ ವಚನ ಚಳವಳಿಯ ಕಾಲದಲ್ಲಿ ಸ್ತ್ರೀ ಸಂವೇದನೆ ಎಂಬುದು ಅಭಿವ್ಯಕ್ತಿಯ ರೂಪ ಪಡೆಯಿತು. ಅದು ತನ್ನ ಅನಾದಿ ಕಾಲದ ನೋವು, ಹತಾಶೆ, ದುಃಖ, ಬೇಸರ, ಯಾತನೆ, ವಿರಹ, ಪ್ರತಿಭಟನೆಗಳನ್ನು ನೇರವಾಗಿ ಸ್ವತಂತ್ರವಾಗಿ ಮುಚ್ಚುಮರೆಯಿಲ್ಲದೆ ಸಾರಿದವು. ಅಕ್ಷರ ಪ್ರಪಂಚದ ಗುತ್ತಿಗೆ ಕೇವಲ ಪುರುಷರದಲ್ಲ ಎಂಬ ಪ್ರತಿಭಟನಾತ್ಮಕ ಧೋರಣೆ ಎಂಬಂತೆ ಸಮಾಜದ ಹತ್ತು-ಹಲವು ಕಸಬುಗಳ ಮಹಿಳೆಯರು ಬಸವಣ್ಣನವರ ಚಳವಳಿಯ ಮುಖ್ಯವಾಹಿನಿಗೆ ಬಂದರು ಹಿಂದೆಂದೂ ಕಾಣದಂತೆ ಮೂವತ್ಮೂರಕ್ಕೂ ಹೆಚ್ಚು ವಚನಕಾರ್ತಿಯರು ಇದುವರೆಗೆ ಇಲ್ಲದ ಅಭಿವ್ಯಕ್ತಿ ಸ್ವಾತಂತ್ರ್ಯದ ಮುಖಾಂತರ ಸಾಧನೆ ಮಾಡಿದರು.

ಮೋಕ್ಷದ ಹಾದಿಗೆ ಸ್ತ್ರೀಯರು ನಿಷಿದ್ಧ ಎಂಬುದನ್ನು ಕಿತ್ತೊಗೆದು ಸರ್ವರೂ ಲಿಂಗದೀಕ್ಷೆಗೆ ಅರ್ಹರಾದರು. ಆ ಮೂಲಕ ಸಮಾನತೆಯನ್ನು ಗಳಿಸಿ ಆತ್ಮದ ಉದ್ಧಾರಕ್ಕೆ ಗಂಡು-ಹೆಣ್ಣು ಭೇದವಿಲ್ಲ ಎಂಬ ಧೋರಣೆಯ ಮೂಲಕ ವಚನ ಚಳವಳಿ ಮಹಿಳಾ ಬದುಕಿನ ಬದಲಾವಣೆಯನ್ನು ತಂದಿತು. ಹೆಣ್ಣಿಗೂ ಸಹ ಗಂಡಿನಂತೆ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ, ತಾನು ನಂದಿದ ಮೌಲ್ಯಗಳನ್ನು ಆಚರಣೆಗೆ ತರಲು, ಪರಸ್ಪರ ಸಾಮರಸ್ಯದಿಂದ ಸ್ವತಂತ್ರವಾಗಿ ಬದುಕುವ, ಚಿಂತಿಸುವ ಅವಕಾಶ ದೊರೆಯಿತು. 'ಶರಣಸತಿ – ಲಿಂಗಪತಿ'ಯ ತತ್ವದಡಿ ಲಿಂಗಾಂಗ ಸಾಮರಸ್ಯದ ಮಾರ್ಗದಲ್ಲಿ ಸಾಧಿಸಲು ಶರಣ-ಶರಣೆಯರ ಸಮೂಹ ಉತ್ಸಾಹವಾಯಿತು. ಗಂಡು-ಹೆಣ್ಣು ಎಂಬ ಅಸಮಾನತೆಯನ್ನು ತೊಡೆದುಹಾಕಲು ಶ್ರಮಿಸಿದರು. ಶರಣೆ ಗೊಗ್ಗವ್ವೆಯ ವಚನವೊಂದು ಹೀಗಿದೆ.

ಮೊಲೆಮೂಡಿ ಬಂದಡೆ ಹೆಣ್ಣೆಂಬರು
ಮೀಸೆಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜನ
ಹೆಣ್ಣೋ ಗಂಡೋ ನಾಸ್ತಿನಾಥಾ? [೧]

ಆತ್ಮಜ್ಞಾನಕ್ಕೆ ಅನುಭಾವ ಸಾಧನೆಗೆ ಅರಿವನ್ನು ಗಳಿಸಲು ಸ್ತ್ರೀಪುರುಷಭೇದವನ್ನು ನಿರಾಕರಿಸುವ ವಚನ ಇದಾಗಿದೆ. ಗಂಡುಹೆಣ್ಣುಗಳ ಲಿಂಗ ವಿಶಿಷ್ಟತೆಯನ್ನು ಸೂಚಿಸುವ ಜೈವಿಕ ಲಕ್ಷಣಗಳು ದೇಹರಚನೆಗೆ ಮಾತ್ರ ಸಂಬಂಧಿಸಿದ್ದು, ಅರಿವಿಗೆ ಈ ಲಿಂಗಭೇದವಿಲ್ಲ. ಜೇಡರದಾಸಿಮಯ್ಯನ ವಚನವನ್ನು ಇದು ನೆನೆಪಿಸುವಂತಿದೆ. ಮಹಿಳೆಯರಿಗೆ ಆಧ್ಯಾತ್ಮಿಕ ಅವಕಾಶಗಳನ್ನು ಮುಕ್ತಗೊಳಿಸಿದರೆ ಅರಿವಿಗೆ

೧. ಶಿವಶರಣೆಯ ವಚನ ಸಂಪುಟ, ಡಾ. ವೀರಣ್ಣ ರಾಜೂರ, ವ. ೬೫೫, ಪು. ೨೨೭

ಲಿಂಗತಾರತಮ್ಯವಿಲ್ಲ ಎನ್ನುವ ಗೊಗ್ಗವೆಯ ಧೋರಣೆ ಮಹಿಳೆಯರ ವೈಚಾರಿಕ ವ್ಯಕ್ತಿತ್ವವನ್ನು ಬಲಪಡಿಸಿದೆ ಎನ್ನಬಹುದು.

'ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ
ಗಂಡು ಗಂಡಾದಡೆ ಹೆಣ್ಣಿನ ಸೂತಕ
ಮನದಸೂತಕ ಹಿಂಗಿದಡೆ
ತನುವಿನ ಸೂತಕಕ್ಕೆ ತೆರಹುಂಟೆ?
ಅಯ್ಯಾ ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲ
ಎನ್ನದೇವ ಚೆನ್ನಮಲ್ಲಿಕಾರ್ಜುನೆಂಬ ಗುರುವಂಗೆ
ಜಗವೆಲ್ಲ ಹೆಣ್ಣು ನೋಡಾ ಅಯ್ಯಾ'[೧]

ತನ್ನಿಚ್ಚೆಯಂತೆ ಬದುಕಿದವಳು ಅಕ್ಕ. ಅಧಿಕಾರವೆಂಬುದು ವಿಧಿಸಿದ ಎಲ್ಲಾ ನಿಯಮಗಳನ್ನು ಧಿಕ್ಕರಿಸಿ ವ್ಯಕ್ತಿ ಸ್ವಾತಂತ್ರ್ಯ ಮೆರೆದವಳು. ನಿರ್ಭಯವಾಗಿ ಹೇಳುವ ಪರಿಯೇ ಹೀಗೆ. ಅಕ್ಕನ ಪರ್ಯಾಯ ಸಂಸಾರ ಸ್ವರೂಪವನ್ನು ಈ ವಚನ ತಿಳಿಸುತ್ತಿದೆ. ಇಲ್ಲಿ ಗಂಡುಹೆಣ್ಣುಗಳೆಂಬ ಅಹಂ ಕಳೆದುಕೊಂಡು ಸಾಧನೆ ಮಾಡ-ಬೇಕೆಂದು ಅಕ್ಕ ಹೇಳುತ್ತಾಳೆ. ದೇಹದ ಮಾಯಾಭ್ರಮೆ ಕಳೆದುಕೊಂಡು ಚೆನ್ನಮಲ್ಲಿಕಾರ್ಜುನನನ್ನು ಕಾಣಲು ಸಾಧ್ಯವಾಯಿತು ಎಂದಿದ್ದಾಳೆ. ಶರಣಸತಿ ಲಿಂಗಪತಿ ಭಾವ ಪಡೆಯಬೇಕಾದ ಅನುಭಾವಿಕ ಫಲ ಇದಾಗಿದೆ. ಗಂಡು-ಹೆಣ್ಣು ನೋಡುವ ಪರಿಗೂ ಹೆಣ್ಣು ತನ್ನದೇ ಆದ ರೀತಿಯನ್ನು ತನ್ನ ಸುಖದುಃಖಗಳನ್ನು ಅಭಿವ್ಯಕ್ತಿಸುವ ಪರಿಗೂ ವ್ಯತ್ಯಾಸವಿದೆ ಎಂಬುದನ್ನು ಇಂತಹ ಸಂದರ್ಭಗಳಲ್ಲಿ ಗಮನಿಸಬಹುದು.

ಲಿಂಗಭೀತಿಯನ್ನು ಕಳೆದುಕೊಳ್ಳುವ ಕಡೆ ಗಮನಿಸಬೇಕೆಂಬುದನ್ನು ಈ ವಚನ ತಿಳಿಸುತ್ತದೆ. 'ನಮ್ಮ ಎಲ್ಲ ಭೀತಿಯ ಮೂಲ ಈ ದೇಹ ಭಯ. ಅದು ಲಿಂಗಪ್ರಜ್ಞೆಯಿಂದ ಹುಟ್ಟಿದೆ ಎಂದೇ ದೇಹ ಕುರಿತು ಅಜ್ಞಾನವುಳ್ಳವರಿಗೆ ಲಿಂಗಪ್ರಜ್ಞೆ ಬಹಳವಿಲ್ಲದೆ ಅವರಿಗೆ ಅದು ಒಂದು ಸಮಸ್ಯೆಯಾಗದು. ಪೂರ್ಣ ತಿಳಿದು ದಾಟಿದ ಸಂತನೂ ನಿರಾಳವಾಗಿ ಬದುಕಬಲ್ಲ. ಎಡಬಿಡಂಗಿಗಳಿಗೆ ಬಿಡಿಸಲಾಗದ ಕಗ್ಗಂಟು ಇದು. ವಾಸ್ತವಿಕ ಲಿಂಗಪ್ರಜ್ಞೆಯ ಪೂರ್ಣ ಅರಿವುಳ್ಳ ಸಂತನ ಕಣ್ಣು ದೇಹದಿಂದ ಲಿಂಗಕ್ಕೆ ಲಿಂಗದಿಂದ ಜೀವಕ್ಕೆ ನಡೆದಿರುತ್ತದೆ. 'ಬದುಕು ತುಂಬ ಸುಖದಾಯಕ'[೨] ಲೋಕದ ಗಂಡಸರನ್ನು ನಿರಾಕರಿಸುವ ಮಹಾದೇವಿಯಕ್ಕನ ದಿಟ್ಟತನಕ್ಕೆ ಇಂತಹ ವಚನಗಳೇ ಸಾಕ್ಷಿ.

---

೧. ಶಿವಶರಣೆಯ ವಚನ ಸಂಪುಟ-೫, ಸಂ. ಡಾ. ವೀರಣ್ಣ ರಾಜೂರ, ವ. ೩೪೯, ಪು. ೧೧೯
೨. ಅಕ್ಕಮಹಾದೇವಿ ವಚನಗಳು, ಸಂ. ರಹಮತ್ ತರೀಕೆರೆ, ಪು. ೮೮

ಪುರುಷಕೇಂದ್ರಿತ ಯಜಮಾನಿಕೆಯ ವಿರುದ್ಧ, ಕೌಟುಮಬಿಕವಾಗಿ ಆರ್ಥಿಕವಾಗಿ, ರಾಜಕೀಯವಾಗಿ, ಮತ-ಧರ್ಮವಾಗಿ ಬಾಧಿಸುತ್ತಿದ್ದ ವ್ಯವಸ್ಥೆಯ ವಿರುದ್ಧ ಸ್ತ್ರೀಯರು ಧನಿ ಎತ್ತಿದರು. ಅಕ್ಕನ ವಚನವೊಂದ ಹೀಗೆ ಹೇಳುತ್ತಿದೆ.

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ನಾನೊಲಿದೆ.
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚೆಲುವಂಗೆ ನಾನೊಲಿದೆ ಎಲೆ ಅವ್ವಗಳಿರಾ
ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ ನಾನು
ಸೀಮೆಯಿಲ್ಲದ ನಿಸ್ಸೀಮಂಗೊಲಿದೆ ನಾನು
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆ
ಮಿಗೆ ಮಿಗೆ ಒಲಿದೆ ಎಲೆ ಅವ್ವಗಳಿರಾ[೧]

ಲೌಕಿಕಗಂಡನ ಯಜಮಾನಿಕೆಯ ಬಿರ್ನಾಮ ಅಲೌಕಿಕ ಗಂಡನ ನಿರ್ಮಾಣ ಎರಡೂ ಏಕಕಾಲದಲ್ಲಿ ಘಟಿಸಿದೆ. ಕುಲ, ಸೀಮೆಯಿಲ್ಲದ, ಸಾವಿಲ್ಲದ, ಕೇಡಿಲ್ಲದ ಗಂಡನನ್ನು ಅಕ್ಕ ಬಯಸಿದ್ದು, ಈ ಕುಲ, ಸೀಮೆರಹಿತ ನಿಸ್ಸೀಮ ನೆಲೆಯನ್ನು ಗಂಡನೆಂದು ಪರಿಭಾವಿಸುವ ಅಕ್ಕ ಭಾರತೀಯ ಸ್ತ್ರೀಯರಿಗೊಂದು ವಿಶಿಷ್ಟ ಕ್ರಾಂತಿಯನ್ನು ಕಟ್ಟಿಕೊಡುತ್ತಾಳೆ. ಇದೊಂದು ಪ್ರತಿಭಟನೆ, ಇದರ ನಾಯಕಿ ಅಕ್ಕ, ಸ್ತ್ರೀ ಸಮಾಜದ ಅಸಂಖ್ಯಾತರಿಗೆ ವಿಮೋಚನಾಮಾರ್ಗದ ರೂವಾರಿ ಎನ್ನಬಹುದು.

'ಅಕ್ಕನಲ್ಲಿ ಕಂಡುಬರುವ ಚೆನ್ನಮಲ್ಲಿಕಾರ್ಜುನನ ಬಗೆಗಿನ ಭಕ್ತಿ, ಪ್ರೇಮ, ಕಾಮ, ಜಗಳ, ಜಿಗುಪ್ಸೆ ಎಲ್ಲವೂ ಭಾರತೀಯ ಸಂಪ್ರದಾಯದ ಸಮಾಜದೊಳಗೆ ದೊಡ್ಡ ಚಳುವಳಿಗಳಾಗಿ ಕಿಡಿಕಾರುತ್ತವೆ. ಅವುಗಳಲ್ಲಿ ಪ್ರೇಮ ಮತ್ತು ಕಾಮದ ಅಸ್ತ್ರಗಳು ಬಲತ್ಕಾರಗಳನ್ನು ಸೀಳಿಕೊಂಡು ಸ್ವಾತಂತ್ರ್ಯದ ಆನಂದ ಕಾಣಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ'[೨] ಅಕ್ಕ ಲೈಂಗಿಕತೆಯನ್ನು ಅಶ್ಲೀಲ ಎನ್ನುವುದಿಲ್ಲ. ಅದಕ್ಕೆ ಆತ್ಮತೃಪ್ತಿಯ ಅರ್ಥ ಕೊಟ್ಟದ್ದು ವಿಶಿಷ್ಟವಾಗಿದೆ. ಆಕೆಯ ವಚನವೊಂದು ಹೀಗಿದೆ.

ಮಚ್ಚು ಅಚ್ಚುಗವಾಗಿ ಒಪ್ಪಿದ ಪರಿಯ ನೋಡಾ
ಎಚ್ಚಡೆ ಗರಿದೋರದಂತಿರಬೇಕು
ಅಪ್ಪಿದಡೆ ಆಸ್ತಿಗಳು ನುಗ್ಗುನುಸಿಯಾಗಬೇಕು
ಮಚ್ಚು ಒಪ್ಪಿತ್ತು, ಚೆನ್ನಮಲ್ಲಿಕಾರ್ಜುನನ ಸ್ನೇಹ ತಾಯೆ[೩]

---

೧. ಶಿವಶರಣೆಯ ವಚನ ಸಂಪುಟ, ಡಾ. ವೀರಣ್ಣ ರಾಜೂರ, ವ. ೩೨೩, ಪು. ೧೦೨
೨. ಅಕ್ಕಮಹಾದೇವಿ ವಚನಗಳು, ಸಂ. ರಹಮತ್ ತರೀಕೆರೆ, ಪು. ೬೬
೩. ಶಿವಶರಣೆಯ ವಚನ ಸಂಪುಟ(೫), ಡಾ. ವೀರಣ್ಣ ರಾಜೂರ, ವ. ೨೬೪, ಪು. ೮೨

ಲೈಂಗಿಕ ತೀವ್ರತೆಯ ಜೊತೆ ಚೆನ್ನಮಲ್ಲಿಕಾರ್ಜುನನ ಸ್ನೇಹವನ್ನು ಬೆಸೆಯುವ ಅಕ್ಕ ಆಧ್ಯಾತ್ಮಿಕತೆಗೆ ರಸಿಕತೆಯ ನೆಲೆಯೊದಗಿಸಿದ್ದಾಳೆ. ಅಪೇಕ್ಷೆಯನ್ನು ತಣಿಸುವ ಅಪ್ಪುಗೆಯನ್ನು ತನ್ನ ಸಂಗಾತಕ್ಕೆ ಬಳಸಿಕೊಂಡಿರುವ ಅಕ್ಕ ಬಂದು ಅಸಾಂಪ್ರದಾಯಿಕ ಹಾಗೂ ನಿರ್ಭಿಡೆಯ ಅಭಿವ್ಯಕ್ತಿ ಸ್ವರೂಪವನ್ನು ತನ್ನ ಸ್ನೇಹವನ್ನಾಗಿ ಗುರುತಿಸಿ-ಕೊಂಡಿದ್ದಾಳೆ. ಇದೂ ಕೂಡ ಒಂದು ಪ್ರತಿರೋಧದ ಕ್ರಮವೇ ಆಗಿದೆ.[೧] ಅಕ್ಕ ಪುರುಷ ನಾಯಕತ್ವವನ್ನು ಆ ನೆಪದಲ್ಲಿ ನಡೆಯುವ ಸ್ತ್ರೀ ಶೋಷಣೆಯನ್ನು ಪ್ರತಿಭಟಿಸುವ ದಿಟ್ಟ ಹೆಣ್ಣು.

ಸತ್ಯಕ್ಕ ಲಿಂಗ ಅಸಮಾನತೆಗೆ ಮೂಲವಾಗಿರುವ ಜೈವಿಕ ನೆಲೆಯಲ್ಲಿ ಕಲ್ಪನೆಯನ್ನು ಖಂಡಿಸುತ್ತಾಳೆ. ಆಕೆ ತನ್ನ ವಚನವೊಂದನ್ನು ಹೀಗೆ ಹೇಳುತ್ತಾಳೆ.

'ಮೊಲೆಮುಡಿ ಇದ್ದುಡೆ ಹೆಣ್ಣೆಂದು ಪ್ರಮಾಣಿಸಲಿಲ್ಲ
ಕಾಸೆ ಮೀಸೆ ಕಠಾರವಿದ್ದುದೆ ಗಂಡೆಂದು ಪ್ರಮಾಣಿಸಲಿಲ್ಲ
ಅದು ಜಗದ ಹಾಹೆ ಬಲ್ಲವರ ನೀತಿಯಲ್ಲ

ಏತರ ಹೆಣ್ಣಾದಡೂ ಮಧುರವೆ ಕಾರಣ
ಅಂದವಿಲ್ಲದ ಕುಸುಮಕ್ಕೆ ವಾಸನೆಯೆ ಕಾರಣ
ಇದರಂದವ ನೀನೇ ಬಲ್ಲೆ ಶಂಭುಜಕ್ಕೇಶ್ವರಾ'[೨]

ಬಹಿರಂಗಕ್ಕೆ ಬೆಲೆಕಟ್ಟುವುದನ್ನು ವಿರೋಧಿಸುವ ಸತ್ಯಕ್ಕೆ ನೀತಿ, ನಿಗ್ರಹ, ನಡೆ, ನುಡಿ ಶುದ್ಧತೆಯನ್ನು ಹೇಳುತ್ತಾಳೆ. ಮೊಲೆ ಮುಡಿ, ಕಾಸೆಮೀಸೆಯೇ ಹೆಣ್ಣು ಗಂಡುಗಳ ವ್ಯತ್ಯಾಸ ತಿಳಿಸುವುದಾಗಿ ಅಂತರಂಗದ ಶುದ್ಧತೆಯ ಮೂಲಕ ಮೇಲ್ಜಾತಿಗಳಾಗಬೇಕು. ಯಾವುದೇ ಹಣ್ಣಾದರೂ ಸಿಹಿ ಮುಖ್ಯ. ಹೂವಿಗೆ ಸುವಾಸನೆ ಬೇಕಿರುವಂತೆ ಯಾವುದೇ ಲಿಂಗವಾದರೂ ಸಾಧನೆ ಮುಖ್ಯ ಎಂದು ಸತ್ಯಕ್ಕ ತಿಳಿಸುತ್ತಾಳೆ. ಗೊಗ್ಗವ್ವೆಯೂ ಕೂಡ ಗಂಡು-ಹೆಣ್ಣಿನ ಬಗೆಗೆ ತನ್ನ ವಚನವೊಂದರಲ್ಲಿ ಹೀಗೆ ಪ್ರಶ್ನಿಸುತ್ತಾಳೆ

ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಮೀಸೆಕಾಸೆ ಬಂದಡೆ ಗಂಡೆಮಬರು
ಈ ಉಭಯದ ಜ್ಞಾನ
ಹೆಣ್ಣೋ ಗಂಡೋ ನಾಸ್ತಿ ನಾಥಾ? ಎಂದು

---

೧. ಅಕ್ಕಮಹಾದೇವಿ ವಚನಗಳು, ಸಂ. ರಹಮತ್ ತರೀಕೆರೆ, ಪು. ೬೭
೨. ಶಿವಶರಣೆಯ ವಚನ ಸಂಪುಟ, ಡಾ. ವೀರಣ್ಣ ರಾಜೂರ, ವ. ೨೬೪ ಪು. ೮೨

ಗಂಡು–ಹೆಣ್ಣನ್ನು ದೈಹಿ ರಚನೆಯಿಂದ ಮೇಲೂ ಕೀಳು ಎಂದು ನಿರ್ಧರಿಸುವುದಲ್ಲ. ಅವರಿಬ್ಬರಲ್ಲಿರುವ ಜ್ಞಾನದ ಪರಿಧಿಯಿಂದ ಅವರು ಮೇಲೋ ಕೀಳೋ ಎಂಬುದು ಮುಖ್ಯವಾಗುತ್ತದೆ. ಹೆಣ್ಣು ಗಂಡು ಅನುಭಾವಿಕ ಸಾಧಕಿಯಾಗಿ ವಿಜಯಿಯಾದಾಗ ಆಕೆಯನ್ನು ಕೀಳು ಎಂದು ಕರೆಯುವುದು ಎಷ್ಟರಮಟ್ಟಿಗೆ ಸರಿ ಎಂಬುದು ಗೊಗ್ಗವ್ವೆಯ ಪ್ರಶ್ನೆ. ಗಂಡು – ಹೆಣ್ಣಿನ ಲಿಂಗವಿಶಿಷ್ಟತೆ ಸೂಚಿಸುವ ಜೈವಿಕ ಲಕ್ಷಣಗಳು ದೇಹರಚನೆಗೆ ಮಾತ್ರ ಸೀಮಿತ ಎನ್ನುತ್ತಾಳೆ. ಅರಿವಿಗೆ ಯಾವುದೇ ಲಿಂಗ–ಜಾತಿ ಭೇದಗಳಿಲ್ಲ.

ಉರಿಲಿಂಗಪೆದ್ದಳ ಪತ್ನಿ ಕಾಳವ್ವೆ ಸ್ತ್ರೀಯಾಗಿ ಪುರುಷನನ್ನೂ, ಪುರುಷನ ಅಂತಃಸತ್ವದ ಮೌಲಿಕತೆಯಲ್ಲಿ ತುಂಬಾ ತೀಕ್ಷ್ಣವಾಗಿ ವಿಮರ್ಶಿಸಿದ್ದಾಳೆ. ಆಕೆಯ ವಚನವೊಂದು ಹೀಗೆ ಹೇಳಿದೆ.

ಭಾಗ್ಯವುಳ್ಳ ಪುರುಷರಿಗೆ ಕಾಮಧೇನು
ಕಾಮಿಸಿದುದನೀವುದಯ್ಯಾ
ನಿರ್ಭಾಗ್ಯ ಪುರುಷಗೆ ಕಾಮಧೇನು
ತುಡುಗುಣಿಯಾಗಿ ತೋರುವುದಯ್ಯಾ
ಸತ್ಯಪುರುಷರಿಗೆ ಕಲ್ಪವೃಕ್ಷ
ಕಲ್ಪಿಸಿದುದನೀವುದಯ್ಯಾ
ಅಸತ್ಯಪುರುಷಗೆ ಕಲ್ಪವೃಕ್ಷ
ಬೊಬ್ಬುಳಿಯಾಗಿ ತೋರುವುದಯ್ಯಾ
ಧರ್ಮಪುರುಷರಿಗೆ ಚಿಂತಾಮಣಿ
ಗಾಜಿನಮಣಿಯಾಗಿ ತೋರುವುದಯ್ಯಾ
ಶ್ರೀಗುರು ಕಾರುಣ್ಯವುಳ್ಳ ಸದ್ಭಕ್ತರಿಗೆ
ಜಂಗಮಲಿಂಗವಾಗಿ ತೋರುವುದಯ್ಯಾ
ಭಕ್ತನಲ್ಲದ ಪಾಪಿಷ್ಠರಿಗೆ ಜಂಗಮಲಿಂಗ
ಮಾನವನಾಗಿ ತೋರುವುದಯ್ಯಾ
ಉರಿಲಿಂಗಪೆದ್ದಗಳರಸು ಬಲ್ಲನವ್ವಾ[೧]

ವೈದಿಕ ಮೌಲ್ಯ ವ್ಯವಸ್ಥೆಯ ಸ್ತ್ರೀಪುರುಷರ ನಡುವಿನ ಲಿಂಗಾಧಾರಿತ ಸಂಬಂಧದ ಬಗೆಗೆ, ಹಾಗೂ ವರ್ಣಮೂಲದ ಸಾಮಾಜಿಕ ಶ್ರೇಣೀಯಾದ ವರ್ಣಗಳ

೧. ಶಿವಶರಣೆಯ ವಚನ ಸಂಪುಟ, ಡಾ. ವೀರಣ್ಣ ರಾಜೂರ, ವ. ೨೬೪ ಪು. ೮೨

ನಡುವಿನ ಸಂಬಂಧದ ಬಗೆಗೆ ಕಾಳವ್ವೆ ಹಲವು ಪ್ರಶ್ನೆಗಳನ್ನು ಎತ್ತುತ್ತಾಳೆ. ಆಧ್ಯಾತ್ಮಿಕವಾಗಿ ಸಾಧಿಸಿದ ಮಾರ್ಗ ತುಂಬಾ ದೂರದ್ದಾಗಿದೆ. ಹಾಗೆಯೇ ಸಾಮಾಜಿಕ ಜಾತಿವರ್ಣಗಳ ವ್ಯವಸ್ಥೆಯ ಬಗೆಗೂ ತಮ್ಮದೇ ಚಿಂತನೆಗಳನ್ನು ಶರಣೆಯರು ಹೊಂದಿದ್ದರೆಂಬುದು ಇಂತಹ ವಚನಗಳಿಂದ ಸಾಬೀತಾಗುತ್ತದೆ. ಸತ್ಯಪುರುಷನಾಗಿ ಕಲ್ಪವೃಕ್ಷದಂತೆ ಪಡೆಯಬೇಕು. ಚಿಂತಿಸಿದುದ್ದನ್ನು ಪಡೆಯಬೇಕು. ಆ ಮೂಲಕ ಸದ್ಭಕ್ತನಾಗಿ ಜಂಗಮವೇ ಲಿಂಗವಾಗಿ ಕಾಣುವ ದೃಷ್ಟಿಬೇಕು. ಭಕ್ತನಲ್ಲದ ಪಾಪಿಷ್ಠಂಗೆ ಜಂಗಮಲಿಂಗಗಳು ಮಾನವಾಗಿ ಕಾಣುವುದು. ಇಂತಹ ಕೀಳು ಸ್ವಭಾವ ಬಿಟ್ಟು ಉನ್ನತ ಆಲೋಚನೆಯನ್ನು ಪುರುಷ ಗಳಿಸಬೇಕಿದೆ ಎಂದು ಕಾಳವ್ವೆ ಹೇಳುತ್ತಾಳೆ.

ಶರಣರ ಪ್ರಭಾವದಲ್ಲಿ ತನ್ನ ಆಧ್ಯಾತ್ಮಿಕ ವ್ಯಕ್ತಿತ್ವವನ್ನು ರೂಪಿಸಿಕೊಂಡವಳು ಕದಿರ ರೆಮ್ಮವ್ವೆ. ಲೋಕದ ಗಂಡರ ಬಗೆಗೆ ಆಕೆ ತನ್ನ ವಚನವೊಂದರಲ್ಲಿ ಈ ಕೆಳಕಂಡಂತೆ ಹೇಳಿದ್ದಾಳೆ.

ಎಲ್ಲರ ಗಂಡಂದಿರು ಪರದಳವಿಭಾಡರು
ಎನ್ನ ಗಂಡ ಮನದಳವಿಭಾಡ
ಎಲ್ಲರ ಗಂಡಂದಿರು ಗಜವೇಂಟೆಕಾರರು
ಎನ್ನ ಗಂಡ ಮನವೇಂಟೆಕಾರ
ಎಲ್ಲರ ಗಂಡಂದಿರು ತಂದಿಕ್ಕಿಸಿಕೊಂಬರು
ಎನ್ನಗಂಡ ತಾರದೆ ಇಕ್ಕಿಸಿಕೊಂಬ
ಎಲ್ಲರ ಗಂಡಂದಿರಿಗೆ ಮೂರು
ಎನ್ನ ಗಂಡಂಗೆ ಅದೊಂದೆ
ಅದೊಂದು ಸಂದೇಹ ಕದಿರಕೆಮ್ಮಿಯೊಡೆಯ ಗುಮ್ಮೇಶ್ವರಾ'[೧]

ರೆಮ್ಮವ್ವೆ ಪತಿಯ ಪ್ರತೀಕದಲ್ಲಿ ಪರಮಾತ್ಮನ ಅನುಸಂಧಾನ ನಡೆಸಿದ್ದಾಳೆ. ಇಲ್ಲಿ ಲೋಕದ ಗಂಡರ ಪ್ರಾಕೃತಿಕ ಮಿತಿಗಳ ಸೂಚನೆ ಇದೆ. ಇವಳ ದೈವಿ ಗಂಡನ ಅತಿಮಾನವತೆಯ ವಿವರಣೆ ಇದೆ. ಲೋಕದ ಗಂಡರನ್ನು ಈಕೆ ಇಲ್ಲಿ ನಿರಾಕರಿಸು-ತ್ತಿರುವುದು ಸ್ಪಷ್ಟ. ಅಕ್ಕಮಹಾದೇವಿಯೂ ಕೂಡ ಲೋಕದ ಗಂಡನಲ್ಲಿ ನಿರಾಕರಿಸಿದವಳೆ. ರೆಮ್ಮವ್ವೆ ತನ್ನ ಈ ವಚನದಲ್ಲಿ ಸರ್ವತಂತ್ರ ಸ್ವತಂತ್ರವಾದ ಸೀಮಾತೀತವಾದ ತತ್ತ್ವವನ್ನು ಸಾಂಕೇತಿಸಿ ವರ್ಣಿಸಿದ್ದಾಳೆ. ಇವಳ ಗಂಡ ಮನವೇಂಟೆಕಾರ, ಈತ ಗಜವೇಂಟೆಕಾರನಲ್ಲ ಎಂಬು ಬಹುಮುಖ್ಯ.

೧. ಶಿವಶರಣೆಯ ವಚನ ಸಂಪುಟ, ಡಾ. ವೀರಣ್ಣ ರಾಜೂರ, ವ. ೨೬೪ ಪು. ೮೨

ವಚನಕಾರ್ತಿಯರು ತಮ್ಮ ತಮ್ಮ ಹೃದಯ ಮನಸ್ಸುಗಳನ್ನು ತೆರೆದಿಟ್ಟು ಸಮಾಜಕ್ಕೆ ಬೆಳಕು ಚೆಲ್ಲಿದರು. ಅವರವರ ಮನೋಧರ್ಮಕ್ಕೆ, ನಂಬಿದ ಮೌಲ್ಯಗಳಿಗೆ, ತಾವು ಆಚರಿಸಿದ ಜೀವನ ಪದ್ಧತಿಗಳಿಗೆ ತಕ್ಕಂತೆ, ತಮ್ಮ ಜೀವನಾನುಭವಗಳಲ್ಲಿಯೇ ಅನುಭಾವಿಕ ನೆಲೆ ಕಂಡವರು ಶರಣೆಯರು. ಶೋಷಣೆಯಲ್ಲಿ ಅಂತರ್ಗತವಾದ ಕೀಳರಿಮೆಯನ್ನು ಕಿತ್ತೊಗೆಯಲು ಶ್ರಮಿಸಿದವರು. ಹೆಣ್ಣು ಆತ್ಮೋದ್ಧಾರದ ಹಾದಿಯಲ್ಲಿ ಬಹುದೊಡ್ಡ ಆತಂಕಕಾರಿಯಾದವಳು ಎಂದು ಭಾವಿಸುವರಿಗೆ ಶರಣೆಯರು ಉತ್ತರಕೊಟ್ಟಿದ್ದಾರೆ. ಅವುಗಳನ್ನು ಗಜೇಶಮಸಣಯ್ಯಗಳ ಪುಣ್ಯಸ್ತ್ರೀಯ ವಚನವೊಂದನ್ನು ಉದಾಹರಿಸಬಹುದು.

"ಹೆಣ್ಣಬಿಟ್ಟು ಲಿಂಗವನೊಲಿಸಬೇಕೆಂಬರು
ಹೆಣ್ಣಂಗೆಯೂ ಲಿಂಗಕ್ಕಯೂ ವಿರುದ್ಧವೆ?
ಮಣ್ಣು ಬಿಟ್ಟು ಲಿಂಗವನೊಲಿಸಬೇಕೆಂಬರು
ಮಣ್ಣಂಗೆಯೂ ಲಿಂಗಕ್ಕೆಯೂ ವಿರುದ್ಧವೇ
ಅಂಗವ ಬಿಟ್ಟು ಲಿಂಗವನೊಲಿಸಬೇಕೆಂಬರು
ಅಂಗಕ್ಕೆಯೂ ಲಿಮಗಕ್ಕೆಯೂ ವಿರುದ್ಧವೆ?
ಇಂದ್ರಿಯಗಳ ಬಿಟ್ಟು ಲಿಂಗವನೊಲಿಸಬೇಕೆಂಬರು
ಇಂದ್ರಿಯಂಗಳಿಗೆಯೂ ಲಿಂಗಕ್ಕೆಯೂ ವಿರುದ್ಧವೆ
ಜಗಮಬಿಟ್ಟು ಲಿಂಗವನೊಲಿಸಬೇಕೆಂಬರು
ಜಗಕ್ಕೆಯೂ ಲಿಂಗಕ್ಕೆಯೂ ವಿರುದ್ಧವೆ
ಇದು ಕಾರಣ, ಪರಂಜ್ಯೋತಿ ಪರಮಕರುಣಿ ಪರಮಶಾಂತನೆಂಬ ಲಿಂಗವು
ಕೋಪದ ಮುನಿಸನರಿದಡೆ ಕಾಣಬಹುದು, ಮರೆದಡೆ ಕಾಣಬಾರದು
ಅರಿವಿಂದ ಕಂಡೊದಗಿದ ಸುಖವು ಮಸಣಯ್ಯ ಪ್ರಿಯ ಗಜೇಶ್ವರಾ"[೧]

ಹೆಣ್ಣಿನ ಸಹವಾಸದಿಂದ ಸಾಧನೆ ಸಾಧ್ಯವಿಲ್ಲ ಎನ್ನುವವರಿಗೆ ಈಕೆ ವಿರೋಧಿಸುತ್ತಾಳೆ. ಹೆಣ್ಣನ್ನ ಬಿಟ್ಟು ದೇವರನ್ನು ಒಲಿಸಿಕೊಳ್ಳಬೇಕೆಂಬುದು ತಪ್ಪು? ಹಾಗಾದರೆ ಹೆಣ್ಣಿಗೂ ಲಿಂಗಕ್ಕೂ ವಿರುದ್ಧವೆ? ಹೆಣ್ಣು ದೇವರಿಗೆ ಅಪ್ರಿಯಳೆ? ಹೆಣ್ಣು ದೇವರನ್ನೊಲಿಸಿಕೊಳ್ಳುವಾಗ ಹೆಣ್ಣನ್ನು ಬಿಟ್ಟರೆ ಮಾತ್ರ ಸಾಧ್ಯ ಎಂಬುದು ಸರಿಯೆ? ಎಂಬ ಭಾವ ಆಕೆಯದು. ಹೆಣ್ಣು, ಮಣ್ಣು, ಅಂಗ, ಇಂದ್ರಿಯ, ಜಗ ಇವುಗಳನ್ನು ಬಿಟ್ಟ ದೇವರನ್ನು ಒಲಿಸಿಕೊಳ್ಳಬೇಕೆಂಬುದು ತಪ್ಪು. ಇವನ್ನು ಬಿಟ್ಟ ಕೋಪದ ಮುನಿಸನರಿದಡೆ ಲಿಂಗವನ್ನು ಕಾಣಬಹುದು. ಪರಮ ಕರುಣಿಯಾದ ಪರಮಶಾಂತಿಯಾದ

---

೧. ಶಿವಶರಣೆಯ ವಚನ ಸಂಪುಟ, ಸಂ. ಡಾ. ವೀರಣ್ಣ ರಾಜೂರ, ವ. ೨೬೪ ಪು. ೮೨

ದೇವರನ್ನೊಲಿಸಿಕೊಳ್ಳಲಾಗದೆ ಹೆಣ್ಣಿನ ಬಿಡದೆ ಇದು ಸಾಧ್ಯವಿಲ್ಲ ಎಂಬ ಮೂಢತನಕ್ಕೆ ವಿರೋಧಿಸುತ್ತಾಳೆ. ದಾಂಪತ್ಯ ಜೀವನದ ವಿರೋಧಿಯಾಗದೆ ಆಧ್ಯಾತ್ಮ ಸಾಧನೆ ಸಾಧಿಸಬೇಕೆಂಬ ಈಕೆಯ ಸ್ವತಂತ್ರ ಚಿಂತನೆ ಹೆಣ್ಣಿನ ಪರವಿದೆ. ಸತ್ಯಶುದ್ಧವಾದ ದಾಂಪತ್ಯ ಜೀವನವನ್ನು ಒಪ್ಪುತ್ತಾರೆ. ಗಂಡು–ಹೆಣ್ಣು ಭಿನ್ನ ಭಿನ್ನ ಧರ್ಮಾಚರಣೆಯಲ್ಲಿ ತೊಡಗುವುದು, ಭಿನ್ನ ಭಿನ್ನ ಭಕ್ತಿ, ಭಿನ್ನ ಭಿನ್ನ ಚಿಂತನೆ ಸಲ್ಲದು.

ಪತಿ ಪರಮಾತ್ಮ, ಪತಿಯ ಸೇವೆಯೇ ಪರಮಾತ್ಮನ ಸೇವೆ, ಪತಿಯ ತಪ್ಪುಗಳನ್ನು ಒಪ್ಪಿ, ಅವನ ದೌರ್ಜನ್ಯ ಸಹಿಸಿ ಕೇವಲ ಮಕ್ಕಳೆರುವುದಕ್ಕೆ ಸ್ತ್ರೀ ಸೀಮಿತ ಎಂಬ ಶತಶತಮಾನಗಳಿಂದ ಬೇರೂರಿರುವ ಅಂಶಗಳನ್ನು ಶರಣೆಯರು ಕಿತ್ತೊಗೆಯುತ್ತಾರೆ. ವ್ಯಕ್ತಿ ವಿಕಾಸಕ್ಕೆ ವಿರೋಧವಾಗಿದ್ದ ಎಲ್ಲಾ ಹಳೆಯ ನಡಾವಳಿಗಳನ್ನು ಪ್ರಶ್ನಿಸುತ್ತಾರೆ ಶರಣೆಯರು. ವಚನಕಾರ್ತಿಯರಿಗೆ ಬಲವಾದ ಆತ್ಮವಿಶ್ವಾಸವಿತ್ತು. ಸಾಮಾಜಿಕ ಪ್ರಜ್ಞೆ, ಅಭಿವ್ಯಕ್ತಿಯ ಅನಿವಾರ್ಯತೆ ಇತ್ತು. ಇಲ್ಲದಿದ್ದರೆ ಅವರಿಂದ ಇಷ್ಟು ಸ್ವತಂತ್ರ ಚಿಂತನೆಯ ವಚನಗಳ ಸೃಷ್ಟಿಯನ್ನು ನಾವು ಕಾಣಲಾಗುತ್ತಿರಲಿಲ್ಲ.

ಲಿಂಗಮ್ಮ ತನ್ನ ವಚನವೊಂದರಲ್ಲಿ ಅಪ್ಪಣ್ಣನಂಥ ಪತಿಯನ್ನು ಪಡೆದದರ ಮಹತ್ವವನ್ನು ಹೀಗೆ ಹೇಳಿದ್ದಾಳೆ.

'ಏನೇನು ಇಲ್ಲದಾಗ ನೀವಿಲ್ಲದಿದ್ದಡೆ ನಾನಾಗಬಲ್ಲನೆ ಅಯ್ಯ?
ಆದಿ ಅನಾದಿ ಇಲ್ಲದಂದು ನೀವಿಲ್ಲದಿದ್ದಡೆ ನಾನಾಗಬಲ್ಲನೆ ಅಯ್ಯಾ?
ಮುಳುಗಿ ಹೋದವಳ ತೆಗೆದುಕೊಂಡು
ನಿಮ್ಮ ತೊತಿನ ಪಡಿದೊತ್ತಿನ ಮಗಳೆಂದು
ರಕ್ಷಣೆಯ ಮಾಡಿದ ಶಿಶುವಾದ ಕಾರಣ
ಹಡಪದಪ್ಪಣ್ಣನೆ ಎನ್ನ ಕರಸ್ಥಲಕ್ಕೆ ಪ್ರಾಣವಾಗಿ ಬಂದು ಮೂರ್ತಗೊಂಡು
ಆ ಕರಸ್ಥಲದ ಲಿಂಗವಿವರ್ಚಿಸಿ ಪೂಜಿಸಿ
ವರವ ಬೇಡಿದಡೆ ತನುವ ತೋರಿದನು
ಆ ತಮವಿಡಿದು ಮಹಾಘನದ ಕಂಡೆ
ಆನವಿಡಿದು ಮನವ ನಿಲಿಸಿರೆ
ಮನವ ನಿಲಿಸಿ ನೋಡುವನ್ನಕ್ಕ ಪ್ರಾಣದ ನೆಲೆಯನರಿದೆ
ಪ್ರಣವವನೊಂದುಗೂಡಿದೆ
ಕಾಣಬಾರದ ಕದಳಿಯನೆ ಹೊಕ್ಕು ನೂನ ಕದಳಿಯ ದಾಂಟಿದೆ
ಜ್ಞಾನ ಜ್ಯೋತಿಯ ಕಂಡೆ
ತಾನಂತಾನಾಗಿಪ್ಪ ಮಹಾಬೆಳಕಿನಲ್ಲಿ ಓಲಾಡಿ ಸುಖಿಯಾದೆನಯ್ಯಾ

ಚೆನ್ನಮಲ್ಲೇಶ್ವರನ ಕರುಣದ ಶಿಶುವಾದ ಕಾರಣದಿಂದ
ಅಪುಣ್ಣಪ್ರಿಯ ಚೆನ್ನಬಸವಣ್ಣ[1]

ಇಲ್ಲಿ ಲಿಂಗಮ್ಮ ತನ್ನ ಪತಿಯಿಂದ ಪಡೆದ ಆತ್ಮಸುಖದ ಮಹೋನ್ನತ ಸ್ಥಿತಿಯನ್ನು ವಿವರಿಸಿದ್ದಾಳೆ. ಈ ವಚನ ಲಿಂಗಮ್ಮನ ಆತ್ಮಕಥೆಯಂತಿದೆ. ಚೆನ್ನಮಲ್ಲೇಶ್ವರನೆಂಬ ಶಿವಪಥವನ್ನು ಹಿಡಿದಿದ್ದರಿಂದ, ಶಿವನ ಕುರಿತಾದ ವ್ರತ ಮಾಡಿದ್ದರಿಂದ 'ಜ್ಞಾನಜ್ಯೋತಿಯ' ಕಾಣಲು ಸಾಧ್ಯವಾಯಿತು ಎನ್ನುತ್ತಾಳೆ. ಇಲ್ಲಿ ಬರುವ 'ನಾನು' ಮತ್ತು 'ಅವನು' ಎಂಬಲ್ಲಿ ನಾನು ಎಂದರೆ ಲಿಂಗವ್ವನು ಮತ್ತು ಅವನು ಎಂದರೆ ಶಿವನು ಎನ್ನಬಹುದು. ಅಂದರೆ "ಅವನು' ನೀಡಿದ ಜ್ಞಾನಜ್ಯೋತಿಯಿಂದಾಗಿ ಎಲ್ಲೋ ಮುಳುಗಿ ಹೋಗಿದ್ದ ನನ್ನನ್ನು ತೊತ್ತಿನ ಪಡಿದೊತ್ತಿನ ಮಗಳಾಗಿದ್ದ ನನಗೆ ಶಿವಶ್ರೇಷ್ಠ ಧ್ಯಾನಿಯೆನಿಸಿದ 'ಹಡಪದಪ್ಪಣ್ಣನೆ' ಎನ್ನ ಕರಸ್ಥಾಲಕ್ಕೆ ಲಿಂಗವಾಗಿ ಬಂದು ನೆಲೆಗೊಂಡನು" ಎಂದು ಘೋಷಿಸಿದಳು. ತನ್ಮೂಲಕ ತಾನು ಪಡೆದ ಪತಿ ಸುಖವನ್ನೂ, ಆ ಪತಿಸುಖವು ಕೇವಲ ಲೌಕಿಕ ಸುಖ ಮಾತ್ರವಾಗಿಲ್ಲ. ಅದು ಪಾರಪಾರ್ಥಿಕ ಪರಮಸುಖದ ನೆಲೆಯನ್ನು ತಾನು ತಲುಪಿದಳು ಎಂದು ಹೇಳುತ್ತಾಳೆ. ಇಲ್ಲಿ ನಿಮಗೆ ಲಿಂಗವ್ವನ ನಿಷ್ಕಲ್ಮಷ ಮತ್ತು ನಿಷ್ಪಕ್ಷಪಾತ ಮನಸ್ಥಿತಿಯನ್ನು ಕಾಣಬಹುದಾಗಿದೆ.

ವಚನಕಾರ್ತಿಯರಿಗೆ ಪುರುಷ ಸಾಧನೆಯ ಬಗೆಗೂ ಗೌರವವಿದೆ. ಪುರುಷನ ಸಾಧನೆಗೆ ಬೆನ್ನೆಲುಬಾಗಿ ನಿಂತರು. ಮುನ್ನಡೆಸಿದರು ಎಚ್ಚರಿಸಿದರು, ಸರಿಕಾಣದಾಗ ಧಿಕ್ಕರಿಸಿದರು. ಅಕ್ಕಮಹಾದೇವಿಯ ವಚನವೊಂದು ಹೀಗಿದೆ:

ಆಳುತನದ ಮಾತನೇರಿಸಿ ನುಡಿದಡೆ
ಆಗಳೆ ಕಟ್ಟಿದೆನು ಗಂಡುಗಚ್ಚೆಯ
ತಿ ಗುರನೇರಿಸಿ ತಿಲಕವನ್ನಿಟ್ಟು
ಕೈದುವ ಕೊಂಡು ಕಳನೇರಿದ ಬಳಿಕ
ಕಟ್ಟಿದ ನಿರಿ ಸಡಿಲಿದಡೆ ಇನ್ನು ನಿಮ್ಮಾಣೆ
ಕಾಣಾ ಚೆನ್ನಮಲ್ಲಿಕಾರ್ಜುನಾ[2]

ಸ್ತ್ರೀಪುರುಷರಿಬ್ಬರಿಗೂ ಸಾಧನೆಯನ್ನು ಪೌರುಷ ಪ್ರಧಾನ ಎಂದು ಅಕ್ಕ ಹೇಳುತ್ತಾಳೆ. ಪೌರುಷ ಕೇವಲ ಗಂಡಿಗಾಗಿ ಬಳಸಿದ ಪದವಾಗಿರದೆ ಸಾಧನೆಗೆ ಬೇಕಾದ ಸಮಗ್ರತೆಯ ದ್ಯೋತಕ. ಶರಣೆಯರು ಸ್ತ್ರೀಯರಾಗಿದ್ದರೂ ಸಾಧನೆಗೆ ವೀರಭಾವದ

---

೧. ಶಿವಶರಣೆಯ ವಚನ ಸಂಪುಟ-೫, ಸಂ. ಡಾ. ವೀರಣ್ಣ ರಾಜೂರ, ವ. ೨೬೪ ಪು. ೮೨
೨. ಅದೇ, ವ. ೫೯, ಪು. ೨೪

ಅಗತ್ಯವನ್ನು ಮನಗಂಡಿದ್ದಾರೆ. ಶರಣೆಯರು ತಮ್ಮತನವನ್ನು ಉಳಿಸಿಕೊಂಡು ತಮ್ಮ ಹೆಜ್ಜೆಗುರುತುಗಳನ್ನು ಅಚ್ಚೊತ್ತಿದ್ದಾರೆ ಎಂಬುದಕ್ಕೆ ಇಂತಹ ವಚನಗಳೇ ಸಾಕ್ಷಿ. ಗಂಡುಗಚ್ಚೆಯ ಕಟ್ಟಿ, ತಿಲಕವಿಟ್ಟು ಯುದ್ಧಕ್ಕೆ ಸಿದ್ಧಳಾಗುವಂತೆ ಪುರುಷನಿಗೆ ಕಮ್ಮಿಯಿಲ್ಲದ ಸ್ವಾಭಿಮಾನವನ್ನು ಶರಣೆಯರು ತೋರಿದ್ದಾರೆ. ಹೆಣ್ಣು ಪುರುಷನ ಹಲವು ಮುಖಗಳಲ್ಲಿ ಹಲವು ಸಂಬಂಧಗಳಲ್ಲಿ ಜೊತೆಯಾಗಿ ನಿಂತಿದ್ದಾಳೆ, ಮುನ್ನಡೆಸಿದ್ದಾಳೆ. ಮಗಳಾಗಿ, ಹೆಂಡತಿಯಾಗಿ, ತಾಯಿಯಾಗಿ ಸೋದರಿಯಾಗಿ, ಸ್ನೇಹಿತೆಯಾಗಿ ಹೀಗೆ ಹಲವು ಮುಖಗಳನ್ನು ಹೆಣ್ಣು ಗಂಡಿಗೆ ಪ್ರೇರಕ ಶಕ್ತಿಯಾಗಿದ್ದಾಳೆ.

ಉಪಸಂಹಾರ

ಕರ್ನಾಟಕದ ಧಾರ್ಮಿಕ ಮತ್ತು ಸಾಮಾಜಿಕ ಚರಿತ್ರೆಯಲ್ಲಿ ಮಾನವೀಯತೆ ಮತ್ತು ವೈಚಾರಿಕತೆಯೊಂದಿಗೆ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ಕ್ರಾಂತಿಕಾರಕ ತಿರುವು ಒದಗಿಸಿದ ಕಾಲ ಹನ್ನೆರಡನೆಯ ಶತಮಾನದ ಶರಣಯುಗ. ಜಾತಿ ವ್ಯವಸ್ಥೆ ಮತ್ತು ಲಿಂಗ ತಾರತಮ್ಯದ ಅಮಾನವೀಯ ವರ್ತನೆಗಳಿಂದ ಹದಗೆಟ್ಟಿದ್ದ ಮಾನವ ಸಂಬಂಧಗಳು. ಈ ಕಾಲಘಟ್ಟದಲ್ಲಿ ಸಾಮರಸ್ಯ ಮತ್ತು ಸಹಜೀವನದ ಆರೋಗ್ಯಕಾರಿ ಸಮಾಜದ ನಿರ್ಮಾಣಕ್ಕೆ ಅಡಿಗಲ್ಲಾಯಿತು. ಶರಣ ಚಳವಳಿ ಬೌದ್ಧಿಕವಾಗಿ ವಚನ-ರಚನೆಗೆ ಸೀಮಿತವಾಗದೆ, ವಚನಗಳ ಮೂಲಕ ಸಮಾಜವನ್ನು ಎಚ್ಚರಿಸುವ ಕೆಲಸ ಮಾಡಿತು. ಮೇಲು-ಕೀಳು, ಬಡವ-ಬಲ್ಲಿದ, ಗಂಡು-ಹೆಣ್ಣು ಈ ಯಾವ ವ್ಯತ್ಯಾಸ ವಿಲ್ಲದೆ ಸಮಾನವಾಗಿ ಎಲ್ಲರೂ ಸ್ವತಂತ್ರವಾಗಿ ತಮ್ಮ ಸ್ವಾನುಭವದ ಅಭಿವ್ಯಕ್ತಿಯನ್ನು ಪ್ರಕಟಪಡಿಸಿದರು.

ಶರಣೆಯರ ವಚನಗಳನ್ನು ಒಳಹೊಕ್ಕು ನೋಡಿದಷ್ಟು ಹೊಸ ಹೊಸ ಒಳಹುಗಳು ಕಂಡುಬರುತ್ತವೆ. "ನಾಮದಲ್ಲಿ ಹೆಂಗೂಸೆಂಬ ಹೆಸರಾದಡೇನು ಭಾವಿಸಲು ಗಂಡುರೂಪು ನೋಡಾ" ಎಂಬ ಅಕ್ಕನ ಮಾತಿನಂತೆ ಸ್ತ್ರೀ-ಪುರುಷ ಸಮಾನತೆಯ ಧನಿ ಎತ್ತಿದರು ಶರಣೆಯರು. ವಾಸ್ತವದ ನೆಲೆಗಟ್ಟಿನಲ್ಲಿ ನಿಂತು ನವಸಮಾಜ ಕಟ್ಟಬಯಸಿದ ಇವರ ಆತ್ಮಾಭಿಮನದ ಮಾತುಗಳಲ್ಲಿ ಅವರ ಅಭಿವ್ಯಕ್ತಿ ಸ್ವಾತಂತ್ರ್ಯದ ಹಂಬಲವನ್ನು ಕಾಣಬಹುದು. ಯಾರ ಅಧೀನತೆಯ ಭಯವಿಲ್ಲದೆ ವ್ಯಕ್ತಿ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯದ ಆಶಯಗಳನ್ನು ತಮ್ಮ ವಚನಗಳಲ್ಲಿ ವ್ಯಕ್ತಪಡಿಸಿದ್ದಾರೆ. ವ್ಯಕ್ತಿ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಬಾರದೆಂದು ಬಯಸಿದ ಶರಣೆಯರ ವಚನಗಳಲ್ಲಿ ಸಾಮಾಜಿಕವಾಗಿ, ಧಾರ್ಮಿಕವಾಗಿ, ಲಿಂಗಾಧಾರಿತವಾಗಿ ತಮ್ಮದೇ ಆದ ಸ್ವತಂತ್ರ ಚಿಂತನೆಗಳನ್ನು ಪ್ರಕಟಪಡಿಸಿದ್ದಾರೆ ಎಂಬುದು ಪ್ರಸ್ತುತ ನಿಂಬಂಧದಲ್ಲಿ ವಿಶ್ಲೇಷಿಸಲಾಗಿದೆ.

ಶರಣಕ್ರಾಂತಿಯ ಸಂದರ್ಭದಲ್ಲಿ ಸ್ತ್ರೀ ಜನಾಂಗವೂ ವೈಚಾರಿಕವಾಗಿ ಚಿಂತಿಸಿ ಶರಣರಿಗೆ ಸ್ಫೂರ್ತಿಯಾಗಿ ನಿರ್ವಹಿಸುತ್ತಾ ಬಂದರು. ಉತ್ತಮ ಸಮಾಜ ನಿರ್ಮಾಣಕ್ಕೆ. ಶ್ರಮಿಸಿದರು. ವಚನ ಸಾಹಿತ್ಯ ಸಂದರ್ಭದಲ್ಲಿ ಸುಮಾರು ೩೩ಕ್ಕೂ ಹೆಚ್ಚು ಜನ ವಚನಕಾರ್ತಿಯರು ತಮ್ಮ ವಿಚಾರಗಳನ್ನು, ಅನುಭವಗಳನ್ನು ಲೋಕದ ಮುಂದೆ ತೆರೆದಿಟ್ಟರು. ಕೆಲವು ಶರಣೆಯರು ತಮ್ಮ ಅನುಭಾವ ಸಾಧನೆಗಳ ಮೂಲಕ ವ್ಯಕ್ತಿ ವೈಶಿಷ್ಟ್ಯತೆಗಳನ್ನು ಮೆರೆದು ಸಾಹಿತ್ಯ ಜಗತ್ತಿಗೆ ವಿಶೇಷ ಕೊಡುಗೆ ನೀಡಿದ್ದಾರೆ. ಇನ್ನು ಕೆಲವರು ತಮ್ಮತನಗಳನ್ನು ಕುರಿತು ಸ್ತ್ರೀ ಬದುಕಿನ ಅಂತರಂಗಗಳ ಆಲೋಚನೆಗೆ

ಅವಕಾಶ ಮಾಡಿಕೊಟ್ಟರು. ಇನ್ನೂ ಕೆಲವರು ಸಮಾಜ ಜನ, ಲೋಕಾರೂಢಿ ಧಾರ್ಮಿಕ ಡಂಭಿಕತೆಗಳನ್ನು ಖಂಡಿಸಿದರು.

ಸ್ತ್ರೀ–ಪುರುಷ ಎಂಬ ಭೇದಭಾವ ಆತ್ಮೋದ್ಧಾರಕ್ಕೆ ಅನಗತ್ಯ. ಹೆಣ್ಣಿಗೂ ಗಂಡಿನಂತೆ ತನ್ನ ವ್ಯಕ್ತಿತ್ವವನ್ನು ಉನ್ನತೀಕರಿಸಿಕೊಳ್ಳುವ ಸಾಧಿಸುವ ಅಧಿಕಾರವಿದೆ ಜೊತೆಗೆ ಆಕೆ ತನ್ನದೇ ಆದ ರೀತಿಯಲ್ಲಿ ಸಮಾಜವನ್ನು ಕಾಣಬಲ್ಲಳು. ತನ್ನ ಸ್ವಂತ ಚಿಂತನೆಗಳು ಅನಾವರಣಗೊಂಡವು. ಸ್ವಾವಲಂಬನೆ ಮತ್ತು ಸ್ವಾಭಿಮಾನಗಳಿಂದ ಕೂಡಿದ ಸ್ವತಂತ್ರ ಚಿಂತನೆಗಳನ್ನು ಅವರ ವಚನಗಳನ್ನು ಕಾಣಬಹುದಾಗಿದೆ. ಹಾಗೆಯೇ ಹೆಣ್ಣನ್ನು ಸ್ವತಂತ್ರ ವ್ಯಕ್ತಿಗಳಾಗಿ ಮನ್ನಿಸಿದ ಶರಣರ ವೈಚಾರಿಕತೆಯನ್ನು ಗಮನಿಸಬಹುದು.

ಶರಣೆಯರು ಜನಪದ ಕಾಳಜಿಯನ್ನು ತೋರಿದರು. ಅದಕ್ಕೆ ಸೃಜನಶೀಲವಾಗಿ ಸ್ಪಂದಿಸಿದರು. ತಾವು ನಂಬಿದ ಮೌಲ್ಯಗಳ ಬಗೆಗೆ ಸ್ಪಷ್ಟ ನಿಲವು ಹೊಂದಿದ್ದಾರೆ. ಹಾಗೆಯೇ ದಿಟ್ಟತನದ ಪ್ರತಿಕ್ರಿಯೆ ತೋರಿದ್ದಾರೆ. ಸತ್ಯಕ್ಕ, ಗೊಗ್ಗವ್ವೆ, ಉರಿಲಿಂಗಪೆದ್ದಿಗಳ ಹೆಂಡತಿ ಕಾಳವ್ವೆ, ಗಜೇಶಮಸಣಯ್ಯಗಳ ಪತ್ನಿ ಹಡಪದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ, ಸೂಳೆ ಸಂಕವ್ವೆ ಮೊದಲಾದ ಅನೇಕ ಶರಣೆಯರ ವಚನಗಳಲ್ಲಿ ದಟ್ಟವಾದ ಸಾಮಾಜಿಕ ಪ್ರಜ್ಞೆ ಜನಪದ ಆಲೋಚನೆಗಳು ಕಂಡುಬರುತ್ತವೆ. ಸತ್ಯಶುದ್ಧ ಕಾಯಕವನ್ನು ಗೌರವಿಸಿ, ಮೋಸವಂಚನೆಗಳನ್ನು ವಿರೋಧಿಸುವ ಸ್ವತಂತ್ರ ಅಲೋಚನೆಗಳು ವ್ಯಕ್ತವಾಗಿವೆ.

ವಚನಕಾರ್ತಿಯರು ತಮ್ಮತನವನ್ನು ಉಳಿಸಿಕೊಂಡು, ತಮ್ಮದೇ ಆದ ಸ್ವತಂತ್ರ ಚಿಂತನೆಗಳನ್ನು ವಚನಗಳ ಮೂಲಕ ಅನಾವರಣಗೊಳಿಸಿದರು ಎಂಬುದನ್ನು ಪ್ರಸ್ತುತ ನಿಂಬಂಧದಲ್ಲಿ ಗಮನಿಸಲಾಗಿದೆ. ಶರಣೆಯರು ಯಾರ ಅಧೀನಕ್ಕೂ ಒಳಗಾಗದೇ ತಮ್ಮದೇ ಆದ ಸ್ವತಂತ್ರ ಚಿಂತನೆಗಳನ್ನು ಅಬಿವ್ಯಕ್ತ ಪಡಿಸಿದರು. ತಮ್ಮ ಸ್ವಾಭಿಮಾನ ಬಿಡದೆ ವೃತ್ತಿಗೌರವ ಉಳಿಸಿಕೊಂಡು ಎಲ್ಲರೂ ಒಮ್ಮತದಿಂದ ನವ ಸಮಾಜದ ನಿರ್ಮಾಣದಂತಹ ಪವಿತ್ರ ಕಾರ್ಯದಲ್ಲಿ ತೊಡಗಿದರು. ಲೌಕಿಕ ಮತ್ತು ಪಾರಮಾಥಿಕ ಎರಡೂ ಕ್ಷೇತ್ರಗಳಲ್ಲಿ ಸಾಧನೆಗೈದರು. ಶರಣೆಯರು ಸಾಮಾಜಿಕವಾಗಿ, ಧಾಮಿಕವಾಗಿ ಮತ್ತು ಲಿಂಗಾಧಾರಿತವಾಗಿ ಯಾರ ಅಧೀನತೆಯ ಭಯವಿಲ್ಲದೆ ಯಾವ ನಿರ್ಬಂಧವಿಲ್ಲದೆ ತಮ್ಮದೇ ಆದ ಸ್ವತಂತ್ರ ಚಿಂತನೆಗಳನ್ನು ವಚನಗಳ ಮೂಲಕ ಮುಕ್ತವಾಗಿ ಅಭಿವ್ಯಕ್ತಿಸಿದ್ದು ವಿಶೇಷವಾದದ್ದು. ಹೆಣ್ಣಿಗೆ ಸ್ವಾತಂತ್ರ್ಯವೇ ಇಲ್ಲ ಎಂಬ ಹಿಂದಿನ ಕಲದ ಕಟ್ಟುಪಾಡುಗಳನ್ನು ಮುರಿದು ಮುನ್ನುಗ್ಗಿ ತಮ್ಮದೇ ರೀತಿಯಲ್ಲಿ ಪ್ರತಿಭಟಿಸಿ ವ್ಯವಸ್ಥೆಯ ಮುಂಚೂಣಿಗೆ ಬಂದ ಶರಣೆಯರ ಸ್ವಾತಂತ್ರ್ಯ ಪ್ರಜ್ಞೆಯನ್ನು ಅವರ ಕೆಲವು ವಚನಗಳ ಹಿನ್ನೆಲಯಲ್ಲಿ ವಿಶ್ಲೇಷಿಸಲು ಯತ್ನಿಸಲಾಗಿದೆ. ಆತ್ಮ ಸಂಗಾತಿಯಾಗಿ ದೇವರನ್ನು ಕಾಣುವ ಅಕ್ಕನ ಪರಿ, ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವನ ಸೆಳತ ಆತನ ಬಗೆಗಿನ ಕನಸುಗಳು, ಸೀಮೆಯಿಲ್ಲದ ನಿಸ್ಸೀಮ ಗಂಡನ ಆಯ್ಕೆ ಕದಿರೆಮ್ಮವ್ವೆಯ ನ ತಿರುಹುವ

ರಾಟೆಯ ಕುಲಜಾತಿಯ ಕೇಳಿರಣ್ಣಾ ಎಂಬ ಮಾತು, ತನು ಬತ್ತಲೆಯಾದಡೇನು? ಮನ ಬತ್ತಲೆಯಾಗದನ್ನಕ್ಕ ಎಂಬ ಗುಡ್ಡವ್ವೆಯರ ಜಾತೀಯತೆಯ ವಿರುದ್ಧದ ಧ್ವನಿ, 'ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ?' ಎಂದು ಪ್ರಶ್ನಿಸುವ ಲಕ್ಕಮ್ಮನ ಧೈರ್ಯ, 'ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೇ? ಎಂಬ ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀಯ ಲಿಂಗಬೇಧ ರಹಿತವಾದ ಸ್ವತಂತ್ರ ಚಿಂತನೆ ಈ ಮುಂತಾದ ಹಲವು ಶರಣೆಯರ ವಚನಗಳಲ್ಲಿ ಸಮಾಜಿಕ, ಧಾರ್ಮಿಕ ಮತ್ತು ಲಿಂಗಾಧಾರಿತವಾದ ಸ್ವಾತಂತ್ರ್ಯ ಚಿಂತನೆಗಳು ಅಭಿವ್ಯಕ್ತ ವಾಗಿರುವುದನ್ನು ಈ ನಿಬಂಧದಲ್ಲಿ ಕೆಲವು ಪ್ರಾತಿನಿಧಿಕ ವಚನಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಶರಣ ಸಮೂಹದಲ್ಲಿ ವಚನಕಾರ್ತಿಯರು ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಅಚ್ಚೊತ್ತಿದ್ದಾರೆ. ಹನ್ನೆರಡನೆಯ ಶತಮಾನದಲ್ಲಿ ಸ್ತ್ರೀ ಎಲ್ಲಾ ಕ್ಷೇತ್ರದಲ್ಲೂ ಸಮಪಾಲು ಪಡೆಯಲು ಹೋರಾಟ ನಡೆಸಿ ಗೆದ್ದಳು. ಇಂದು ಸಹ ಹೆಣ್ಣು ಅಸಮಾನತೆಯ ವಿರುದ್ಧ ಹೋರಾಟ ನಡೆಸುತ್ತಲೇ ಇದ್ದಾಳೆ. ಶರಣೆಯರ ಹೋರಾಟ ಇಂದಿನ ಸಮಾಜಿಕ ಅಸಮಾನತೆಯ ಲಿಂಗಸಮಾನತೆಯ ವಿರುದ್ಧದ ಹೋರಾಟ-ಗಾರರಿಗೆ ಸ್ಫೂರ್ತಿ ಎನ್ನಬಹುದು. ವ್ಯಕ್ತಿ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯದ ಆಶಯವನ್ನು ನಿರ್ಭಯವಾಗಿ ಅಭಿವ್ಯಕ್ತಪಡಿಸಿದರು. ವಚನಕಾರ್ತಿಯರು, ತಮ್ಮ ತಮ್ಮ ವೃತ್ತಿಯನ್ನು ಉಳಿಸಕೊಂಡು ಎಲ್ಲರೊಂದಿಗೂ ಬೆರೆಯುವ ಕೀಳಿರಮೆ ಮರೆತು ಗೌರವಯುತವಾಗಿ ಬದುಕುವ ವಾತಾವರಣವನ್ನು ನಿರ್ಮಿಸಿದ್ದು ವಿಶೇಷ, ಹೆಣ್ಣು ಕೇವಲ ತಾಯಿ, ಅರ್ಧಾಂಗಿ ಸೇವಕಿಯಲ್ಲ, ಅವಳಿಗೂ ಪುರುಷನಂತೆ ಸ್ವಂತಿಕೆ ಸ್ವಾತಂತ್ರ್ಯ ಸಮಾನತೆ ಬೇಕು. ಅವಳು ವೈಚಾರಿಕವಾಗಿ ಸಾಮಾಜಿಕವಾಗಿ, ಆಧ್ಯಾತ್ಮಿಕವಾಗಿ ಪುರುಷ ಸಮಾನವಾಗಿ ಚಿಂತಿಸಬಲ್ಲಳು ಎಂಬುದನ್ನು ಸಾಧಿಸಿ ತೋರಿದರು ಶರಣೆಯರು. ಶರಣೆಯರು ಹೆಣ್ಣಿನ ಅಂತರಂಗ ಭಾವನೆಗಳಿಗೆ ವಚನರೂಪಕೊಟ್ಟರು. ಯಾರ ಭಯವಿಲ್ಲದೆ ತಾವು ಕಂಡದ್ದನ್ನು ತಾವು ಖಂಡಸ ಬೇಕಾಗಿದ್ದನ್ನು ನೇರವಾಗಿ ಹೇಳಿದರು. ಸಂಸಾರ ತಾರತಮ್ಯ ಮುಂತಾದ ವಿಷಯ-ಗಳನ್ನು ತಮ್ಮದೇ ಆದ ರೀತಿಯಲ್ಲಿ ಸ್ವತಂತ್ರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಹನ್ನರಡನೆಯ ಶತಮಾನದಲ್ಲಿ ಎಲ್ಲಾ ಹೆಣ್ಣಿನ ಬಗೆಗೆ ಅಸ್ಪೃಶ್ಯ ಭಾವನೆ ಯಿರಲಿಲ್ಲ. ಸುಮಾರು ೩೩ ಜನ ವಚನಕಾರ್ತಿಯರಲ್ಲಿ ಬಹುತೇಕವಾಗಿ ಕೆಳಜಾತಿಗೆ ಸೇರಿದ್ದರೆಂಬುದೇ ಸಮಾನತೆಯ ಅಂದಿನ ಅವಕಾಶಗಳ ಬಗೆಗೆ ತಿಳಿಸುತ್ತದೆ. ಅಕ್ಕಮಹಾದೇವಿ ತನ್ನ ಬದುಕನ್ನು ತನಗೆ ಬೇಕಾದಂತೆ ಆರಿಸಿಕೊಳ್ಳುವ ತನಗೆ ಸರಿಕಾಣದನ್ನು ತಿರಸ್ಕರಿಸುವ ಸ್ವಾತಂತ್ರ್ಯವನ್ನು ಹೊಂದಿದ್ದಳು. ಅಕ್ಕ ಸಮಾಜದ

ಸಂಕೋಲೆಗಳನ್ನು ಧಿಕ್ಕರಿಸಿ ಪ್ರತಿಭಟಿಸಿದಳು. ತನ್ನನ್ನು ತಾನೇ ನಗ್ನಗೊಳಿಸಿಕೊಂಡದ್ದೇ ಪುರುಷಲೋಕದ ವಿರುದ್ಧ ಒಂದು ದೊಡ್ಡ ಪ್ರತಿಭಟನೆಯಾಗಿತ್ತು. ಅಕ್ಕ ಮಾತ್ರವಲ್ಲ ಉಳಿದ ವಚನಕಾರ್ತಿಯರೂ ಸಹ 'ಹೆಣ್ಣಿನ ಸ್ವಾತಂತ್ರ್ಯ ಕಸಿದುಕೊಳ್ಳುವ ಸಂದರ್ಭ ಬಂದಾಗ, ಆಕೆ ಪೂಜೆ ಮಾಡಲು ಯೋಗ್ಯಳಲ್ಲ, ಅಕೆಗೆ ಮುಕ್ತಿಯಿಲ್ಲ, ಆಕೆ ಸೇವೆಗೆ ಮಾತ್ರ ಸೀಮಿತ, ಅವಳು ಪುರುಷಾವಲಂಬಿ ಎಂಬ ಧೋರಣೆಗಳಿಗೆ ಸೆಡ್ಡು ಹೊಡೆದರು.

ಶಿವಶರಣೆಯರು ತಮ್ಮ ವಚನಗಳಲ್ಲಿ ಗುರುವಿನ ಬಗೆಗೆ, ದೈವದ ಬಗೆಗೆ, ಕಾಯಕದ ಬಗೆಗೆ ತಮ್ಮದೇ ಆದ ರೀತಿಯಲ್ಲಿ ಸ್ವತಂತ್ರ ಚಿಂತನೆಗಳನ್ನು ಹೊಂದಿದ್ದರು. ಸಾಮಜಿಕ, ಧಾರ್ಮಿಕ, ಆಧ್ಯಾತ್ಮಿಕ ಅನ್ಯಾಯದ ವಿರುದ್ಧ ಹೋರಾಡಿದರು. ಈಗಾಗಲೇ ಇದ್ದ ಶಾಸ್ತ್ರ ಕಟ್ಟುಪಾಡುಗಳನ್ನು ತಿರಸ್ಕರಿಸಿ ನವ ಸಮಾಜಿಕ ನ್ಯಾಯಕ್ಕಾಗಿ ತಮ್ಮದೇ ಆದ ಅನುಭವಗಳನ್ನು ಸ್ವತಂತ್ರವಾಗಿ ಅಭಿವ್ಯಕ್ತಿಸಿದರು. ಶರನೆಯರು ಸಾಮಾಜಿಕವಾಗಿ ಚಿಂತಿಸಿದರು. ಆಧ್ಯಾತ್ಮಿಕವಾಗಿಯೂ ಸಾಧನೆಗೈದರು. ಆದರ್ಶ ದಾಂಪತ್ಯ ಜೀವನ ನಡೆಸಿದರು. ವ್ಯವಸ್ಥೆಯ ದೋಷಗಳನ್ನು ತಿದ್ದಲು ಯತ್ನಿಸಿದರು. ಶರಣೆಯರ ಹೊಣೆಗಾರಿಕೆ, ಉನ್ನತ ಚಿಂತನೆಗಳನ್ನು ಅವರ ವಚನಗಳಿಂದ ಅರಿಯಬಹುದಾಗಿದೆ. ಸಮಾಜದಲ್ಲಿ ಅತ್ಯಂತ ಕೆಳಜಾತಿಯ ಮಹಿಳೆಯರೂ, ಪುರುಷಕೇಂದ್ರಿತ ವ್ಯವಸ್ಥೆಯಲ್ಲಿ ನಲುಗಿದ ಸ್ತ್ರೀಯರು ಧೈರ್ಯದಿಂದ ಪ್ರತಿಭಟಿಸಿ ಸ್ವಾತಂತ್ರ್ಯಾ ಹಂಬಲವನ್ನು ಅಭಿವ್ಯಕ್ತಿಸಿದ್ದು ವಿಶೇಷ.

ಮಸಣಮ್ಮ, ಕದಿರ ಕಾಯಕದ ರೇವಮ್ಮ, ರೇಚಮ್ಮ, ಸೂಳೆವೆಂಕವ್ವೆ ಈ ಮುಂತಾದ ಎಷ್ಟೋ ಜನ ವಚನಕಾರ್ತಿಯರ ಒಂದೊಂದೇ ವಚನಗಳು ಮಾತ್ರ ದೊರೆತಿದ್ದು ಇನ್ನೂ ಹಲವು ರಚನೆಗಳು ದೊರೆತಿದ್ದರೆ ಸಾಹಿತ್ಯ ಶ್ರೀಮಂತಿಕೆ ಹೆಚ್ಚುತ್ತಿತ್ತು, ಜೊತೆಗೆ ಶರಣೆಯರ ಬಗೆಗೆ ಇನ್ನೂ ಹಲವು ಅಂಶಗಳು ತಿಳಿಯುತ್ತಿತ್ತು. ಎಷ್ಟೋ ಜನರ ಒಂದೂ ವಚನಗಳೂ ಸಹ ದೊರೆಯದೆ ಇರುವ ಸಂಭವವೂ ಇದೆ. ಒಟ್ಟಾರೆಯಾಗಿ ಸಾಹಿತ್ಯದ ವಸ್ತು ವಿಷಯದ ದೃಷ್ಟಿಯಿಂದ, ಭಾಷೆಯ ಬಳಕೆಯ ದೃಷ್ಟಿಯಿಂದ, ಅಭಿವ್ಯಕ್ತಿಯ ದೃಷ್ಟಿಯಿಂದ ಸ್ವಾತಂತ್ರ್ಯ ಯುಗವೆನ್ನಬಹುದಾದ ಶರಣರ ವಚನರಚನೆಯ ಕಾಲದಲ್ಲಿ ಶರಣೆಯರ ಸಾಹಿತ್ಯಿಕ ಸಾಮಾಜಿಕ, ಧಾರ್ಮಿಕ ಸಾಧನೆ ಜಾಗತಿಕ ಸಂದರ್ಭದಲ್ಲಿಯೇ ಅತ್ಯಂತ ಮೌಲಿಕವಾದದ್ದು.

ಪರಾಮರ್ಶನ ಗ್ರಂಥಗಳು

೧. ಡಾ. ವೀರಣ್ಣರಾಜೂರ (ಸಂ.) : ಶಿವಶರಣೆಯರ ವಚನ ಸಂಪುಟ (೫), ೧೯೯೫, ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೨. ಎಸ್.ವಿ.ಪರಮೇಶ್ವರಭಟ್ಟ : ಅಕ್ಕಮಹಾದೇವಿ ೧೯೮೭, ನಾಲ್ಕನೆ ಮುದ್ರಣ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು

೩. ಓ.ಎಲ್.ನಾಗಭೂಷಣಸ್ವಾಮಿ (ಸಂ.) : ಸಾವಿರ ವಚನ ೨೦೦೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ಅಕ್ಕಮಹಾದೇವಿ : ಡಾ. ಬಿ.ಎನ್.ಸುಮಿತ್ರಾಬಾಯಿ ೧೯೯೭, ಅಖಿಲಭಾರತ ಶರಣ ಸಾಹಿತ್ಯ ಪರಿಷತ್, ಬೆಂಗಳೂರು

೫. ಡಾ. ಮ.ನ.ಜವರಯ್ಯ : ದಲಿತವರ್ಗದ ಶರಣರು ಮತ್ತು ಶರಣೆಯರು ಒಂದು ಅಧ್ಯಯನ, ೧೯೯೭, ಸಿದ್ಧಾರ್ಥ ಗ್ರಂಥಮಾಲೆ, ಕುವೆಂಪುನಗರ, ಮೈಸೂರು

೬. ಡಾ. ಎಲ್.ಹನುಮಂತಯ್ಯ (ಸಂ.) : ಕೆಳವರ್ಗದ ವಚನಕಾರರು ೧೯೯೮, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು

೭. ಡಾ. ಚೆನ್ನಕ್ಕ ಪಾವಟಿ : ಶರಣ ಸುಪ್ರಭೆ ೨೦೦೭, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು.

೮. ಜಗದಾಂಬಾ ಮಲ್ಲೇದೇವರು : ಮುಕ್ತ್ಯಂಗನೆಯರು, ೨೦೦೫, ಸಂವಹನ, ಮೈಸೂರು

೯. ರಂಜಾನ್ ದರ್ಗಾ : ಬಸವಧರ್ಮದ ವಿಶ್ವಸಂದೇಶ ೨೦೦೭, ಲೋಹಿಯಾ ಪ್ರಕಾಶನ ಬಳ್ಳಾರಿ

೧೦. ಡಾ. ಎಚ್.ಎಲ್.ಪುಷ್ಪ : ವಚನ ಸಾಹಿತ್ಯ ಮತ್ತು ಸ್ತ್ರೀತ್ವದ ಕಲ್ಪನೆ ೨೦೦೫, ಅಕ್ಕ ಪ್ರಕಾಶನ, ಕುಣಿಗಲ್

೧೧. ಕೀರ್ತಿನಾಥ ಕುರ್ತಕೋಟಿ : ಯುಗಧರ್ಮ ಹಾಗೂ ಸಾಹಿತ್ಯದರ್ಶನ ೨೦೦೨, ಮನೋಹರ ಗ್ರಂಥಮಾಲ, ಧಾರವಾಡ

೧೨. ಸೋಮಶೇಖರ್ : ೧೨ನೇ ಶತಮಾನದ ಶರಣ ದಂಪತಿಗಳು ೨೦೦೫, ಸಂವಹನ, ಮೈಸೂರು

೧೩. ಡಾ. ಬಸವರಾಜ ಸಬರದ : ವಚನಸಂಸ್ಕೃತಿ ೨೦೦೭, ಪಲ್ಲವಿ ಪ್ರಕಾಶನ ಗುಲಬರ್ಗಾ

೧೪. ಡಾ. ಎಚ್.ಎಸ್.ಶ್ರೀಮತಿ (ಸಂ.) : ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ ೨೦೦೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೫. ಡಾ. ಶೈಲಜಾ ಉಡಚಣ : ವಚನಕಾರರ ದೃಷ್ಟಿಯಲ್ಲಿ ಸ್ತ್ರೀ
೧೯೯೭, ಗ್ರಿನೋಬಲ್ಸ್ ಪ್ರಕಾಶನ
ಗುಲಬರ್ಗಾ

೧೬. ಡಾ. ಶೈಲಜಾ ಉಡಚಣ : ವಚನಸಾಹಿತ್ಯ ಮತ್ತು ಮಹಿಳೆ,
೧೯೯೭, ಅಖಿಲ ಭಾರತ ಶರಣ ಸಾಹಿತ್ಯ
ಪರಿಷತ್ತು, ಬೆಂಗಳೂರು.

೧೭. ರಹಮತ್ ತರೀಕೆರೆ (ಸಂ.) : ಅಕ್ಕಮಹಾದೇವಿ ವಚನಗಳು
೨೦೦೫, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

೧೮. ಡಾ. ಚೆನ್ನಕ್ಕ ಪಾವಟೆ : ಶರಣರ ಮುತ್ತಿನ ಸತ್ತಿಗೆ
೨೦೦೭, ಅಖಿಲ ಭಾರತ ಶರಣ ಸಾಹಿತ್ಯ
ಪರಿಷತ್ತು, ಮೈಸೂರು

೧೯. ದೇಜಗೌ : ಬಸವ ದರ್ಶನ
೨೦೦೪, ಜಗದ್ಗುರು ಶ್ರೀ ಶಿವರಾತ್ರೀಶ್ವರ
ಗ್ರಂಥಮಾಲೆ, ಮೈಸೂರು

೨೦. ಡಾ. ಬಸವರಾಜ ಸಬರದ : ವಚನಗಳಲ್ಲಿ ವ್ಯಕ್ತಿತ್ವ ವಿಕಾಸ
೨೦೦೩, ಜಗದ್ಗುರು ಶ್ರೀ ಶಿವರಾತ್ರೀಶ್ವರ
ಗ್ರಂಥಮಾಲೆ, ಮೈಸೂರು

೨೧. ಡಾ. ವಿಜಯಕುಮಾರ ಮಹಾನುಭಾವಿಗಳು : ವಚನಗಳಲ್ಲಿ ಸಜ್ಜನ ಸಂಗ
೨೦೦೩, ಜಗದ್ಗುರು ಶ್ರೀ ಶಿವರಾತ್ರೀಶ್ವರ
ಗ್ರಂಥಮಾಲೆ, ಮೈಸೂರು

೨೨. ರಂ.ಶ್ರೀ.ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ
೨೦೦೮, ಹದಿನೈದನೆಯ ಮುದ್ರಣ
ಗೀತಾಬುಕ್ ಹೌಸ್, ಮೈಸೂರು.

*****

AKSHARA GRANTHALAYA
ACC.NO.048725

048725